ಸೋಮವಾರ, ಅಕ್ಟೋಬರ್ 6, 2025| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಘುರಾಮ್‌ಗೆ ಸನ್ಮಾನ



ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಖಜಾಂಚಿಯಾಗಿ ನೇಮಕಗೊಂಡ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಅವರನ್ನು ಭಾನುವಾರ ಬೆಂಗಳೂರಿನಲ್ಲಿ ಸನ್ಮಾನಿಸಲಾಯಿತು

ವಿಕ್ರಾಂತ್ ಸಮರಾಭ್ಯಾಸ



ಮುಂಬೈ ಕರಾವಳಿಯಲ್ಲಿ ಭಾನುವಾರ ನಡೆದ ಭಾರತ ಮತ್ತು ಬ್ರಿಟನ್ ಯುದ್ಧ ವಿಮಾನ ವಾಹಕ ನೌಕೆಗಳ ಸಮರಾಭ್ಯಾಸದಲ್ಲಿ ಐಎನ್‌ಎಸ್ ವಿಕ್ರಾಂತ್ ಪಾಲ್ಗೊಂಡಿತ್ತು.

ವೈಯಕ್ತಿಕ ಮಾಹಿತಿ ಕೇಳಬೇಡಿ: ಡಿಕೆಶಿ

ಬೆಂಗಳೂರು: 'ನಾಗರಿಕರ ಬಳಿ ಕೋಳಿ, ಕುರಿ, ಒಡವೆ, ವಾಷಿಂಗ್ ಮಷಿನ್, ಫ್ರಿಜ್ ಹೀಗೆ ವೈಯಕ್ತಿಕ ಮಾಹಿತಿಗಳನ್ನು ಕೇಳಲು ಹೋಗಬೇಡಿ' ಎಂದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾರರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಸಮೀಕ್ಷೆಗಾರರು ಏನು ಮಾಡುತ್ತಾರೋ ಗೊತ್ತಿಲ್ಲ' ಎಂದರು.

'ಯಾರು ಏನೇ ಆಕ್ಷೇಪ ಮಾಡಿದರೂ ಸಮೀಕ್ಷೆ ನಡೆಯುತ್ತದೆ. ಇಷ್ಟವಿದ್ದ ಪ್ರಶ್ನೆಗೆ ಉತ್ತರಿಸಿ, ಇಲ್ಲದಿದ್ದರೆ ಬೇಡ ಎಂದು ನ್ಯಾಯಾಲಯವೇ ಹೇಳಿದೆ. ಸಮೀಕ್ಷೆಗೆ ವಿರೋಧ ಮಾಡುವುದು ಸರಿಯಲ್ಲ' ಎಂದರು.

'ಈ ಹಿಂದಿನ ಸಮೀಕ್ಷೆ ಸರಿಯಿಲ್ಲ ಎಂಬ ಕಾರಣಕ್ಕೆ ಹೊಸದಾಗಿ ಸಮೀಕ್ಷೆ ಮಾಡಲಾಗುತ್ತಿದೆ. ಎಲ್ಲರೂ ಸಹಕರಿಸಬೇಕು' ಎಂದು ಕೋರಿದರು.

'ಎರಡು ಮೂರು ದಿನಗಳಲ್ಲಿ ಸಮೀಕ್ಷೆ ಮುಗಿಯಬಹುದೇ' ಎಂಬ ಪ್ರಶ್ನೆಗೆ, 'ಈ ಬಗ್ಗೆ ಹಿಂದುಳಿದ ವರ್ಗಗಳ ಆಯೋಗದವರು ಯೋಚನೆ ಮಾಡುತ್ತಾರೆ' ಎಂದೂ ಹೇಳಿದರು.

1.09 ಕೋಟಿ ಮನೆಗಳ ಸಮೀಕ್ಷೆ ಪೂರ್ಣ

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ • ಕೊಪ್ಪಳ ಪ್ರಥಮ, ಹಾವೇರಿಗೆ ಎರಡನೇ ಸ್ಥಾನ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ರಾಜ್ಯದ 1.09 ಕೋಟಿ ಮನೆಗಳ ಸಮೀಕ್ಷೆ (ಶೇ 75.96) ಪೂರ್ಣಗೊಂಡಿದ್ದು, 34.55 ಲಕ್ಷ ಮನೆಗಳ ಸಮೀಕ್ಷೆ ಬಾಕಿ ಇದೆ.

ಸಮೀಕ್ಷೆಗೆ ನಿಗದಿತ ಗುರಿ ಸಾಧನೆಯಲ್ಲಿ ಕೊಪ್ಪಳ ಜಿಲ್ಲೆ (ಶೇ 96.42) ಪ್ರಥಮ ಸ್ಥಾನದಲ್ಲಿದ್ದು, ಹಾವೇರಿ ಜಿಲ್ಲೆ (ಶೇ 95.88) 2ನೇ ಹಾಗೂ ರಾಯಚೂರು ಜಿಲ್ಲೆ (92.71) 3ನೇ ಸ್ಥಾನದಲ್ಲಿದೆ. ರಾಜ್ಯದ ರಾಜಧಾನಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ 32.64ರಷ್ಟು ಮಾತ್ರ ಗುರಿ ಸಾಧನೆಯಾಗಿದ್ದು, ಕಡೇ ಸ್ಥಾನದಲ್ಲಿದೆ.

ಭಾನುವಾರ ಸಂಜೆ 6 ಗಂಟೆವರೆಗಿನ ಅಂಕಿ–ಅಂಶದ ಮಾಹಿತಿ ಪ್ರಕಾರ, ಕೊಪ್ಪಳ ಜಿಲ್ಲೆಯ 3.19 ಲಕ್ಷ ಮನೆಗಳ ಪೈಕಿ, 3.07 ಲಕ್ಷ ಮನೆಗಳ ಸಮೀಕ್ಷೆ ಪೂರ್ಣಗೊಂಡಿದೆ. ಹಾವೇರಿ ಜಿಲ್ಲೆಯ ಜಿಲ್ಲೆಯ 4.12 ಲಕ್ಷಗಳ ಮನೆಗಳ ಪೈಕಿ 3.95 ಲಕ್ಷ ಮನೆಗಳ ಸಮೀಕ್ಷೆ ಮುಕ್ತಾಯಗೊಂಡಿದೆ.

ಸೆ. 22ರಿಂದ ಅಕ್ಟೋಬರ್ 4ರವರೆಗೂ ಸಮೀಕ್ಷೆ ಗುರಿ ಸಾಧನೆಯಲ್ಲಿ ಹಾವೇರಿ ಮೊದಲ ಸ್ಥಾನದಲ್ಲಿತ್ತು. ಭಾನುವಾರ ಅತ್ಯಧಿಕ ಮನೆಗಳ ಸಮೀಕ್ಷೆ ಮಾಡುವ ಮೂಲಕ ಕೊಪ್ಪಳ ಜಿಲ್ಲೆ ಮೊದಲ ಸ್ಥಾನಕ್ಕೆ ಜಿಗಿದಿದೆ. ಅ.7ರವರೆಗೂ ಸಮೀಕ್ಷೆ ನಡೆಸಲು ಅವಕಾಶವಿದ್ದು, ಎರಡೂ ಜಿಲ್ಲೆಗಳಲ್ಲಿ ಸೋಮವಾರವೇ ಸಮೀಕ್ಷೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದರು.

ಸಮೀಕ್ಷೆ ಮುಗಿಸಿದ ಸಾವಿರ ಶಿಕ್ಷಕರು: ಹಾವೇರಿ ಜಿಲ್ಲೆಯಲ್ಲಿ ನಿಯೋಜಿಸಿದ್ದ ಪ್ರಾಥಮಿಕ ಶಾಲೆಗಳ 3,777 ಶಿಕ್ಷಕರ ಪೈಕಿ, ಸಾವಿರ ಶಿಕ್ಷಕರು ತಮಗೆ ನಿಗದಿಪಡಿಸಿದ್ದ ಸಮೀಕ್ಷೆ ಪೂರ್ಣಗೊಳಿಸಿದ್ದಾರೆ.

'ಶಿಕ್ಷಕರಿಗೆ ತಲಾ 100ರಿಂದ 150 ಮನೆಗಳ ಮಾಹಿತಿ ಸಂಗ್ರಹಿಸುವ ಜವಾಬ್ದಾರಿ ವಹಿಸಲಾಗಿತ್ತು. ಸೆ. 22ರಿಂದ ಅ. 5ರ ಸಂಜೆ ವೇಳೆಗೆ ಶೇ 95.88ರಷ್ಟು ಸಮೀಕ್ಷೆ ಪೂರ್ಣಗೊಳಿಸಿದ್ದಾರೆ' ಎಂದು ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ 'ಪ್ರಜಾವಾಣಿ'ಗೆ ತಿಳಿಸಿದರು.

'ವಿದ್ಯುತ್ ಮೀಟರ್‌ಗಳಿಗೆ ಅಂಟಿಸಿದ್ದ ಸ್ಟಿಕರ್‌ನ ಕ್ಯೂಆರ್ ಕೋಡ್ ಬಳಸಿ ಮನೆಗಳನ್ನು ಗುರುತಿಸಿದ್ದ ಶಿಕ್ಷಕರು, ನಿಗದಿತ 60 ಪ್ರಶ್ನೆಗಳಿಗೂ ಜನರಿಂದ ಉತ್ತರ ಪಡೆದು ಆ್ಯಪ್‌ನಲ್ಲಿ ನಿಖರವಾಗಿ ದಾಖಲಿಸಿದ್ದಾರೆ. ಆಗಾಗ ತಾಂತ್ರಿಕ ಸಮಸ್ಯೆ ಎದುರಾದರೂ, ತ್ವರಿತವಾಗಿ ಬಗೆಹರಿಸಲಾಗಿದೆ' ಎಂದೂ ಹೇಳಿದರು.

'ನಿತ್ಯ 33,275 ಮನೆಗಳ ಸಮೀಕ್ಷೆ ಮಾಡುವ ಗುರಿ ಇಟ್ಟುಕೊಳ್ಳಲಾಗಿತ್ತು. ಅಕ್ಟೋಬರ್ 5ರಂದು ಒಂದೇ ದಿನದಲ್ಲಿ 12,306 ಮನೆಗಳ ಸಮೀಕ್ಷೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ಅಂಕಿ ಅಂಶಗಳು

1,43,77,978 ರಾಜ್ಯದಲ್ಲಿರುವ ಮನೆಗಳು (ವಿದ್ಯುತ್ ಮೀಟರ್ ಆಧಾರ)

1,09,22,107 ಸಮೀಕ್ಷೆ ಪೂರ್ಣಗೊಂಡ ಮನೆಗಳು



ಹಾವೇರಿ ನಗರದ ಮನೆಯೊಂದರಲ್ಲಿ ಸಮೀಕ್ಷಕರೊಬ್ಬರು ಕುಟುಂಬದ ಸದಸ್ಯರ ವಿವರ ಪಡೆದರು

ಸುದ್ದಿ 2 ನಿಮಿಷ

'ಹಿಂದೂ ಧರ್ಮ ಒಡೆಯುವ ಯತ್ನ'


ಮೈಸೂರು: 'ವೀರಶೈವ ಲಿಂಗಾಯತ ಸಮಾಜ ವಿಭಜಿಸುವ, ಹಿಂದೂ ಧರ್ಮವನ್ನು ಒಡೆಯುವ ದುಸ್ಸಾಹಸದ ಕೆಲಸ ನಡೆಯುತ್ತಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಭಾನುವಾರ ಇಲ್ಲಿನ ಕೆ.ಆರ್.ಮೊಹಲ್ಲಾದ ಹಲ್ದಿನಮಠದಲ್ಲಿ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜಕಾರಣದಲ್ಲಿ ಧರ್ಮ ಇರಬೇಕು. ಆದರೆ, ಕೆಲವರು ಧರ್ಮದಲ್ಲಿ ರಾಜಕಾರಣ ತಂದು ಷಡ್ಯಂತ್ರ ನಡೆಸುತ್ತಿದ್ದಾರೆ. ಇಂದು ವೀರಶೈವ ಲಿಂಗಾಯತ ಸಮಾಜಕ್ಕೆ ಹಿನ್ನಡೆಯಾಗುತ್ತಿದ್ದರೂ ಪುಟಿದೇಳಲಿದೆ. ಇತರ ಸಮುದಾಯಗಳಿಗೂ ಆಶ್ರಯ ನೀಡಿ ಹಿಂದೂ ಸಮಾಜವನ್ನು ಸುಭದ್ರಗೊಳಿಸಲಿದೆ' ಎಂದರು.

'ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿ, ಪ್ರವಾಹದಿಂದ ಶೇ 80ರಷ್ಟು ಬೆಳೆ ಹಾನಿಯಾಗಿದೆ. ಪರಿಹಾರಕ್ಕಾಗಿ ಆಗ್ರಹಿಸಬೇಕಿದ್ದ ರೈತ ಸಂಘಟನೆಗಳು ಧ್ವನಿ ಕಳೆದುಕೊಂಡಿವೆ' ಎಂದೂ ಹೇಳಿದರು.

'ಬಿ.ಎಸ್.ಯಡಿಯೂರಪ್ಪ ಅವರು ಸಿ.ಎಂ ಆಗಿದ್ದಾಗಲೂ ಐತಿಹಾಸಿಕ ಹೋರಾಟ ಸ್ಥಿತಿ ಮೂಡಿತ್ತು. ಅಂದು ಸಚಿವ ಸಂಪುಟ ಪೂರ್ಣ ರಚನೆ ಆಗಿರದಿದ್ದರೂ ಏಕಾಂಗಿಯಾಗಿ ರೈತರ ಬೆಂಬಲಕ್ಕೆ ನಿಂತಿದ್ದರು' ಎಂದರು.



'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಉದಾರವಾಗಿ ರೈತರಿಗೆ ಸ್ಪಂದಿಸಬೇಕು. ಸಂಕಷ್ಟದಲ್ಲಿರುವ ರೈತರ ಬೆಂಬಲಕ್ಕೆ ಮಠಗಳು ನಿಲ್ಲಬೇಕು' ಎಂದು ಕೋರಿದರು.

ಜನರನ್ನೇ ಕರೆತಂದು ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಯಳಂದೂರು (ಚಾಮರಾಜನಗರ ಜಿಲ್ಲೆ): ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ತಾಲ್ಲೂಕಿನ ಬಿಳಿಗಿರಿರಂಗ ನಬೆಟ್ಟದ ಸುತ್ತಲಿನ ಪೋಡುಗಳಲ್ಲಿ ನೆಟ್‌ವರ್ಕ್ ಸಮಸ್ಯೆ ಎದುರಾಗಿದೆ. ಪರಿಣಾಮ, ಭಾನುವಾರ ಅಲ್ಲಿನ ಜನರನ್ನು ಬೆಟ್ಟದ ಹಾಡಿಯೊಂದಕ್ಕೆ ಕರೆತಂದು ಸಮೀಕ್ಷೆ ನಡೆಸಲಾಗುತ್ತಿದೆ.

ಬನದ ಸುತ್ತಲಿನ ಹತ್ತಾರು ಹಾಡಿಗಳಲ್ಲಿ ಸಾವಿರಕ್ಕೂ ಹೆಚ್ಚು ಕುಟುಂಬಗಳಿವೆ. ಎತ್ತರದ ಸ್ಥಳದಲ್ಲಿ ನೆಟ್‌ವರ್ಕ್ ಸಿಗುತ್ತದೆ. ದಟ್ಟ ಅರಣ್ಯದಲ್ಲಿ ಸಿಗ್ನಲ್ ಸಿಗುತ್ತಿಲ್ಲ. ಇದರಿಂದಾಗಿ ಸಮೀಕ್ಷೆ ಕುಂಟುತ್ತಿದೆ. ಆದ್ದರಿಂದ, ತಾಲ್ಲೂಕು ಆಡಳಿತ ಹಲವು ಇಲಾಖೆಗಳ ವಾಹನಗಳನ್ನು ಬಳಸಿಕೊಂಡು ಗುಣಮಟ್ಟದ ನೆಟ್‌ವರ್ಕ್ ಸಿಗುವ ಸ್ಥಳಕ್ಕೆ ಜನರನ್ನು ಕರೆತಂದು ಸಮೀಕ್ಷೆ ನಡೆಸುತ್ತಿದೆ.

'ಪುರಾಣಿಪೋಡಿನಲ್ಲಿ 160 ಕುಟುಂಬಗಳ ಸಮೀಕ್ಷೆ ನಡೆಸಬೇಕಿದೆ. ನೆಟ್‌ವರ್ಕ್ ಸಮರ್ಪಕವಾಗಿಲ್ಲದ ಕಾರಣದಿಂದ, ಶೇ 50 ರಷ್ಟು ಪೂರ್ಣಗೊಂಡಿಲ್ಲ. ಆದ್ದರಿಂದ, ಜನರನ್ನು ನೆಟ್‌ವರ್ಕ್ ಸಿಗುವ ಎರಕನಗದ್ದೆ ಸಮೀಪಕ್ಕೆ ಕರೆಸಿ ಸಮೀಕ್ಷೆ ನಡೆಸಲಾಗುತ್ತಿದೆ' ಎಂದು ಸಮೀಕ್ಷಕರು ತಿಳಿಸಿದರು.

'ಅ.7ರೊಳಗೆ ಸಮೀಕ್ಷೆ ಮುಗಿಸಲು ಕ್ರಮಕೈಗೊಳ್ಳಲಾಗುತ್ತಿದೆ' ಎಂದು ತಹಶೀಲ್ದಾರ್ ಎಸ್.ಎನ್.ನಯನಾ ಪ್ರತಿಕ್ರಿಯಿಸಿದರು.



ಪುರಾಣಿಪೋಡು ಗ್ರಾಮಕ್ಕೆ ಎಸ್.ಎನ್. ನಯನಾ ಭೇಟಿ ನೀಡಿದರು

ಸಮೀಕ್ಷೆ ಜತೆಗೆ ಜಾಗೃತಿ ಮೂಡಿಸುತ್ತಿರುವ ಸರ್ಕಾರಿ ಶಾಲೆ ಶಿಕ್ಷಕ ವಿಜಯಕುಮಾರ

ಶಾಲೆಗೆ ಮಕ್ಕಳ ಸೇರಿಸಲು ಅಭಿಯಾನ

• ಚಂದ್ರು ಎಂ. ರಾಥೋಡ್

ನರೇಗಲ್ (ಗದಗ ಜಿಲ್ಲೆ): ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಜತೆಗೆ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವಂತೆ ಜಾಗೃತಿ ಮೂಡಿಸಿ, ಪಟ್ಟಣದ ಒಂದನೇ ವಾರ್ಡ್‌ನ ಕೋಚಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ವಿಜಯ ಕುಮಾರ ಡಿ.ಆರ್. ಗಮನ ಸೆಳೆದಿದ್ದಾರೆ.




ವಿಜಯ ಕುಮಾರ

ಕೋಚಲಾಪುರದಲ್ಲಿ 104 ಮನೆಗಳ ಸಮೀಕ್ಷೆಗೆ ನಿಯೋಜನೆಗೊಂಡಿದ್ದ ಅವರು, 'ಮಾಹಿತಿ ನೀಡಿದ್ದಕ್ಕೆ ಧನ್ಯವಾದಗಳು. ದಯವಿಟ್ಟು ಮಗುವನ್ನು ನಮ್ಮೂರಿನ ಸರ್ಕಾರಿ ಶಾಲೆಗೆ ಸೇರಿಸಿ. ನಾವು–ನೀವು ಕಲಿತ ದೇಗುಲ ಸರ್ಕಾರಿ ಶಾಲೆ ಅಲ್ಲವೇ...' ಎಂಬ ಸ್ಟಿಕ್ಕರ್ ಅನ್ನು ಗಣತಿ ಮಾಡಿದ ಪ್ರತಿ ಮನೆಗೆ ಅಂಟಿಸಿದ್ದಾರೆ.

ತಮಗೆ ಹಂಚಿಕೆಯಾಗಿದ್ದ ಮನೆಗಳ ಜತೆಗೆ ಹೆಚ್ಚುವರಿ 74 ಮನೆ ಬಾಗಿಲಿಗೂ ಸ್ಟಿಕ್ಕರ್ ಅಂಟಿಸಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಸಿಗುವ ಗುಣಾತ್ಮಕ ಶಿಕ್ಷಣ, ಸರ್ಕಾರದ ಸೌಲಭ್ಯಗಳ ಮಾಹಿತಿ ನೀಡಿದ್ದಾರೆ.

ಸಮೀಕ್ಷೆ ಕಾರ್ಯದ ಜತೆಗೆ ಮಕ್ಕಳ ಮಾಹಿತಿ, ಅವರ ಶಿಕ್ಷಣ ಹಾಗೂ 1ನೇ ತರಗತಿಗೆ ಪ್ರವೇಶ ಪಡೆಯಲು ಸಿದ್ಧರಿರುವ ಮಕ್ಕಳ ಮಾಹಿತಿ ಸಂಗ್ರಹಿಸಿ, ಸರ್ಕಾರಿ ಶಾಲೆ ಉಳಿವಿಗೆ ಜನಜಾಗೃತಿಗೆ ಮೂಡಿಸುತ್ತಿರುವ ಶಿಕ್ಷಕನ ಕಾರ್ಯಕ್ಕೆ ಗ್ರಾಮಸ್ಥರು, ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕೆಲವರು ಮುಂದಿನ ವರ್ಷ ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸುವುದಾಗಿ ವಾಗ್ದಾನ ಮಾಡಿದ್ದಾರೆ.

'ಸರ್ಕಾರ ಹೇಳಿದಾಗ ಮಾಡುವ ಆಂದೋಲನದಲ್ಲಿ ಮಕ್ಕಳ ಮಾಹಿತಿ ಸರಿಯಾಗಿ ಸಿಗುವುದಿಲ್ಲ. ಸಮೀಕ್ಷೆ ವೇಳೆ ಪ್ರತಿ ಮನೆಗೆ ಖುದ್ದಾಗಿ ಭೇಟಿ ನೀಡುವಾಗ ಕುಟುಂಬದ ಮಾಹಿತಿ ದೊರೆಯುತ್ತಿದೆ. ಅದರ ಸದುಪಯೋಗ ಪಡೆದು ಹಾಗೂ ಪಾಲಕರಿಗೆ ಸರ್ಕಾರಿ ಶಾಲೆಯ ಬಗ್ಗೆ ಮನವರಿಕೆ ಮಾಡಿ ಕೊಡಲು ಪ್ರಯತ್ನ ಪಟ್ಟಿದ್ದೇನೆ' ಎಂದು ಶಿಕ್ಷಕ ವಿಜಯಕುಮಾರ ಡಿ.ಆರ್. ತಿಳಿಸಿದ್ದಾರೆ.



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗಿಯಾಗಿ ಮಾಹಿತಿ ಒದಗಿಸಿದ್ದಕ್ಕಾಗಿ ತಮಗೆ ಧನ್ಯವಾದಗಳು..
ದಯವಿಟ್ಟು ನಿಮ್ಮ ಮಗುವನ್ನು ನಮ್ಮೂರಿನ ಸರಕಾರಿ ಶಾಲೆಗೆ ಸೇರಿಸಿ
ನಾವು ನೀವು ಕಲಿತ ದೇಗುಲ ಸರಕಾರಿ ಶಾಲೆ ಅಲ್ಲವೇ..
ಧನ್ಯವಾದಗಳು
ಶಿಕ್ಷಕರು/ಗಣತಿದಾರರು ಕೋಚಲಾಪುರ.ತಾ/ಗಜೇಂದ್ರಗಡ.ಜಿಲ್ಲಾ. ಗದಗ

ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ ಎಂಬ ಮುದ್ರಿತ ಬರಹ

ಮಕ್ಕಳನ್ನು ಸೇರಿಸುವ ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು ಎಂದು ಸ್ವಯಂಪ್ರೇರಿತರಾಗಿ ಸಮೀಕ್ಷೆ ವೇಳೆ ಸ್ಟಿಕರ್ ಅಂಟಿಸಿ ಜಾಗೃತಿ ಮೂಡಿಸಿದ ಶಿಕ್ಷಕರ ಕಾರ್ಯ ಶ್ಲಾಘನೀಯ

ಆರ್.ಎಸ್.ಬುರುಡಿ, ಡಿಡಿಪಿಐ, ಗದಗ

ಮೇಲ್ಜಾತಿಗಳನ್ನು ತುಳಿಯಲು ಸಮೀಕ್ಷೆ: ಸೋಮಣ್ಣ

ಬೆಂಗಳೂರು: 'ಮೇಲ್ಜಾತಿಗಳನ್ನು ತುಳಿಯುವ ಸಲುವಾಗಿ ಜಾತಿವಾರು ಸಮೀಕ್ಷೆ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಸರ್ಕಾರ ತಕ್ಷಣವೇ ಈ ಸಮೀಕ್ಷೆಯನ್ನು ನಿಲ್ಲಿಸಬೇಕು' ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಸಮೀಕ್ಷಕರು ನಮ್ಮ ಮನೆಗೂ ಬಂದಿದ್ದರು. ನನ್ನೊಬ್ಬನಿಂದ ಮಾಹಿತಿ ಪಡೆಯಲು 1 ಗಂಟೆ 4 ನಿಮಿಷ ಬೇಕಾಯಿತು. ತಾಂತ್ರಿಕ ಸಮಸ್ಯೆ ಒಂದೆಡೆಯಾದರೆ, ಅನಗತ್ಯವಾದ ಪ್ರಶ್ನೆಗಳು ಒಂದೆಡೆ. ಅಗತ್ಯವಿಲ್ಲದೆ ಪ್ರಶ್ನೆಗಳನ್ನು ಏಕೆ ಕೇಳುತ್ತಿದ್ದೀರಿ' ಎಂದು ಪ್ರಶ್ನಿಸಿದರು.

'ಮೇಲ್ಜಾತಿ ಅಥವಾ ಯಾವುದೋ ಜಾತಿಗಳನ್ನು ತುಳಿಯುವ ಸಲುವಾಗಿ ಇಷ್ಟೆಲ್ಲಾ ಅಸಹ್ಯಕರವಾದ ಸಮೀಕ್ಷೆಯನ್ನು ನಡೆಸುತ್ತಿದ್ದಾರೆ. ಸಮೀಕ್ಷೆ ಬಗ್ಗೆ ಅಧಿಕಾರಿಗಳಿಗೇ ಪೂರ್ಣ ಮಾಹಿತಿ ಇಲ್ಲ. ಇದು ಇನ್ನೊಂದು ಕಾಂತರಾಜ ಆಯೋಗದ ಸಮೀಕ್ಷೆಯಂತಾಗುತ್ತದೆ. ಈ ಎಲ್ಲ ಗೊಂದಲಗಳಿಗೆ ತೆರೆ ಎಳೆಯಬೇಕು' ಎಂದು ಹೇಳಿದರು.

'ಅತ್ಯಂತ ಅವೈಜ್ಞಾನಿಕವಾಗಿ ಈ ಸಮೀಕ್ಷೆ ನಡೆಸಲಾಗುತ್ತಿದೆ. ಆರು ತಿಂಗಳು–ವರ್ಷವಾದರೂ ಸಮೀಕ್ಷೆ ಮುಗಿಯುವುದಿಲ್ಲ' ಎಂದರು.

ಚಿಟಿಕೆ ಸುದ್ದಿ

ಧಾರ್ಮಿಕ ಭಾವನೆಗೆ ಧಕ್ಕೆ ತರುವ ಪೋಸ್ಟ್: ಬಂಧನ



ಜೇವರ್ಗಿ (ಕಲಬುರಗಿ ಜಿಲ್ಲೆ): ಪವಿತ್ರ ಧಾರ್ಮಿಕ ಸ್ಥಳ ಮೆಕ್ಕಾ, ಮದೀನಾ ಮಸೀದಿ ಹಾಗೂ ಕಾಬಾ ಕುರಿತು ಮುಸಲ್ಮಾನರ ಭಾವನೆಗಳಿಗೆ ಧಕ್ಕೆ ಆಗುವಂತೆ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ಯುವಕ, ಯಡ್ರಾಮಿ ತಾಲ್ಲೂಕಿನ ಇಜೇರಿಯ ಆನಂದ ಗುತ್ತೇದಾರ (22) ನನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿಯು ಆಕ್ಷೇಪಾರ್ಹ ಪೋಸ್ಟ್ ಜೊತೆಗೆ ಹಿಂದಿಯಲ್ಲಿ ಭಾಷೆಯಲ್ಲಿ 'ಸನಾತನಿ ಹೋ ತೋ ಕಮೆಂಟ್ ಮೆ ಲಿಕೋ ಜೈ ಶ್ರೀರಾಮ' ಅಂತ ಬರೆದಿದ್ದರು' ಎಂದು ಆರೋಪಿಸಿ ಸೈಯದ್ ಪಟೇಲ್ ಕಾಲೇಗೌಡಾ ಅವರು ಪೊಲೀಸರಿಗೆ ದೂರು ನೀಡಿದ್ದರು. ಜೇವರ್ಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ: ಮುಸಲ್ಮಾನರ ಧಾರ್ಮಿಕ ಸ್ಥಳಗಳಿಗೆ ಅವಮಾನ ಮಾಡಿದವರನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ಮುಸ್ಲಿಮರು ಶನಿವಾರ ರಾತ್ರಿ ನಗರದಲ್ಲಿ ಪ್ರತಿಭಟನೆ ನಡೆಸಿದ್ದರು.

ಪರಿಶಿಷ್ಟ ಪಂಗಡ ಪಟ್ಟಿಗೆ ಕೋಲಿ ಸಮಾಜ: ಒತ್ತಾಯ

ಕಲಬುರಗಿ: ಕೋಲಿ, ಕಬ್ಬಲಿಗ ಹಾಗೂ ತಳವಾಳ ಸಮಾಜಗಳವರು ಒಗ್ಗಟ್ಟಾಗಬೇಕು ಮತ್ತು ಪಕ್ಷಭೇದ ಮರೆತು ಹೋರಾಟ ರೂಪಿಸಬೇಕು ಎಂದು ಇಲ್ಲಿ ನಡೆದ ಸಭೆ ಭಾನುವಾರ ನಿರ್ಣಯ ಅಂಗೀಕರಿಸಿದೆ.

ಕರ್ನಾಟಕ ರಾಜ್ಯ ಕೋಲಿ ಕಬ್ಬಲಿಗ ಎಸ್.ಟಿ. ಹೋರಾಟ ಸಮಿತಿ ಇಲ್ಲಿ ಏರ್ಪಡಿಸಿದ್ದ ಸಭೆಯು, ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಮತ್ತು ಮೊಗವೀರ ಪದಗಳನ್ನು ಎಸ್‌ಟಿಗೆ ಸೇರಿಸಲು ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿತು.

ಎಸ್‌ಟಿ ಮತ್ತು ಸಿಂಧುತ್ವ ಪ್ರಮಾಣಪತ್ರ ನೀಡುವಲ್ಲಿ ಆದ ಅನ್ಯಾಯದ ವಿರುದ್ಧ ಹೋರಾಟ ರೂಪಿಸಲು ಹಾಗೂ ನಿಜಶರಣ ಅಂಬಿಗರ ಚೌಡಯ್ಯನವರ ಬಗ್ಗೆ ಯಾದಗಿರಿ ಜಿಲ್ಲೆಯಲ್ಲಿ ಹಗುರವಾಗಿ ಮಾತನಾಡಿದ ಕಿಡಿಗೇಡಿಗಳನ್ನು ಬಂಧಿಸಿ ಗಡಿಪಾರು ಮಾಡುವಂತೆ ಒತ್ತಾಯಿಸಲು ಈ ಸಭೆ ಕರೆಯಲಾಗಿತ್ತು.

ಸಭೆ ಉದ್ಘಾಟಿಸಿದ ಮೇಲ್ಮನೆ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, 'ನಮ್ಮ ಸಮಾಜವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿದೆ. ಈವರೆಗೆ ಎಸ್‌ಟಿಗೆ ಸೇರ್ಪಡೆಯಾಗಿಲ್ಲ' ಎಂದರು.

'ಸ್ಥಳೀಯವಾಗಿ ಹೋರಾಟ ನಡೆಸಿ. ಬೇಡಿಕೆಗೆ ಸ್ಪಂದಿಸದಿದ್ದರೆ ಬೆಂಗಳೂರಿನಲ್ಲಿ ಒಗ್ಗೂಡಿ ಹೋರಾಟ ಮಾಡೋಣ. ಸಮಾಜಕ್ಕಾಗಿ ರಾಜೀನಾಮೆ ನೀಡಲು ಸಿದ್ಧ' ಎಂದರು.

ಆರ್‌ಎಸ್‌ಎಸ್ ಶತಾಬ್ದಿ: ಪಥಸಂಚಲನ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜಗದೀಶ ಶೆಟ್ಟರ್, ಮಹೇಶ ಟೆಂಗಿನಕಾಯಿ ಭಾಗಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಶತಾಬ್ದಿ ವರ್ಷ ಹಾಗೂ ವಿಜಯದಶಮಿ ಪ್ರಯುಕ್ತ ಸಂಘದ ಹುಬ್ಬಳ್ಳಿ ಮಹಾನಗರ ಘಟಕದ ವತಿಯಿಂದ ನಗರದಲ್ಲಿ ಭಾನುವಾರ ಗಣವೇಷಧಾರಿಗಳ ಆಕರ್ಷಕ ಪಥಸಂಚಲನ ನಡೆಯಿತು.

ನೆಹರೂ ಮೈದಾನದಿಂದ ಎರಡು ತಂಡಗಳಾಗಿ ಪಥಸಂಚಲನ ಆರಂಭವಾಯಿತು. ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿದ ತಂಡಗಳು, ದುರ್ಗದಬೈಲ್ ವೃತ್ತದಲ್ಲಿ ಸಂಗಮಗೊಂಡು, ಅಲ್ಲಿಂದ ನೆಹರೂ ಮೈದಾನಕ್ಕೆ ಮರಳಿತು. ಹತ್ತು ಸಾವಿರಕ್ಕೂ ಅಧಿಕ ಸ್ವಯಂಸೇವಕರು ಪಾಲ್ಗೊಂಡಿದ್ದರು.

ಪಥಸಂಚಲನದ ಮಾರ್ಗದಲ್ಲಿ ರಂಗೋಲಿ ಬಿಡಿಸಿ ಸಿಂಗರಿಸಿದ್ದರು. ಗಣವೇಷಧಾರಿಗಳು ಬರುತ್ತಿದ್ದಂತೆ ರಸ್ತೆ ಎರಡೂ ಬದಿ ನಿಂತು ಹೂವು ಎರಚಿ, 'ಜೈ ಭಾರತ ಮಾತೆ' ಘೋಷಣೆ ಕೂಗಿದರು.



ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ ಸಂಘದ ಗಣವೇಷಧಾರಿಗಳ ಪಥಸಂಚಲನದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ್, ಶಾಸಕ ಮಹೇಶ ಟೆಂಗಿನಕಾಯಿ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್, ಮುಖಂಡ ಶಂಕರಪಾಟೀಲ ಮುನೇನಕೊಪ್ಪ ಸೇರಿ ಅನೇಕ ಗಣ್ಯರು ಗಣವೇಷಧಾರಿಗಳಾಗಿ ಪಥಸಂಚಲನದಲ್ಲಿ ಪಾಲ್ಗೊಂಡಿದ್ದರು.

ಬಳಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಆರ್‌ಎಸ್‌ಎಸ್ ದೆಹಲಿ ಕೇಂದ್ರದ ಸಹ ಸರಕಾರ್ಯವಾಹ ಕೃಷ್ಣಗೋಪಾಲ, 'ಮಾದರಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಆರ್‌ಎಸ್‌ಎಸ್ ನಿರಂತರವಾಗಿ ಶ್ರಮಿಸುತ್ತಿದ್ದು, ಸ್ವದೇಶಿ ವಸ್ತುಗಳ ಬಳಕೆ ಹೆಚ್ಚಾಗಬೇಕಿದೆ. ಇದರಿಂದ ಭಾರತದಲ್ಲಿ ತಲೆದೋರಿರುವ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು' ಎಂದರು.

'ಹುಬ್ಬಳ್ಳಿ ಸೇರಿದಂತೆ ದೇಶದಾದ್ಯಂತ ಹಿಂದೂ ಸಮ್ಮೇಳನ ಆಯೋಜಿಸಲು ಸಿದ್ಧತೆ ನಡೆದಿದೆ. ಕಾರ್ಯಕರ್ತರು ಸಂಘದ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿ, ದೇಶದ ಸಂಸ್ಕೃತಿ, ಪರಂಪರೆ ಬಗ್ಗೆ ಜಾಗೃತಿ ಮೂಡಿಸಲಾಗುವುದು' ಎಂದರು.

ಆಸ್ಪತ್ರೆ, ಸಿಡಿಪಿಒ ಕಚೇರಿಗಳಿಗೆ ಬರಲು ಹಿಂದೇಟು

ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಗೆ ಹಿನ್ನಡೆ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಗೆ ಜಿಲ್ಲೆಯಲ್ಲಿ ಹಿನ್ನಡೆಯಾಗಿದೆ. ಸರ್ಕಾರಿ ಆಸ್ಪತ್ರೆ ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಒ) ಕಚೇರಿಗಳಲ್ಲಿ ಪ್ರಕ್ರಿಯೆ ನಡೆದಿದ್ದು, ಹಲವರು ಇಲ್ಲಿಗೆ ಬರಲು ಹಿಂಜರಿಯುತ್ತಿರುವುದು ಹಿನ್ನಡೆಗೆ ಕಾರಣವಾಗಿದೆ.

ಸಮೀಕ್ಷೆಯು ಸೆ.15ರಿಂದ ಆರಂಭಗೊಂಡಿದ್ದು, 45 ದಿನ ನಡೆಯಬೇಕಿದೆ. ಸರ್ಕಾರದ ವಿವಿಧ ಸೌಲಭ್ಯಗಳನ್ನು ಕಲ್ಪಿಸಲು ಅನುವಾಗುವಂತೆ ಲಿಂಗತ್ವ ಅಲ್ಪಸಂಖ್ಯಾತರ ದತ್ತಾಂಶ ಸಂಗ್ರಹಿಸುವುದು ಸಮೀಕ್ಷೆಯ ಉದ್ದೇಶ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಹಿಳಾ ಅಭಿವೃದ್ಧಿ ನಿಗಮದಿಂದ ಸಮೀಕ್ಷೆ ಕೈಗೊಳ್ಳಲಾಗಿದೆ. ಅ.2ರವರೆಗೆ 295 ಜನರು ಸಮೀಕ್ಷೆಗೆ ಸ್ಪಂದಿಸಿದ್ದಾರೆ. ಬೆಳಗಾವಿ, ಚಿಕ್ಕೋಡಿ, ಗೋಕಾಕ, ಬೈಲಹೊಂಗಲ ಹೊರತುಪಡಿಸಿ ಉಳಿದೆಡೆ ನಿರೀಕ್ಷಿತ ಸ್ಪಂದನ ಸಿಕ್ಕಿಲ್ಲ.

ಮನವೊಲಿಸಿದರೂ ಬರುತ್ತಿಲ್ಲ: 'ಬೆಳಗಾವಿ ಜಿಲ್ಲಾ ಆಸ್ಪತ್ರೆ, ಬೆಳಗಾವಿಯ ಸಖಿ ಒನ್ ಸ್ಟಾಪ್ ಸೆಂಟರ್, ಆರು ತಾಲ್ಲೂಕು ಆಸ್ಪತ್ರೆಗಳು, ಮೂರು ಸಿಡಿಪಿಒ ಕಚೇರಿಗಳಲ್ಲಿ ಸಮೀಕ್ಷೆ ನಡೆಯುತ್ತಿದೆ. ಜಿಲ್ಲೆಯಲ್ಲಿ 2 ಸಾವಿರಕ್ಕೂ ಅಧಿಕ ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ.

'ಸಮಾಜಕ್ಕೆ ಹೆದರಿ ಈ ಕಚೇರಿಗಳಿಗೆ ಸಮೀಕ್ಷೆಗೆ ಬರಲು ಹಲವರು ಹಿಂಜರಿಯುತ್ತಿದ್ದಾರೆ. ಮನವೊಲಿಸಿದರೂ ಬರುತ್ತಿಲ್ಲ. ತಾವು ವಾಸವಿರುವ ಸ್ಥಳದ ಸಮೀಪದ ಸರ್ಕಾರಿ ಕಟ್ಟಡದಲ್ಲೇ ಸಮೀಕ್ಷೆಗೆ ವ್ಯವಸ್ಥೆ ಕಲ್ಪಿಸಲು ಪಟ್ಟು ಹಿಡಿದಿದ್ದಾರೆ' ಎಂದು ಹ್ಯೂಮಿನಿಟಿ ಫೌಂಡೇಷನ್ ಸಂಸ್ಥಾಪಕ ತಾನಾಜಿ ಸಾವಂತ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಲ ಲಿಂಗತ್ವ ಅಲ್ಪಸಂಖ್ಯಾತರಿಗೆ ಸಮೀಕ್ಷೆ ಬಗ್ಗೆ ತಪ್ಪುಕಲ್ಪನೆ ಇದೆ. ಹೀಗಾಗಿ ನಿಗದಿತ ಸ್ಥಳಕ್ಕೆ ಬರುತ್ತಿಲ್ಲ. ವಾಸ ಸ್ಥಳದ ಸಮೀಪವೇ ಸಮೀಕ್ಷೆಗೆ ವ್ಯವಸ್ಥೆ ಮಾಡಿದರೆ ಅನುಕೂಲ' ಎಂದು ಸಾವಲಿ ಫೌಂಡೇಷನ್ ಅಧ್ಯಕ್ಷ ದಿನೇಶ ಪಾಟೀಲ ಉರ್ಫ್ ನಿಶಾ ತಿಳಿಸಿದರು.



ಬೆಳಗಾವಿಯ ಸಖಿ ಒನ್ ಸ್ಟಾಪ್ ಸೆಂಟರ್‌ನಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಯಿತು

ಲಿಂಗತ್ವ ಅಲ್ಪಸಂಖ್ಯಾತರು ಸಮೀಕ್ಷೆಗೆ ಆಸ್ಪತ್ರೆ, ಸಿಡಿಪಿಒ ಕಚೇರಿಗೆ ಬರಲು ಒಪ್ಪದಿದ್ದರೆ, ವಾಸ ಸ್ಥಳದ ಸಮೀಪವೇ ವ್ಯವಸ್ಥೆ ಮಾಡಲು ಪ್ರಯತ್ನಿಸುತ್ತೇವೆ

ಎಂ.ಎನ್.ಚೇತನಕುಮಾರ, ಉಪನಿರ್ದೇಶಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಮೀಕ್ಷೆ: ಸಿಎಂ ತವರಲ್ಲಿ ವಿದ್ಯಾರ್ಥಿಗಳ ಬಳಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಕಾರ್ಯಕ್ಕೆ ಕಾಲೇಜು ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿರುವ ಆರೋಪ ಕೇಳಿಬಂದಿದೆ.

ನಗರದ ದೇವರಾಜ ಅರಸು ರಸ್ತೆ ಸಮೀಪದ ಮನೆಗಳಲ್ಲಿ ಸಮೀಕ್ಷೆಗೆ ಬಂದಿದ್ದ ವಿದ್ಯಾರ್ಥಿಗಳನ್ನು ಸ್ಥಳೀಯರು ಪ್ರಶ್ನಿಸಿದ್ದು, ಸಂಬಂಧಿಸಿದ ಸಿಬ್ಬಂದಿಯನ್ನೂ ತರಾಟೆಗೆ ತೆಗೆದುಕೊಂಡಿದ್ದಾರೆ. ಘಟನೆಯ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲೂ ಹರಿಬಿಟ್ಟಿದ್ದಾರೆ.

'ಸಮೀಕ್ಷೆಗೆಂದು ಬಂದ ವಿದ್ಯಾರ್ಥಿಗಳ ಮೊಬೈಲ್ ಫೋನ್‌ನಲ್ಲಿ ಸಮೀಕ್ಷೆ ಆ್ಯಪ್ ಇತ್ತು. ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವುದು, ಅವರಿಗೆ ಸರ್ಕಾರದ ಆ್ಯಪ್ ನೀಡುವುದು ಸರಿಯಲ್ಲ. ಇದು ಸಮೀಕ್ಷೆಯ ಕಾರ್ಯವೈಖರಿಯನ್ನೇ ಪ್ರಶ್ನಿಸುವಂತಿದೆ' ಎಂಬುದು ಸ್ಥಳೀಯರ ಆರೋಪ.

'ಕೆಲ ಶಿಕ್ಷಕರಿಗೆ ಆ್ಯಪ್ ಬಳಕೆ ಗೊತ್ತಿಲ್ಲ. ಅಂಥವರು ವಿದ್ಯಾರ್ಥಿಗಳ ನೆರವು ಪಡೆಯುತ್ತಿದ್ದಾರೆ. ಸಮೀಕ್ಷೆಯನ್ನು ಆದಷ್ಟು ಬೇಗ ಮುಗಿಸುವ ದಾವಂತದಲ್ಲಿ ಇರುವವರೂ ವಿದ್ಯಾರ್ಥಿಗಳ ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡ ಶಿಕ್ಷಕರೊಬ್ಬರು ಮಾಹಿತಿ ನೀಡಿದರು.

ಎಂಟು ಮಂದಿ ಮೇಲೆ ಬೀದಿನಾಯಿ ದಾಳಿ

ಹಾಸನ: ಜಿಲ್ಲೆಯ ಬೇಲೂರಿನಲ್ಲಿ ಭಾನುವಾರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ತೆರಳಿದ್ದ ಶಿಕ್ಷಕಿ, ಅವರ ರಕ್ಷಣೆಗೆ ಬಂದ ಎಂಟು ಜನರ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿವೆ.

ಬಿಎಚ್‌ಪಿಎಸ್ ಶಾಲೆಯ ಶಿಕ್ಷಕಿ ಚಿಕ್ಕಮ್ಮ, ಅವರ ಪತಿ ಶಿವಕುಮಾರ್ ಅವರು ಬೇಲೂರಿನ ಹೊಯ್ಸಳ ನಗರದ ನವೀನ್ ಅವರ ಮನೆಗೆ ತೆರಳಿದ್ದಾಗ ಹತ್ತಕ್ಕೂ ಹೆಚ್ಚು ಬೀದಿ ನಾಯಿಗಳು ದಾಳಿ ಮಾಡಿವೆ.

ಶಿಕ್ಷಕಿ ಚಿಕ್ಕಮ್ಮ ಅವರ ಮುಖ, ಕೈ, ಕಾಲು, ದೇಹದ ಹಲವು ಭಾಗಗಳಿಗೆ ಗಾಯಗಳಾಗಿವೆ. ಎಲ್ಲರಿಗೂ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ವಾಲ್ಮೀಕಿ ಜಯಂತಿ ಬಹಿಷ್ಕಾರಕ್ಕೆ ನಿರ್ಧಾರ

ಹೊಸಪೇಟೆ (ವಿಜಯನಗರ ಜಿಲ್ಲೆ): 'ಪರಿಶಿಷ್ಟ ಪಂಗಡಕ್ಕೆ ಕುರುಬ ಸಮುದಾಯವನ್ನು ಸೇರಿಸುವ ಪ್ರಸ್ತಾವವನ್ನು ರಾಜ್ಯ ಸರ್ಕಾರ ಕೈಬಿಡದ ಕಾರಣ, ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಪಾಲ್ಗೊಳ್ಳಬಾರದು' ಎಂದು ಹೊಸಪೇಟೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಗೋಸಲ ಭರಮಪ್ಪ ಹೇಳಿದರು


'ಸರ್ಕಾರ ನಡೆ ಖಂಡಿಸಿ ಅ.7ರಂದು ನಡೆಯುವ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಬಹಿಷ್ಕರಿಸಲು ನಿರ್ಧರಿಸಲಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹವ್ಯಕ ಮಹಾಸಭಾ ಅಧ್ಯಕ್ಷರಾಗಿ ಗಿರಿಧರ ಕಜೆ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷರಾಗಿ ಡಾ.ಗಿರಿಧರ ಕಜೆ ಅವರು ಹನ್ನೊಂದನೇ ಬಾರಿಗೆ ಪುನರಾಯ್ಕೆ ಆಗಿದ್ದಾರೆ.

ನಗರದಲ್ಲಿ ಭಾನುವಾರ ನಡೆದ ಮಹಾಸಭೆಯ 82ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಈ ಆಯ್ಕೆ ನಡೆಯಿತು.



ಡಾ.ಗಿರಿಧರ ಕಜೆ

ಮಹಾಸಭಾದ ಉಪಾಧ್ಯಕ್ಷರಾಗಿ ಆರ್.ಎಂ.ಹೆಗಡೆ ಬಾಳೆಸರ, ಶ್ರೀಧರ ಜೆ. ಭಟ್ಟ ಕೆಕ್ಕಾರು, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಎ. ವೇಣುವಿಘ್ನೇಶ ಸಂಪ, ಕಾರ್ಯದರ್ಶಿಗಳಾಗಿ ಪ್ರಶಾಂತ ಕುಮಾರ ಜಿ. ಭಟ್ಟ ಮಲವಳ್ಳಿ, ಆದಿತ್ಯ ಹೆಗಡೆ ಕಲಗಾರು, ಕೋಶಾಧಿಕಾರಿಯಾಗಿ ಕೃಷ್ಣಮೂರ್ತಿ ಎಸ್. ಭಟ್ ಯಲಹಂಕ ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ಮಾತನಾಡಿದ ಡಾ.ಕಜೆ, 'ನಾಡಿನ ವಿವಿಧ ಪ್ರಾಂತ್ಯಗಳಲ್ಲಿ ಸಂಸ್ಕಾರೋತ್ಸವವನ್ನು ಆಯೋಜಿಸಲಾಗುವುದು. ಹವ್ಯಕರು ಹೆಚ್ಚಿರುವ ಶಿವಮೊಗ್ಗ, ಉತ್ತರಕನ್ನಡ, ದಕ್ಷಿಣಕನ್ನಡ, ಕೊಡಗು ಮತ್ತು ಕಾಸರಗೋಡು ಭಾಗದಲ್ಲಿ ಸಂಘಟನೆಯನ್ನು ಬಲಪಡಿಸಬೇಕಿದೆ. ಇದಕ್ಕಾಗಿ ಸಿದ್ದಾಪುರ, ಶಿರಸಿ ಮುಂತಾದ ಪ್ರದೇಶದಲ್ಲಿ ಮಹಾಸಭೆಯ ಪ್ರಾದೇಶಿಕ ಕೇಂದ್ರ ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿವೆ' ಎಂದರು.

ರಾಜ್ಯ ರಾಜಕೀಯದಲ್ಲಿ ಅಲ್ಲೋಲ–ಕಲ್ಲೋಲ ಆಗುವುದು ಖಚಿತ: ಬಿ.ವೈ. ವಿಜಯೇಂದ್ರ

'ಬಿಹಾರ ಚುನಾವಣೆ ಬಳಿಕ ಬದಲಾವಣೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಬಿಹಾರ ವಿಧಾನಸಭೆ ಚುನಾವಣೆ ನಂತರ ರಾಜ್ಯ ರಾಜಕೀಯದಲ್ಲಿ ಅಲ್ಲೋಲ– ಕಲ್ಲೋಲ ಆಗುವುದು ಸ್ಪಷ್ಟ, ಬದಲಾವಣೆಯೂ ಖಚಿತ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇಲ್ಲಿ ಭಾನುವಾರ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನಾಯಕತ್ವ ಬದಲಾವಣೆ ಇಲ್ಲ ಎಂದು ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಸೇರಿ ಕಾಂಗ್ರೆಸ್ ವರಿಷ್ಠರು ಎಲ್ಲೂ ಹೇಳಿಲ್ಲ. ಆ ಬಗ್ಗೆ ಚರ್ಚೆ ಬೇಡ ಎಂದಷ್ಟೇ ಹೇಳುತ್ತಿದ್ದಾರೆ. ಅದರರ್ಥ ಬದಲಾವಣೆ ಇದೆ ಎಂದೇ' ಎಂದರು.

'ರಾಜ್ಯ ರಾಜಕಾರಣದಲ್ಲೂ ಆಗಲಿರುವ ಕ್ರಾಂತಿಗೂ, ಈಗ ನಡೆಸುತ್ತಿರುವ ಜಾತಿವಾರು ಸಮೀಕ್ಷೆಗೂ ಸಂಬಂಧ ಇದೆಯೇ ಎಂಬುದು ಕೂಡ ರಾಜ್ಯದಾದ್ಯಂತ ಚರ್ಚೆಯಾಗುತ್ತಿದೆ' ಎಂದು ತಿಳಿಸಿದರು.

ಡಿಕೆಶಿ ನಡೆ ಸಿದ್ದರಾಮಯ್ಯ ಕಡೆ, ಸಿದ್ದರಾಮಯ್ಯ ನಡೆ ಡಿಕೆಶಿ ಕಡೆ ಇದೆ. ಶಾಸಕರು ಮಾತ್ರ ಇವರ ಸಹವಾಸವೇ ಬೇಡ ಎನ್ನುತ್ತಿದ್ದಾರೆ. ಒಟ್ಟಿನಲ್ಲಿ ರಾಜ್ಯ ಕಾಂಗ್ರೆಸ್ ಗೊಂದಲದ ಗೂಡಾಗಿರುವುದು ಸತ್ಯ

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಖರ್ಗೆ, ಡಿಕೆಶಿ ಹಿಂದಿಕ್ಕಿ: 'ಆತುರದಲ್ಲಿರುವ ಸಿದ್ದರಾಮಯ್ಯ ಅವರು, ಇತ್ತೀಚೆಗೆ ಮೈಸೂರಿನಲ್ಲೇ ಶಕ್ತಿ ಪ್ರದರ್ಶಿಸಿದ್ದಾರೆ. ಜನರ ನಡುವೆ ರ್‍ಯಾಂಪ್ ವಾಕ್ ಮಾಡಿದ್ದಾರೆ. ಅಲ್ಲಿ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್ ಅವರಿಗಿಂತಲೂ ಮುಂದೆ ಸಾಗಿದ್ದನ್ನು ಗಮನಿಸಬಹುದು. ಇದೆಲ್ಲದರ ಅರ್ಥವೇನು' ಎಂದು ಪ್ರಶ್ನಿಸಿದರು.

ನಾನೇಕೆ ಸಿಎಂ ಆಗಬಾರದು: ರಾಯರಡ್ಡಿ

ಕೊಪ್ಪಳ: 'ರಾಜ್ಯದಲ್ಲಿ ಸಿ.ಎಂ ಆಗುವ ಆಕಾಂಕ್ಷಿಗಳ ಪಟ್ಟಿಯಲ್ಲಿ ನಾನೂ ಇದ್ದೇನೆ. ನಾನೇಕೆ ಮುಖ್ಯಮಂತ್ರಿ ಆಗಬಾರದು' ಎಂದು ಶಾಸಕ ಬಸವರಾಜ ರಾಯರಡ್ಡಿ ಭಾನುವಾರ ಇಲ್ಲಿ ಪ್ರಶ್ನಿಸಿದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರೂ ಆದ ಅವರು ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ, 'ಸಿದ್ದರಾಮಯ್ಯ ಅವರೇ 5 ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ. ಸದ್ಯಕ್ಕೆ ಆ ಕುರ್ಚಿ ಖಾಲಿಯಿಲ್ಲ. ಡಿ.ಕೆ. ಶಿವಕುಮಾರ್ ಸಿ.ಎಂ. ಆಗಬೇಕು ಎಂದು ಕೆಲವು ಶಾಸಕರು ಹೇಳಿರುವುದರಲ್ಲಿ ತಪ್ಪೇನಿಲ್ಲ' ಎಂದರು.

'ಮಲ್ಲಿಕಾರ್ಜುನ ಖರ್ಗೆ ಅವರಿಗೂ ಸಿ.ಎಂ. ಸ್ಥಾನ ಕೊಟ್ಟರೆ ಸ್ವಾಗತ. ಆದರೆ ಅವರು ಪ್ರಧಾನಿಯಾಗಬೇಕು ಎನ್ನುವುದು ನನ್ನ ಆಸೆ. ನವೆಂಬರ್ ನಂತರ ಸಚಿವ ಸಂಪುಟ ವಿಸ್ತರಣೆ ಸಾಧ್ಯತೆಯಿದೆ' ಎಂದರು.

ಗೊಂದಲ ಸೃಷ್ಟಿ: 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಿರುವ ಮಾತುಗಳನ್ನು ಗಮನಿಸಿದರೆ ಸಮೀಕ್ಷೆಯಲ್ಲಿ ಗೊಂದಲಗಳು ಹೆಚ್ಚಾಗುತ್ತಿರು ವುದು ಅರ್ಥವಾಗುತ್ತದೆ. ಪೂರ್ವತಯಾರಿ ಇಲ್ಲದೇ, ತರಾತುರಿಯಲ್ಲಿ ನಡೆದಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ' ಎಂದರು.

'ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕು ಎಂಬುದು ನಮ್ಮ ಪಕ್ಷದ ನಿಲುವು ಆಗಿದೆ. ಜನಗಣತಿ ಜೊತೆಗೆ ಜಾತಿ ಜನಗಣತಿಯನ್ನೂ ನಡೆಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಈ ನಡುವೆ, ರಾಜ್ಯದಲ್ಲಿ ಗೊಂದಲ ಸೃಷ್ಟಿಸುವ ಅಗತ್ಯವಿರಲಿಲ್ಲ' ಎಂದರು.

ಸಂವಿಧಾನದ ಮೂಲ ಪ್ರತಿಯಲ್ಲಿ ರಾಮನ ಚಿತ್ರ: ಶಾಸಕ ಯತ್ನಾಳ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನದ ಮೂಲಪ್ರತಿ ಮುಖಪುಟದಲ್ಲಿ ರಾಮ, ಲಕ್ಷ್ಮಣ, ಸೀತೆ, ಹನುಮನ ಚಿತ್ರವಿದೆ. ಗೋ ಸಂಪತ್ತು ರಕ್ಷಿಸಬೇಕು ಎಂದು ಸಂವಿಧಾನದಲ್ಲಿಯೇ ಅಡಕಗೊಳಿಸಿದವರು ಡಾ.ಅಂಬೇಡ್ಕರ್' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ತಾಲ್ಲೂಕಿನ ಕವರನಹಳ್ಳಿಯಲ್ಲಿ ಭಾನುವಾರ ನಡೆದ ಗೋದಾನ ಕಾರ್ಯಕ್ರಮದಲ್ಲಿ ಅವರು, 'ಗೋರಕ್ಷಣೆ ಕುರಿತು ಸನಾತನ ಧರ್ಮ ಹೇಳುತ್ತದೆ. ವಿಪರ್ಯಾಸವೆಂದರೆ ದೇಶದಲ್ಲಿ ಗೋ ಹಂತಕರ ಸರ್ಕಾರಗಳು, ಮಠಾಧೀಶರು, ಸಾಧು, ಸಂತರನ್ನು ಅಪಮಾನಿಸುವ ಸರ್ಕಾರಗಳು ಅಧಿಕಾರಕ್ಕೆ ಬರುತ್ತಿವೆ' ಎಂದರು.

ಗೋವುಗಳ ಶಾಪದಿಂದಲೇ ರಾಜ್ಯ ಸರ್ಕಾರ ಪತನ ಆಗುತ್ತದೆ. ಪತನ ಆಗಬಾರದೆಂದರೆ ಸಿದ್ದರಾಮಯ್ಯ ರಾಜ್ಯದಾದ್ಯಂತ ಗೋದಾನ ಕಾರ್ಯಕ್ರಮ ಜಾರಿಗೊಳಿಸಬೇಕು

ಕೆ.ಎಸ್.ಈಶ್ವರಪ್ಪ, ಮಾಜಿ ಸಚಿವ

'ರಾಜ್ಯದಲ್ಲಿ 2028ಕ್ಕೆ ಹಿಂದೂ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ನಾನೇ ಮುಖ್ಯಮಂತ್ರಿ ಆಗುವೆ. ಆಗ ವಿಧಾನಸೌಧದ ಮುಂದೆ ಜೆಸಿಬಿ ಯಂತ್ರಗಳ ಸಾಲು ನಿಲ್ಲಿಸುತ್ತೇನೆ. ಆಗ ಗಣೇಶ ಉತ್ಸವ, ಪೆಂಡಾಲ್ ಮೇಲೆ ಕಲ್ಲು ತೂರುವವರ ಮನೆಗಳ ಮೇಲೆ ಬುಲ್ಡೋಜರ್ ಹರಿಸುವೆ' ಎಂದರು.

'ರಾಷ್ಟ್ರ ಮತ್ತು ಹಿಂದೂ ಧರ್ಮದ ಪರವಾಗಿ ಮಾತನಾಡುವ ನನ್ನ ಮೇಲೆ 72 ಪ್ರಕರಣ ದಾಖಲಿಸಲಾಗಿದೆ' ಎಂದು ಹೇಳಿದರು.

ಸೋಮವಾರ, ಅಕ್ಟೋಬರ್ 6, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಾಜ್ಯ ಸ್ಥಾನಮಾನಕ್ಕೆ ಒತ್ತಾಯ



ಲಡಾಖ್‌ಗೆ ರಾಜ್ಯ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ (ಎಐಎಸ್‌ಎ) ಸದಸ್ಯರು ದೆಹಲಿಯಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು

ಹಳೆಯ ಕಾರುಗಳ ರ‍್ಯಾಲಿ..



ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಭಾನುವಾರ ನಡೆದ ಹಳೆಯ ಕಾರುಗಳ 'ವಿರಾಸತ್‌–25' ರ‍್ಯಾಲಿ ಗಮನ ಸೆಳೆಯಿತು

ಬಾಗಿಲಲ್ಲೇ ಮಾನಸಿಕ ಆರೋಗ್ಯ ಸೇವೆ

‘ನಿಮ್ಹಾನ್ಸ್ ವಯೋಮಾನಸ ಸಂಜೀವಿನಿ ಗೃಹ’ ಯೋಜನೆಯಡಿ ಆರೈಕೆ ಜತೆಗೆ ಅರಿವು

● ವರುಣ ಹೆಗಡೆ



ವೃದ್ಧರ ಮಾನಸಿಕ ಆರೋಗ್ಯ ಚಿಕಿತ್ಸೆಯಲ್ಲಿನ ಅಂತರ ಕಡಿಮೆ ಮಾಡಿ, ನಿರಂತರ ಚಿಕಿತ್ಸೆ ಒದಗಿಸುವುದು ಯೋಜನೆಯ ಆಶಯ

ಡಾ.ಪಿ.ಟಿ. ಶಿವಕುಮಾರ್, ಜೆರಿಯಾಟ್ರಿಕ್ ಸೈಕಿಯಾಟ್ರಿ ಯೂನಿಟ್‌ನ ಮುಖ್ಯಸ್ಥ, ನಿಮ್ಹಾನ್ಸ್



ಬೆಂಗಳೂರು: ಇಳಿ ವಯಸ್ಸಿನಲ್ಲಿ ಎದುರಾಗುವ ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆ ಮತ್ತು ಆರೈಕೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಮನೆ ಬಾಗಿಲಲ್ಲಿಯೇ ಮಾನಸಿಕ ಆರೋಗ್ಯ ಸೇವೆ ಪ್ರಾರಂಭಿಸಿದೆ.

ಸಂಸ್ಥೆಯ ಮಾನಸಿಕ ಆರೋಗ್ಯ ವಿಭಾಗದ ವೃದ್ಧರ ಚಿಕಿತ್ಸಾ ಕೇಂದ್ರವು (ಜೆರಿಯಾಟ್ರಿಕ್ ಕ್ಲಿನಿಕ್) ಪ್ರಾಯೋಗಿಕವಾಗಿ ಬೆಂಗಳೂರು ದಕ್ಷಿಣದಲ್ಲಿ ‘ನಿಮ್ಹಾನ್ಸ್ ವಯೋಮಾನಸ ಸಂಜೀವಿನಿ ಗೃಹ’ ಯೋಜನೆಯನ್ನು ಅನುಷ್ಠಾನ ಮಾಡಿದೆ. ಈ ಯೋಜನೆಯಡಿ 65 ವರ್ಷ ಮೇಲ್ಪಟ್ಟ ವೃದ್ಧರಿಗೆ ಮನೆ ಬಾಗಿಲಲ್ಲಿಯೇ ವಿವಿಧ ಮಾನಸಿಕ ಸಮಸ್ಯೆಗಳಿಗೆ ಆರೈಕೆ ಒದಗಿಸುವ ಜತೆಗೆ, ಮಾನಸಿಕ ಸ್ವಾಸ್ಥ್ಯ ಕಾಯ್ದುಕೊಳ್ಳಲು ಅನುಸರಿಸಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ಮೊದಲ ಹಂತದಲ್ಲಿ ವೃದ್ಧಾಶ್ರಮಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.

ಸಮುದಾಯದ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಲಾಗುತ್ತಿದೆ. ‘ಅಲ್ಜೈಮರ್ಸ್’, ‘ಡಿಮೆನ್ಶಿಯಾ’ದಂತಹ (ಮರೆಗುಳಿತನ) ಕಾಯಿಲೆಗಳನ್ನು ಎದುರಿಸುತ್ತಿರುವ ವೃದ್ಧರಿಗೆ ನೆರವಾಗುವ ಜತೆಗೆ, 65 ವರ್ಷ ಮೇಲ್ಪಟ್ಟವರು ಸಂಧ್ಯಾಕಾಲದಲ್ಲಿ ಮಾನಸಿಕ ಸ್ವಾಸ್ಥ್ಯ ಕಾಯ್ದುಕೊಳ್ಳುವಂತೆ ಉತ್ತೇಜಿಸುವುದು ಯೋಜನೆಯ ಉದ್ದೇಶವಾಗಿದೆ. ಸಂಸ್ಥೆಯ ಮಾನಸಿಕ ಆರೋಗ್ಯ ವಿಭಾಗದ ವೃದ್ಧರ ಚಿಕಿತ್ಸಾ ಕೇಂದ್ರದ ವೈದ್ಯಕೀಯ ತಂಡವು ಈ ಸೇವೆಯನ್ನು ಉಚಿತವಾಗಿ ಒದಗಿಸುತ್ತಿದೆ. ಈ ಸಂಬಂಧ ವೃದ್ಧಾಶ್ರಮಗಳು, ಸರ್ಕಾರೇತರ ಸಂಸ್ಥೆಗಳು, ಸ್ಥಳೀಯರು, ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಕರ ನೆರವು ಪಡೆಯಲಾಗುತ್ತಿದೆ.

ಸ್ವಯಂ ಆರೈಕೆ: ವೃದ್ಧಾಶ್ರಮಗಳಲ್ಲಿ ಇರುವವರ ಜತೆಗೆ, 65 ವರ್ಷ ಮೇಲ್ಪಟ್ಟ ಬಡ–ಮಧ್ಯಮ ವರ್ಗದ ಕುಟುಂಬಗಳ ಸದಸ್ಯರೂ ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ವೃದ್ಧಾಶ್ರಮ ಹಾಗೂ ಮನೆಗಳಿಗೆ ಭೇಟಿ ನೀಡುವ ಸಂಸ್ಥೆಯಿಂದ ತರಬೇತಿ ಹೊಂದಿದ ಸ್ವಯಂಸೇವಕರ ತಂಡ, ವೃದ್ಧರಿಗೆ ಸ್ವಯಂ ಆರೈಕೆ ಬಗ್ಗೆ ಮಾಹಿತಿ ಹಾಗೂ ತರಬೇತಿ ಒದಗಿಸುತ್ತದೆ. ವೃದ್ಧಾಶ್ರಮಗಳಲ್ಲಿ ಎಲ್ಲರಿಗೂ ಈ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ಆರೈಕೆ ಹಾಗೂ ಚಿಕಿತ್ಸೆ ಅಗತ್ಯವಿದ್ದಲ್ಲಿ ಅವರು ಇದ್ದ ಸ್ಥಳಕ್ಕೇ ಮನೋವೈದ್ಯರ ತಂಡವು ಭೇಟಿ ನೀಡಲಿದೆ.

‘ಈ ಯೋಜನೆಯ ಅನುಷ್ಠಾನಕ್ಕೆ ನಿಮ್ಹಾನ್ಸ್‌ನ ನಿವೃತ್ತ ಮನೋವೈದ್ಯಕೀಯ ತಜ್ಞರಾದ ಡಾ.ಸಿ.ಆರ್. ಚಂದ್ರಶೇಖರ್ ಮತ್ತು ಡಾ. ಶ್ರೀಕಲಾ ಭರತ್ ಅವರು ತಲಾ ₹1.2 ಕೋಟಿ ದೇಣಿಗೆ ನೀಡಿದ್ದಾರೆ. ವೃದ್ಧರನ್ನು ಕಾಡುತ್ತಿರುವ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿವಾರಣೆಗೆ ಹಾಗೂ ಆರೈಕೆಗೆ ಈ ಯೋಜನೆ ಸಹಕಾರಿಯಾಗಿದೆ. ಸರ್ಕಾರದ ನೆರವಿನ ಜತೆಗೆ ದಾನಿಗಳೂ ಮುಂದೆ ಬಂದಲ್ಲಿ ಯೋಜನೆಯ ಆಶಯ ಸಾಕಾರವಾಗಲಿದೆ’ ಎಂದು ಮಾನಸಿಕ ಆರೋಗ್ಯ ವಿಭಾಗದ ಪ್ರಾಧ್ಯಾಪಕ ಹಾಗೂ ಜೆರಿಯಾಟ್ರಿಕ್ ಸೈಕಿಯಾಟ್ರಿ ಯೂನಿಟ್‌ನ ಮುಖ್ಯಸ್ಥ ಡಾ.ಪಿ.ಟಿ. ಶಿವಕುಮಾರ್ ತಿಳಿಸಿದರು.

ಸ್ವಯಂಸೇವಕರಿಗೆ ತರಬೇತಿ

ಈ ಯೋಜನೆಯಡಿ ವೃದ್ಧರ ಮಾನಸಿಕ ಆರೋಗ್ಯ ನಿರ್ವಹಣೆಗೆ ಸ್ವಯಂ ಸೇವಕರನ್ನು ಬಳಸಿಕೊಳ್ಳಲಾಗುತ್ತಿದೆ. ಎಲ್ಲ ವಯೋಮಾನದವರು ಸ್ವಯಂ ಸೇವಕರಾಗಿ ಪಾಲ್ಗೊಳ್ಳಬಹುದಾಗಿದೆ. ಆಸಕ್ತಿ ಇರುವವರಿಗೆ ನಿಮ್ಹಾನ್ಸ್‌ನಲ್ಲಿ ಹಾಗೂ ಆನ್‌ಲೈನ್ ವೇದಿಕೆ ಮೂಲಕ ಅಗತ್ಯ ತರಬೇತಿ ಒದಗಿಸಲಾಗುತ್ತದೆ. 30 ಗಂಟೆಗಳ ತರಬೇತಿಯನ್ನು ಮೂರು ತಿಂಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಈ ತರಬೇತಿ ಪಡೆದವರು ಮುಂದಿನ ಆರು ತಿಂಗಳು ವೃದ್ಧರಿಗೆ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ, ಆರೈಕೆಯಂತಹ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು. ಬಳಿಕ ಅವರಿಗೆ ಪ್ರಮಾಣಪತ್ರವನ್ನೂ ವಿತರಿಸಲಾಗುತ್ತದೆ.

ಯೋಜನೆಯಡಿ ಮಾನಸಿಕ ಆರೋಗ್ಯ ಸೇವೆ, ತರಬೇತಿಗೆ ಸಂಬಂಧಿಸಿದಂತೆ ಮೊ.ಸಂಖ್ಯೆ 9900418922 (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನ ಬೆಳಿಗ್ಗೆ 9ರಿಂದ ಸಂಜೆ 4.30ರ ಅವಧಿಯಲ್ಲಿ) ಸಂಪರ್ಕಿಸಬಹುದಾಗಿದೆ.

ಅಳುವಿನ ಸಂಕಥನಗಳ ಕಥೆಗಾರ

● ರಘುನಾಥ ಚ.ಹ.

ನುಡಿ ನಮನ

‘ವ್ಯಥೆಗಳ ಕಳೆಯುವ ಕಥೆಗಾರ’– ಪು.ತಿ. ನರಸಿಂಹಾಚಾರ್ ಅವರ ಗೀತೆಯೊಂದರ ಸಾಲು; ಕಥೆಗಳ ಹಾಗೂ ಕಥೆಗಾರನ ಮಹತ್ವವನ್ನು ಸೂಚಿಸುವಂತಹದ್ದು. ಈ ಮಾತು ಮೊಗಳ್ಳಿ ಗಣೇಶ್ (ಜುಲೈ 1, 1963 – ಅ. 5, 2025) ಅವರಿಗೆ ಅನ್ವಯಿಸುವಂತಿರಲಿಲ್ಲ. ಅವರು ವ್ಯಥೆಗಳನ್ನೇ ಕಥೆಗಳನ್ನಾಗಿಸುತ್ತಿದ್ದರು; ಆ ಕಥೆಗಳು ಓದುಗರ ಮನಸ್ಸಿನಲ್ಲೂ ಸಂಕಟದ ಅಲೆಗಳನ್ನು ಮೂಡಿಸುತ್ತಿದ್ದವು.

‘ದುಃಖದಿಂದ ನಾನು ಸಾಹಿತ್ಯ ಸೃಷ್ಟಿಯನ್ನು ಕಲಿತಿದ್ದೇನೆ; ಸಮುದಾಯದ ದುಃಖವೇ ನನ್ನಿಂದ ಹಲವು ಸ್ವರಗಳ ಕೊಳಲು ನಾದವ ನುಡಿಸಿದೆ’ ಎಂದು ಅವರು ತಮ್ಮ ಕೊನೆಯ ಸಂದರ್ಶನದಲ್ಲಿ ಹೇಳಿದ್ದರು. ‘ಅಲ್ಲಿ ಆ ಅಳು ಈಗಲೂ’ ಎನ್ನುವುದು ಅವರ ಕಥೆಯೊಂದರ ಹೆಸರು. ಅಳು ಅವರ ಬಹುತೇಕ ಕಥೆಗಳ ಸ್ಥಾಯಿಭಾವ. ಅವರ ಅನುಪಸ್ಥಿತಿಯಲ್ಲೂ ಆ ಅಳು ಈಗಲೂ ಎಲ್ಲಿಯೋ ಅನುರಣಿಸುತ್ತಿರುವಂತೆ, ಅವರ ಕಥೆಗಳನ್ನು ಹಚ್ಚಿಕೊಂಡವರಿಗೆ ಭಾಸವಾಗಬಹುದು.

ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿ ಮೊಗಳ್ಳಿ ಗಣೇಶರ ಹುಟ್ಟೂರು. ಮೈಸೂರು–ಮಂಡ್ಯ ಅವರ ತಿಳಿವಳಿಕೆ ಹದಗೊಂಡ ಪರಿಸರ. ಅರ್ಥಶಾಸ್ತ್ರ ಮತ್ತು ಜಾನಪದದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಕಾವೇರಿಯಿಂದ ತುಂಗಭದ್ರೆಯವರೆಗಿನ ಪಯಣ, ಕೇರಿಯ ಹುಡುಗನೊಬ್ಬ ಅಕ್ಷರಗಳ ಮೂಲಕ ತನ್ನೆಲ್ಲ ಸಂಕಟ–ಅವಮಾನಗಳನ್ನು ಮೀರಿ ಕನ್ನಡದ ಅನನ್ಯ ಕಥೆಗಾರನಾಗಿ ಬೆಳೆದುದರ ಸಂಕೇತದಂತಿದೆ.

ದೇವನೂರ ಮಹಾದೇವರ ನಂತರದ ದಲಿತ ಕಥನದ ಬಹುಮುಖ್ಯ ಪ್ರತಿನಿಧಿಯಾದ ಮೊಗಳ್ಳಿಯವರು, ವಿಮರ್ಶಕನಾಗಿ ಹಾಗೂ ಜಾನಪದ ವಿದ್ವಾಂಸರಾಗಿಯೂ ಪ್ರಸಿದ್ಧರು. ಕಥೆಗಳ ಮೂಲಕ ಮನುಷ್ಯಲೋಕದ ಅನಂತ ದುಃಖದ ಹುಡುಕಾಟದಲ್ಲಿ ತೊಡಗಿದ್ದ ಅವರು, ವಿಮರ್ಶೆಯ ಮೂಲಕ ಸ್ಥಾಪಿತ ಜನಪ್ರಿಯ ಮಾದರಿಗಳನ್ನು ಛಿದ್ರಗೊಳಿಸುವ ಪ್ರಯತ್ನ ನಡೆಸಿದರು. ಕನ್ನಡ ಸಾಹಿತ್ಯವನ್ನು ಬೂಸಾ ರೂಪದಲ್ಲಿ ಕಂಡ ಬಿ. ಬಸವಲಿಂಗಪ್ಪನವರ ಅಭಿಪ್ರಾಯವನ್ನು ವಿಸ್ತರಿಸುವ ಪ್ರಯತ್ನ ತಮ್ಮದೆಂದು ಹೇಳಿಕೊಂಡಿದ್ದರು. ‘ತಕರಾರು’ ಅವರ ವಿಮರ್ಶಾ ಬರಹಗಳ ಸಂಕಲನವಷ್ಟೇ ಅಲ್ಲ; ಅವರ ವ್ಯಕ್ತಿತ್ವದ ಗುಣವಿಶೇಷಣವೂ ಹೌದು.

‘ಪ್ರಜಾವಾಣಿ’ಯ ದೀಪಾವಳಿ ಕಥಾಸ್ಪರ್ಧೆಯ ಮೂಲಕ ಸಾಹಿತ್ಯ-ಲೋಕಕ್ಕೆ ಪರಿಚಿತಗೊಂಡ ಪ್ರಮುಖ ಕಥೆಗಾರರಲ್ಲಿ ಮೊಗಳ್ಳಿಯವರೂ ಒಬ್ಬರು. ‘ಒಂದು ಹಳೆಯ ಚಡ್ಡಿ’ ಕಥೆಗೆ ‘ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ–1989’ರಲ್ಲಿ ಎರಡನೇ ಬಹುಮಾನ ಪಡೆಯುವ ಮೂಲಕ ಸಹೃದಯರ ಗಮನಸೆಳೆದ ಮೊಗಳ್ಳಿ ಗಣೇಶ್, ಮರುವರ್ಷವೇ ‘ಬುಗುರಿ’ ಕಥೆಗೆ ಮೊದಲ ಬಹುಮಾನ ಪಡೆದರು. ‘ಬತ್ತ’ (1991) ಹಾಗೂ ‘ತೋಪು’ (1998) ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಮೊಗಳ್ಳಿಯವರ ಇನ್ನೆರಡು ಕಥೆಗಳು.

ಕನ್ನಡದ ಅತ್ಯುತ್ತಮ ಕಥೆಗಳ-ಲ್ಲೊಂದಾದ ‘ಬುಗುರಿ’ ಮೊಗಳ್ಳಿಯವರ ಟ್ರೇಡ್‌ಮಾರ್ಕ್ ಕಥೆ. ದಲಿತ ಸಮುದಾಯದ ನೋವು–ನಲಿವು, ಜೀವನಪ್ರೀತಿಯ ಬಹುಪದರಗಳನ್ನು ‘ಬುಗುರಿ’ಯಂತೆ ಒಳಗೊಂಡಿರುವ ಕಥೆ ಯಾವ ಭಾಷೆಯಲ್ಲಾದರೂ ವಿರಳವೇ. ‘ಬುಗುರಿ’ ಹೆಸರಿನಲ್ಲೇ ಅವರ ಮೊದಲ ಕಥಾಸಂಕಲನ ಪ್ರಕಟಗೊಂಡಿತು. ಚೊಚ್ಚಲ ಸಂಕಲನ ಅದೆಷ್ಟು ತೀವ್ರವಾಗಿ ಕಥೆಗಾರನ ರಕ್ತ-ಮಾಂಸವನ್ನು ಒಳಗೊಂಡಿತ್ತೆಂದರೆ, ಅದನ್ನು ಮೀರಿ ಬೆಳೆಯುವುದು ಮೊಗಳ್ಳಿ ಅವರಿಗೆ ಸಾಧ್ಯವಾಗಲೇ ಇಲ್ಲ.

ಸಮಾಜ ಹಾಗೂ ಕುಟುಂಬ ಎರಡರಿಂದಲೂ ಜರ್ಜರಗೊಂಡ ವ್ಯಕ್ತಿತ್ವದ ಒಡಕಲು ಬಿಂಬಗಳ ರೂಪದಲ್ಲಿ ಮೊಗಳ್ಳಿ ಹಾಗೂ ಅವರ ಕಥೆಗಳನ್ನು ನೋಡಬಹುದು. ವಿದ್ಯಾರ್ಥಿಗಳ ನಡುವೆಯಿದ್ದೂ ಅವರು ತಮ್ಮ ಒಂಟಿತನ ಹಾಗೂ ಕಾಠಿಣ್ಯ ಕಳೆದುಕೊಳ್ಳದಾದರು. ತಮ್ಮ ಸಾಹಿತ್ಯಕ್ಕೆ ದೊರೆಯಬೇಕಾದ ಗೌರವ ದೊರೆಯಲಿಲ್ಲ ಎನ್ನುವ ನೋವು ಹೊಂದಿದ್ದ ಅವರು, ಹೊಸ ತಲೆಮಾರಿನ ಸಾಹಿತ್ಯದ ಬಗ್ಗೆ ಅನಾಸಕ್ತರಾಗಿದ್ದುದು ವಿರೋಧಾಭಾಸದಂತೆ ಕಾಣಿಸುತ್ತಿತ್ತು.

ನಿವೃತ್ತಿಯ ನಂತರ ಮೊಗಳ್ಳಿ ಬರವಣಿಗೆಯಲ್ಲಿ ಮತ್ತೆ ತೀವ್ರವಾಗಿ ತೊಡಗಿಸಿಕೊಂಡಿದ್ದರು. ಆದರೆ, ಬದುಕಿನ ಕಥೆ ಕಥೆಗಾರನ ಎಣಿಕೆ ಮೀರಿದುದಾಗಿತ್ತು. ಅವರ ಬದುಕಿನ ಬುಗುರಿ ಅನಾರೋಗ್ಯದಿಂದ ಆಟ ಮುಗಿಸಿದೆ; ಅದರ ತಿರುಗುವಿಕೆಯ ಕಂಪನಗಳು ಸಹೃದಯರ ಮನಸ್ಸಿನಲ್ಲಿ ಚಿರಸ್ಥಾಯಿ.

ಮೊಗಳ್ಳಿ ಅವರ ನಿರ್ಗಮನದ ಬಗ್ಗೆ ‘ತಕರಾರು, ಇನ್ನಿಲ್ಲ’ ಎಂದು ಹೇಳುವುದು ಒರಟಾಗಿ ಧ್ವನಿಸಿದರೂ, ಈ ಮಾತು ಮೊಗಳ್ಳಿ ಅವರ ಅಗಲಿಕೆಯೊಂದಿಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರಚನಾತ್ಮಕ ವಿಮರ್ಶೆಯ ದನಿಗಳು ಕ್ಷೀಣಿಸುತ್ತಿರುವುದನ್ನೂ ಸೂಚಿಸುತ್ತದೆ.

ಮೊಗಳ್ಳಿಗೆ ಸಂದ ಪ್ರಮುಖ ಪ್ರಶಸ್ತಿ

ಕಾವ್ಯಾನಂದ ಪ್ರಶಸ್ತಿ, ಬೆಸಗರಹಳ್ಳಿ ರಾಮಣ್ಣ ಕಥಾಪ್ರಶಸ್ತಿ, ಪುತಿನ ಕಾವ್ಯ ಪ್ರಶಸ್ತಿ, ಜಿ.ಎಸ್. ಶಿವರುದ್ರಪ್ಪ ವಿಮರ್ಶಾ ಪ್ರಶಸ್ತಿ, ದಲಿತಕವಿ ಸಿದ್ಧಲಿಂಗಯ್ಯ ಪ್ರಶಸ್ತಿ, ದೆಹಲಿಯ ಕಥಾಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ. ಕೇಂದ್ರ ಸಾಹಿತ್ಯ ಅಕಾಡೆಮಿಯ ವತಿಯಿಂದ ಅತಿಥಿ ಲೇಖಕನಾಗಿ ಜರ್ಮನಿ ದೇಶದ ಪ್ರವಾಸವನ್ನೂ ಅವರು ಮಾಡಿದ್ದರು.

ಚಿಟಿಕೆ ಸುದ್ದಿ

ವಿಜಯ್ ಪ್ರಚಾರ ಬಸ್ ಚಾಲಕನ ವಿರುದ್ಧ ಎಫ್‌ಐಆರ್



ವಿಜಯ್ ರ್ಯಾಲಿಗೆ ಬಳಸುತ್ತಿದ್ದ ಬಸ್

ಕರೂರು (ಪಿಟಿಐ): ಟಿವಿಕೆ ಪಕ್ಷದ ಮುಖ್ಯಸ್ಥ ಮತ್ತು ನಟ ವಿಜಯ್ ಅವರು ಪ್ರಚಾರಕ್ಕೆ ಬಳಸುತ್ತಿದ್ದ ಬಸ್ ಚಾಲಕನ ವಿರುದ್ಧ ತಮಿಳುನಾಡು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸೆಪ್ಟೆಂಬರ್ 27ರಂದು ನಡೆದ ಕಾಲ್ತುಳಿತದ ದುರಂತಕ್ಕೂ ಮುನ್ನ ಕರೂರು ರ್ಯಾಲಿಗೆ ಬರುತ್ತಿದ್ದ ವೇಳೆ ಮಾರ್ಗಮಧ್ಯೆ ನಡೆಸಿದ ಅಪಘಾತಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಾರ ಸಂಖ್ಯೆಯ ಅಭಿಮಾನಿಗಳು ವಿಜಯ್ ಅವರನ್ನು ಹತ್ತಿರದಿಂದ ನೋಡಲು ತಮ್ಮ ದ್ವಿಚಕ್ರವಾಹನಗಳಲ್ಲಿ ಪ್ರಚಾರ ವಾಹನದ ಅಕ್ಕ–ಪಕ್ಕ ಬರುತ್ತಿದ್ದರು. ಈ ವೇಳೆ ಪ್ರಚಾರ ವಾಹನ ಅಭಿಮಾನಿಗಳ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ದೃಶ್ಯ ಹಲವು ಟಿವಿ ವಾಹಿನಿಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಇದರ ಆಧಾರದ ಮೇಲೆ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಕರೂರಿಗೆ ಬರುವಾಗ ಅಪಘಾತ ನಡೆಸಿದ್ದ ಚಾಲಕನ ಮೇಲೆ ಏಕೆ ಇನ್ನೂ ಕ್ರಮ ಕೈಗೊಂಡಿಲ್ಲ ಎಂದು ಹೈಕೋರ್ಟ್ ಪೊಲೀಸರನ್ನು ಪ್ರಶ್ನಿಸಿತ್ತು.

ಇಪಿಎಸ್ ಪಿಂಚಣಿದಾರರ ಸಭೆ

ಬೆಂಗಳೂರು: ನಗರದ ಲಾಲ್‌ಬಾಗ್ ಆವರಣದಲ್ಲಿ ಭಾನುವಾರ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ 93ನೇ ಮಾಸಿಕ ಸಭೆ ನಡೆಯಿತು.

ಅಕ್ಟೋಬರ್ 9ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯಲಿರುವ ನಿವೃತ್ತ ನೌಕರರ ಪ್ರತಿಭಟನಾ ಸಭೆಯಲ್ಲಿ ಹೈಕೋರ್ಟ್‌ನ ನಾಲ್ವರು ವಕೀಲರು ಭಾಗವಹಿಸಲಿದ್ದು, ಸುಪ್ರೀಂ ಕೋರ್ಟ್ ಹಾಗೂ ಇತ್ತೀಚೆಗೆ ಹಲವು ರಾಜ್ಯಗಳ ಹೈಕೋರ್ಟ್‌ಗಳು ನೀಡಿರುವ ತೀರ್ಪುಗಳನ್ನು ಪರಾಮರ್ಶಿಸಿ ಭಾಷಣ ಮಾಡುವರು.

ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಭಾಗವಹಿಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ಸಂದೇಶ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಂಜುಂಡೇಗೌಡ ತಿಳಿಸಿದರು.

ಜಿಬಿಎ ವ್ಯಾಪ್ತಿಯ 1.19 ಲಕ್ಷ ಮನೆಗಳ ಸಮೀಕ್ಷೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ (ಜಾತಿವಾರು) ಸಮೀಕ್ಷೆಯಲ್ಲಿ ಇದುವರೆಗೂ 1.19 ಲಕ್ಷ ಮನೆಗಳ ಸಮೀಕ್ಷೆ ನಡೆಸಲಾಗಿದೆ.

ಜಿಬಿಎ ವ್ಯಾಪ್ತಿಯ ಕೇಂದ್ರ ನಗರ ಪಾಲಿಕೆಯಲ್ಲಿ 14,288, ಪೂರ್ವ ನಗರ ಪಾಲಿಕೆಯಲ್ಲಿ 17,269, ಉತ್ತರ ನಗರ ಪಾಲಿಕೆಯಲ್ಲಿ 31,363, ದಕ್ಷಿಣ ನಗರ ಪಾಲಿಕೆಯಲ್ಲಿ 16,445 ಹಾಗೂ ಪಶ್ಚಿಮ ನಗರ ಪಾಲಿಕೆಯಲ್ಲಿ 40,112 ಸೇರಿದಂತೆ ಒಟ್ಟು 1,19,477 ಮನೆಗಳಲ್ಲಿ ಸಮೀಕ್ಷೆ ಕೈಗೊಳ್ಳಲಾಗಿದೆ ಎಂದು ಜಿಬಿಎ ಪ್ರಕಟಣೆಯಲ್ಲಿ ತಿಳಿಸಿದೆ.

ವಿಮಾನದಲ್ಲಿ ತಾಂತ್ರಿಕ ದೋಷ ● ಸ್ವಯಂಚಾಲಿತವಾಗಿ ತೆರೆದ ಆರ್‌ಎಟಿ

ಏರ್ ಇಂಡಿಯಾ: ಸುರಕ್ಷಿತ ಭೂಸ್ಪರ್ಶ

ಮುಖ್ಯಾಂಶಗಳು

- ಆರ್‌ಎಟಿ ತೆರೆದುಕೊಂಡಿದ್ದನ್ನು ಗುರುತಿಸಿದ ವಿಮಾನ ಸಿಬ್ಬಂದಿ
- ಬರ್ಮಿಂಗ್‌ಹ್ಯಾಮ್ – ದೆಹಲಿ ನಡುವಿನ ಹಾರಾಟ ರದ್ದು
- ಸಮಗ್ರ ತನಿಖೆಗೆ ಎಫ್‌ಐಪಿ ಆಗ್ರಹ



ಮುಂಬೈ (ಪಿಟಿಐ): ಅಮೃತಸರದಿಂದ ಬರ್ಮಿಂಗ್‌ಹ್ಯಾಮ್‌ಗೆ ಶನಿವಾರ ಹೊರಟಿದ್ದ ಏರ್ ಇಂಡಿಯಾದ ಬೋಯಿಂಗ್–787 ವಿಮಾನದಲ್ಲಿ ರ್‍ಯಾಮ್ ಏರ್ ಟರ್ಬೈನ್ (ಆರ್‌ಎಟಿ) ಅನಿರೀಕ್ಷಿತವಾಗಿ ಮತ್ತು ಸ್ವಯಂ ಚಾಲಿತವಾಗಿ ತೆರೆದುಕೊಂಡಿತ್ತು ಎಂದು ವಿಮಾನದ ಸಿಬ್ಬಂದಿ ವರದಿ ಮಾಡಿದ್ದಾರೆ. ಆದರೆ ಯಾವುದೇ ಅವಘಡಗಳು ಸಂಭವಿಸಿದೇ, ಸುರಕ್ಷಿತವಾಗಿ ವಿಮಾನ ಭೂ ಸ್ಪರ್ಶ ಮಾಡಿದೆ ಎಂದು ಟಾಟಾ ಗ್ರೂಪ್ ಒಡೆತನದ ಏರ್ ಇಂಡಿಯಾ ವಿಮಾನಯಾನ ಸಂಸ್ಥೆ ಭಾನುವಾರ ತಿಳಿಸಿದೆ.

ವಿಮಾನದ ಎರಡೂ ಎಂಜಿನ್‌ಗಳು ವಿಫಲಗೊಂಡಾಗ ಅಥವಾ ಎಲೆಕ್ಟ್ರಾನಿಕ್ ಅಥವಾ ಹೈಡ್ರಾಲಿಕ್ ವ್ಯವಸ್ಥೆ ವಿಫಲಗೊಂಡಾಗ ಆರ್‌ಎಟಿ ಸ್ವಯಂ-ಚಾಲಿತವಾಗಿ ತೆರೆದುಕೊಳ್ಳುತ್ತದೆ. ಇದು ತುರ್ತಾಗಿ ವಿದ್ಯುತ್ ಉತ್ಪಾದಿಸಲು ಗಾಳಿಯ ವೇಗವನ್ನು ಬಳಸುತ್ತದೆ.

ವಿಮಾನದಲ್ಲಿ ಎಷ್ಟು ಪ್ರಯಾಣಿಕರು ಇದ್ದರೂ ಎಂಬ ಮಾಹಿತಿಯನ್ನು ವಿಮಾನಯಾನ ಸಂಸ್ಥೆ ಹಂಚಿಕೊಂಡಿಲ್ಲ. ವಿಮಾನದ ತಪಾಸಣೆ ನಡೆಯುತ್ತಿರುವ ಕಾರಣ ಬರ್ಮಿಂಗ್‌ಹ್ಯಾಮ್ – ದೆಹಲಿ ನಡುವಿನ ಹಾರಾಟವನ್ನು ರದ್ದುಗೊಳಿಸ-ಲಾಗಿದೆ ಎಂದು ಅದು ಮಾಹಿತಿ ನೀಡಿದೆ.

‘ಅಮೃತಸರದಿಂದ ಬರ್ಮಿಂಗ್‌ಹ್ಯಾಮ್‌ಗೆ ಹೊರಟಿದ್ದ ಎಐ 117 ವಿಮಾನದ ಸಿಬ್ಬಂದಿ ಅಂತಿಮ ಹಂತದಲ್ಲಿ ಆರ್‌ಎಟಿ ತೆರೆದುಕೊಂಡಿರುವುದನ್ನು ಗುರುತಿಸಿದ್ದಾರೆ. ಆದರೆ ವಿದ್ಯುತ್ ಮತ್ತು ಹೈಡ್ರಾಲಿಕ್ ವ್ಯವಸ್ಥೆ ಸಹಜ ಸ್ಥಿತಿಯಲ್ಲಿತ್ತು ಮತ್ತು ವಿಮಾನವನ್ನು ಸುರಕ್ಷಿತವಾಗಿ ಬರ್ಮಿಂಗ್‌ಹ್ಯಾಮ್‌ನಲ್ಲಿ ಭೂ ಸ್ಪರ್ಶ ಮಾಡಿಸಲಾಗಿದೆ’ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಸಮಗ್ರ ಪರಿಶೀಲನೆಗೆ ಡಿಜಿಸಿಎಗೆ ಪತ್ರ: ಈ ಘಟನೆ ಬೆನ್ನಲ್ಲೇ, ದೇಶದ ಎಲ್ಲ ವಿಮಾನಗಳ ವಿದ್ಯುತ್ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸುವಂತೆ ಮತ್ತು ತನಿಖೆ ನಡೆಸುವಂತೆ ಭಾರತೀಯ ಪೈಲಟ್‌ಗಳ ಒಕ್ಕೂಟ (ಎಫ್‌ಐಪಿ) ಭಾನುವಾರ ನಾಗರಿಕ ವಿಮಾನಯಾನ ನಿರ್ದೇಶನಾಲಯಕ್ಕೆ (ಡಿಜಿಸಿಎ) ಪತ್ರ ಬರೆದು ಆಗ್ರಹಿಸಿದೆ.

‘ವಿಮಾನವು ಬರ್ಮಿಂಗ್‌ಹ್ಯಾಮ್‌ಗೆ ಸಮೀಪಿಸುತ್ತಿದ್ದಾಗ, ಸುಮಾರು 500 ಅಡಿ ಎತ್ತರದಲ್ಲಿ ಆರ್‌ಎಟಿ ಅನಿರೀಕ್ಷಿತವಾಗಿ ತೆರೆದುಕೊಂಡಿದೆ. ಅಂದರೆ ವಿಮಾನದಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ನಿರ್ವಹಿಸುವ ‘ಬಸ್ ಪವರ್ ಕಂಟ್ರೋಲ್ ಯೂನಿಟ್’ನ (ಬಿಪಿಸಿಯು) ದೋಷದಿಂದ ಆರ್‌ಎಟಿ ಸ್ವಯಂ ಚಾಲಿತವಾಗಿ ತೆರೆದುಕೊಂಡಿರಬಹುದು’ ಎಂದು ಎಫ್‌ಐಪಿ ಅಧ್ಯಕ್ಷ ಜಿ.ಎಸ್.ರಾಂಧಾವ ಹೇಳಿದ್ದಾರೆ.

ಯು.ಟಿ.ಖಾದರ್‌ಗೆ ಗೌರವ ಡಾಕ್ಟರೇಟ್

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸೇರಿದಂತೆ ಮೂವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಲು ನಿರ್ಧರಿಸಿದೆ.

ಖಾದರ್ ಅವರ ಜೊತೆಗೆ ವಿಧಾನ ಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ, ಜೆ.ಪಿ.ಅಗ್ರಿ ಜೆನೆಟಿಕ್ಸ್ ಸಂಸ್ಥಾಪಕ ಟಿ.ಬಿ. ಪ್ರಸನ್ನ ಗೌರವ ಡಾಕ್ಟರೇಟ್‌ಗೆ ಭಾಜನರಾಗಲಿದ್ದಾರೆ. ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ್ ತಿಳಿಸಿದ್ದಾರೆ.

ಯುವ ದಸರಾ: ಬಿವೈವಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ



ಯುವ ದಸರಾ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಚಾಲನೆ ನೀಡಿದರು

ಯಲಹಂಕ: ‘ನಾಡಿನ ಪರಂಪರೆ, ಕಲೆ, ಸಂಪ್ರದಾಯ, ಸಂಸ್ಕೃತಿ ರಕ್ಷಣೆ ಭಾಗವಾಗಿ ಬ್ಯಾಟರಾಯನಪುರದಲ್ಲಿ ದಸರಾ ಮಹೋತ್ಸವ ಹಾಗೂ ಯುವ ದಸರಾ ಕಾರ್ಯಕ್ರಮ ಆಯೋಜಿಸಿರುವುದು ಸ್ತುತ್ಯರ್ಹ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ವಿದ್ಯಾರಣ್ಯಪುರದ ಎನ್‌.ಟಿ.ಐ.ಮೈದಾನದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್‌.ಸಿ.ತಮ್ಮೇಶ್ ಗೌಡ ನೇತೃತ್ವದಲ್ಲಿ ಆಯೋಜಿಸಿದ್ದ ಯುವ ದಸರಾ ಉತ್ಸವ ಉದ್ಘಾಟಿಸಿ ಮಾತನಾಡಿ, ‘ಕೇಸರಿ ಫೌಂಡೇಷನ್ ಮೂಲಕ ನಾಲ್ಕು ವರ್ಷಗಳಿಂದ ದಸರಾ ಉತ್ಸವ ಮಾಡುತ್ತಿದ್ದಾರೆ. ಈ ಬಾರಿ ಯುವ ದಸರಾ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿರುವುದು ಸಂತೋಷದ ಸಂಗತಿ’ ಎಂದರು.

ಶಾಸಕ ಎಸ್. ಆರ್ ವಿಶ್ವನಾಥ್ ಮಾತನಾಡಿದರು .ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ವಿವಿಧ ಬಡಾವಣೆಗಳ 101 ದೇವರುಗಳ ಉತ್ಸವಕ್ಕೆ ಕೇಂದ್ರಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಿದರು.

ವಿದ್ಯಾರಣ್ಯಪುರದಿಂದ ಹೊರಟ ದೇವರುಗಳ ಉತ್ಸವ ತಿಂಡ್ಲು, ಕೊಡಿಗೇಹಳ್ಳಿ ಮತ್ತು ಸಹಕಾರನಗರ ಮಾರ್ಗವಾಗಿ ಬ್ಯಾಟರಾಯನಪುರ ತಲುಪಿತು.

ಮುಖಂಡ ಎಚ್‌.ಸಿ.ತಮ್ಮೇಶ್ ಗೌಡ, ಚಿತ್ರನಟಿ ಅಮೂಲ್ಯ ಜಗದೀಶ್, ಬ್ಯಾಟರಾಯನಪುರ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಹನುಮಂತಗೌಡ, ನಗರ ಮಂಡಲ ಅಧ್ಯಕ್ಷ ಕೃಷ್ಣಮೂರ್ತಿ, ಪಿ.ಕೆ.ರಾಜಗೋಪಾಲ್, ಶರಣು ತಳ್ಳಿಕೇರಿ ಮತ್ತಿತರರು ಹಾಜರಿದ್ದರು.

ಒಡಿಶಾ: ಮತ್ತೆ ಹಿಂಸಾಚಾರ– ನಿಷೇಧಾಜ್ಞೆ

ಕಟಕ್/ಭುವನೇಶ್ವರ (ಪಿಟಿಐ): ದುರ್ಗಾ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ಇತ್ತೀಚೆಗೆ ನಡೆದ ಗುಂಪು ಘರ್ಷಣೆಯ ಬಳಿಕ ಕಟಕ್‌ನಲ್ಲಿ ಭಾನುವಾರ ಹೊಸದಾಗಿ ಹಿಂಸಾಚಾರ ನಡೆದಿದ್ದು, 25 ಜನರು ಗಾಯಗೊಂಡಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳಲು ಕಟಕ್‌ನ 13 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

‘ಭಾನುವಾರ ರಾತ್ರಿ 10 ಗಂಟೆಯಿಂದ 36 ಗಂಟೆಗಳವರೆಗೆ ನಿಷೇಧಾಜ್ಞೆ ಜಾರಿಯಲ್ಲಿ ಇರುತ್ತದೆ’ ಎಂದು ಪೊಲೀಸ್ ಆಯುಕ್ತ ಎಸ್. ದೇವದತ್ತ ಸಿಂಗ್ ತಿಳಿಸಿದ್ದಾರೆ.

ಚಿತ್ರಾವಳಿ



ಕನಕಪುರ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಯಿತು. ಸಂಸದ ತೇಜಸ್ವಿ ಸೂರ್ಯ, ಕ್ಯಾನ್ಸರ್ ತಜ್ಞರಾದ ಡಾ. ಮೋನಿಕಾ ಪನ್ಸಾರಿ, ಡಾ. ಅಕ್ಷತಾ ನಾಯಕ್ ಪಾಲ್ಗೊಂಡಿದ್ದರು



ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ 75ನೇ ವಾರ್ಷಿಕೋತ್ಸವ ಅಂಗವಾಗಿ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ಈಜಿಪ್ಟ್ ಕಾರ್ಟೂನ್ ಪ್ಲಾಟ್‌ಫಾರ್ಮ್‌ನ ಸಹಯೋಗದೊಂದಿಗೆ ಅಕ್ಟೋಬರ್ 4ರಿಂದ 31ರವರೆಗೆ ಗಾಂಧೀಜಿ ವ್ಯಂಗ್ಯಚಿತ್ರಗಳ ಅಂತರರಾಷ್ಟ್ರೀಯ ಪ್ರದರ್ಶನವನ್ನು ನಗರದ ಟ್ರಿನಿಟಿ ಮೆಟ್ರೊ ನಿಲ್ದಾಣ ಹಿಂಭಾಗದಲ್ಲಿರುವ ಭಾರತೀಯ ವ್ಯಂಗ್ಯ ಚಿತ್ರಕಾರರ ಗ್ಯಾಲರಿಯಲ್ಲಿ ಆಯೋಜಿಸಿದೆ. ಸ್ಮಾರಕ ನಿಧಿ ಅಧ್ಯಕ್ಷ ವೂಡೇ.ಪಿ ಕೃಷ್ಣ ಪ್ರದರ್ಶನವನ್ನು ವೀಕ್ಷಿಸಿದರು



ಹೆಸರಘಟ್ಟದ ಐವರುಕಂಡಹಳ್ಳಿಯಲ್ಲಿರುವ ಸ್ಪರ್ಶ ಅನಾಥ ಮಕ್ಕಳ ಆಶ್ರಮದಲ್ಲಿ ಶಾರದಾಂಬ ಉಚಿತ ಸುಗಮ ಸಂಗೀತ ಸಂಸ್ಥೆ ಸ್ಥಾಪಕಿ ವಿನೋದಾ ಏರ್ಪಡಿಸಿದ್ದ ಮೂರು ತಿಂಗಳ ಉಚಿತ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಪ್ರಮಾಣಪತ್ರ ವಿತರಿಸಲಾಯಿತು



ಸಮಾರಂಭದಲ್ಲಿ ಶಿಕಾರಿಪುರ ಸಹಸ್ರವಳ್ಳಿ ಪ್ರಗತಿಪರ ರೈತ ದುರ್ಗಪ್ಪ ಅಂಗಡಿ, ರಾಜ್ಯಮಟ್ಟದ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಗೋವಿಂದರಾಜು, ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಅವರನ್ನು ಸನ್ಮಾನಿಸಲಾಯಿತು

‘ಈಡಿಗ ಎಂದೇ ನಮೂದಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ–ಶೈಕ್ಷಣಿಕ (ಜಾತಿವಾರು) ಸಮೀಕ್ಷೆ ವೇಳೆ ಜಾತಿ ಕಾಲಂನಲ್ಲಿ ಈಡಿಗ ಎಂದೇ ನಮೂದಿಸಬೇಕು’ ಎಂದು ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್ ಕರೆ ನೀಡಿದರು.

ಶ್ರೀ ನಾರಾಯಣಗುರು ವಿಚಾರ ವೇದಿಕೆ ಭಾನುವಾರ ಆಯೋಜಿಸಿದ್ದ ನಾರಾಯಣ ಗುರುಗಳ ಜಯಂತಿ, ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಈಡಿಗ ಸಮುದಾಯವು 26 ಪಂಗಡಗಳನ್ನು ಒಳಗೊಂಡಿದೆ. ಸಮೀಕ್ಷೆಯಲ್ಲಿ ಬಿಲ್ಲವ, ದೀವರು ಸೇರಿದಂತೆ ಎಲ್ಲರೂ ಈಡಿಗ ಎಂದೇ ನಮೂದಿಸಬೇಕು. ಇದರಿಂದ ನಮ್ಮ ಸಮುದಾಯದ ಜನಸಂಖ್ಯೆಯ ನಿಖರ ಮಾಹಿತಿ ಸಿಗಲಿದ್ದು, ಸರ್ಕಾರದ ಸೌಲಭ್ಯ-ಗಳನ್ನು ಪಡೆದುಕೊಳ್ಳಲು ಅನುಕೂಲ-ವಾಗಲಿದೆ’ ಎಂದು ಹೇಳಿದರು.

ಶಾಸಕ ಕೆ. ಗೋಪಾಲಯ್ಯ ಮಾತನಾಡಿ, ‘ಪ್ರತಿಯೊಬ್ಬರೂ ನಾರಾಯಣ ಗುರುಗಳ ಆದರ್ಶ ಮತ್ತು ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಾರಾಯಣ ಗುರುಗಳು ಯಾವುದೇ ಒಂದು ಸಮಾಜಕ್ಕೆ ಸೇರಿದವರಲ್ಲ. ಈಡಿಗ ಸಮುದಾಯದ ಅನೇಕ ಮಂದಿ ನಮ್ಮ ಭಾಗದಲ್ಲಿ ವಾಸವಾಗಿದ್ದು, ಅವರ ಎಲ್ಲ ಸಮಸ್ಯೆಗಳಿಗೂ ಪ್ರಾಮಾಣಿಕವಾಗಿ ಸ್ಪಂದಿಸುತ್ತೇನೆ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶಿಕಾರಿಪುರ ಸಹಸ್ರವಳ್ಳಿ ಪ್ರಗತಿಪರ ರೈತ ದುರ್ಗಪ್ಪ ಅಂಗಡಿ, ರಾಜ್ಯ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಗೋವಿಂದರಾಜು, ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಅವರನ್ನು ಸನ್ಮಾನಿಸಲಾಯಿತು. ಆರ್ಯ ಈಡಿಗ ಮಹಾ ಸಂಸ್ಥಾನ ಸೋಲೂರು ಮಠದ ವಿಖ್ಯಾತನಂದ ಸ್ವಾಮೀಜಿ, ನಿಪ್ಪಾಣಿಯ ಮಹಾಕಾಳಿ ಮಹಾಸಂಸ್ಥಾನ ಓಂ ಶಕ್ತಿ ಪೀಠದ ಅರುಣಾನಂದ ತೀರ್ಥ ಸ್ವಾಮೀಜಿ, ಆರ್ಯ ಈಡಿಗ ಮಹಿಳಾ ಸಂಘದ ಅಧ್ಯಕ್ಷೆ ನಳಿನಾಕ್ಷಿ ಸಣ್ಣಪ್ಪ, ನಾರಾಯಣಗುರು ವಿಚಾರ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಸತ್ಯಜಿತ್ ಸುರತ್ಕಲ್, ಬೆಂಗಳೂರು ನಗರ ಘಟಕದ ಅಧ್ಯಕ್ಷ ಲೋಕೇಶ್ ಕೆ.ಎನ್. ಉಪಸ್ಥಿತರಿದ್ದರು.

ತುಮಕೂರಿಗೆ ಚಿರತೆ ಕಾರ್ಯಪಡೆ

ಬೆಂಗಳೂರು: ತುಮಕೂರು ಜಿಲ್ಲೆಯಲ್ಲಿ ಚಿರತೆ ಕಾರ್ಯಪಡೆ ರಚನೆಗೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಅನುಮೋದನೆ ನೀಡಿದ್ದಾರೆ. ಕಾರ್ಯಪಡೆಯಲ್ಲಿ ಒಟ್ಟು 59 ಸಿಬ್ಬಂದಿ ಇರಲಿದ್ದಾರೆ ಎಂದು ಅರಣ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ತುಮಕೂರಿನ ಕುಣಿಗಲ್, ತಿಪಟೂರು, ಮಧುಗಿರಿ, ಕೊರಟಗೆರೆ, ಪಾವಗಡ ತಾಲ್ಲೂಕು ವ್ಯಾಪ್ತಿಯಲ್ಲಿ ಚಿರತೆ–ಮಾನವ ಸಂಘರ್ಷ ತಪ್ಪಿಸಲು ಈ ಕಾರ್ಯಪಡೆ ಕೆಲಸ ಮಾಡಲಿದೆ. ತುಮಕೂರು ಉಪ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ 4 ತಂಡಗಳಾಗಿ ಈ ಕಾರ್ಯಪಡೆ ಕೆಲಸ ಮಾಡಲಿದೆ. ಚಿರತೆ ಹಾವಳಿ ಹೆಚ್ಚು ಇರುವ ಗ್ರಾಮಗಳಲ್ಲಿ ಗಸ್ತು, ರೈತರ ಜಮೀನು ಮತ್ತು ವಸತಿ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಂಡರೆ ಅದನ್ನು ಸರೆ ಹಿಡಿಯುವ ಕಾರ್ಯಾಚರಣೆ ಹೊಣೆಗಾರಿಕೆಯ-ನ್ನು ಕಾರ್ಯಪಡೆಗೆ ನೀಡಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯಪಡೆಯ ಮುಖ್ಯಸ್ಥರಾಗಲಿದ್ದಾರೆ. ತಲಾ ಒಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪಶುವೈದ್ಯರು, ಒಬ್ಬ ವಲಯ ಅರಣ್ಯಾಧಿಕಾರಿ ಇರಲಿದ್ದಾರೆ. ಜತೆಗೆ ನಾಲ್ವರು ಉಪ ವಲಯ ಅರಣ್ಯಾಧಿಕಾರಿ, ಎಂಟು ಗಸ್ತು ಅರಣ್ಯ ಪಾಲಕರು, ಐವರು ವಾಹನ ಚಾಲಕರು ಮತ್ತು 40 ಹೊರಗುತ್ತಿಗೆ ಸಿಬ್ಬಂದಿ ಕಾರ್ಯಪಡೆಯಲ್ಲಿ ಇರಲಿದ್ದಾರೆ.

‘ವೇತನಸಹಿತ ಹೆರಿಗೆ ರಜೆ ನೀಡಿ’

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ವೇತನ ಸಹಿತ ಹೆರಿಗೆ ರಜೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಹೇಳಿದ್ದಾರೆ.

ಈ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿರುವ ಅವರು, ‘ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ನೌಕರರು ಹಾಗೂ ಶುಶ್ರೂಷಕರಿಗೆ ಹೆರಿಗೆ ಭತ್ಯೆಯನ್ನೂ ನೀಡುತ್ತಿಲ್ಲ. ಹೆರಿಗೆ ರಜೆ ಮುಗಿಸಿಕೊಂಡು ಕರ್ತವ್ಯ ನಿರ್ವಹಿಸಲು ಬರುವ ಸಿಬ್ಬಂದಿಯನ್ನು ಕೆಲಸಕ್ಕೂ ನೇಮಿಸಿಕೊ-ಳ್ಳುತ್ತಿಲ್ಲ ಎಂದು ಸುವರ್ಣ ಕರ್ನಾಟಕ ಶುಶ್ರೂಷಾಧಿಕಾರಿಗಳ ಸಂಘವು ಆಯೋಗಕ್ಕೆ ಮನವಿ ಸಲ್ಲಿಸಿದೆ. ಮಹಿಳಾ ನೌಕರರಿಗೆ ವೇತನಸಹಿತ ಹೆರಿಗೆ ರಜೆ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗೆ ನಿರ್ದೇಶಿಸಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರಿನ ಹಲವೆಡೆ ಏಕಾಏಕಿ ಮಾರಾಟ ಸ್ಥಗಿತ, ಗ್ರಾಹಕರ ಪರದಾಟ

ಸಿಗುತ್ತಿಲ್ಲ ನಂದಿನಿ ಸಮೃದ್ಧಿ ಹಾಲು

● ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ನಂದಿನಿ ಸಮೃದ್ಧಿ (ನೇರಳೆ ಪ್ಯಾಕೆಟ್) ಹಾಲು ಸರಬರಾಜು ಸ್ಥಗಿತಗೊಂಡಿದೆ.

ಗ್ರಾಹಕರಿಂದ ನಿರೀಕ್ಷೆಯಷ್ಟು ಪ್ರತಿಕ್ರಿಯೆ ಬಾರದೇ ಇರುವುದರಿಂದ ಸಮೃದ್ಧಿ ಹಾಲು ಸರಬರಾಜು ಕಡಿಮೆ ಮಾಡಲಾಗಿದೆ ಎಂದು ಕರ್ನಾಟಕ ಹಾಲು ಮಹಾಮಂಡಲ ಹೇಳಿದೆ. ಆದರೆ, ಕೆಲ ವರ್ಷದಿಂದ ಬಳಕೆ ಮಾಡುತ್ತಿರುವವರಿಗೂ ನಂದಿನಿ ಮಳಿಗೆಗಳು ಹಾಗೂ ಮಾರಾಟಗಾರರ ಬಳಿ ಸಮೃದ್ಧಿ ಹಾಲು ಸಿಗುತ್ತಿಲ್ಲ ಎನ್ನುವ ಅಭಿಪ್ರಾಯ ಕೇಳಿಬಂದಿದೆ.

ಬೆಂಗಳೂರು ನಗರ ಮಾತ್ರವಲ್ಲದೇ ದಕ್ಷಿಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನಂದಿನಿ ಸಮೃದ್ಧಿ ಹಾಲು ಬೇಡಿಕೆಯಷ್ಟು ಸಿಗುತ್ತಿಲ್ಲ. ಬೆಂಗಳೂರಿನ ಕೆಲವು ಭಾಗಗಳಲ್ಲಿ ಮೂರ್ನಾಲ್ಕು ದಿನಗಳಿಂದ ಸಮೃದ್ಧಿ ಹಾಲು ಸರಬರಾಜು ನಿಲ್ಲಿಸಲಾಗಿದೆ. ಇದರಿಂದ ಇದೇ ಹಾಲು ಬಳಸುವವರು ಪರದಾಡುವ ಸನ್ನಿವೇಶ ನಿರ್ಮಾಣವಾಗಿದೆ.

ಸಮೃದ್ಧಿ ಪಾಶ್ಚರೀಕರಿಸಿದ ಕೆನೆಭರಿತ ಹಾಲನ್ನು ಕ್ರೀಮ್ ಹಾಲು ಎಂದೂ ಕರೆಯಲಾಗುತ್ತದೆ. ಗಟ್ಟಿಯಾದ ಈ ಹಾಲು ಕನಿಷ್ಠ ಶೇ 6ರಷ್ಟು ಜಿಡ್ಡಿನ ಅಂಶ ಹಾಗೂ ಕನಿಷ್ಠ ಶೇ 9ರಷ್ಟು ಎಸ್.ಎನ್.ಎಫ್(ಘನ ವಲ್ಲದ ಕೊಬ್ಬು) ಹೊಂದಿದೆ. ನಂದಿನಿ ಕೆನೆಭರಿತ ಹಾಲು ರುಚಿಕರ, ಸ್ವಾದಿಷ್ಟವೂ ಆಗಿದೆ. ಕಾಫಿ ಮತ್ತು ಗಟ್ಟಿ ಮೊಸರು ತಯಾರಿಕೆಗೆ ಈ ಹಾಲು ಬಳಕೆಯಾಗುತ್ತಿದೆ. ಸಮೃದ್ಧಿ ಹಾಲಿನ ಸಂಗ್ರಹಣೆ ಜತೆಗೆ ಇದನ್ನು ಪರಿಷ್ಕರಿಸಿ ನೀಡಲು ಹೆಚ್ಚಿನ ವೆಚ್ಚ ಆಗುತ್ತಿದೆ. ಇದರ ಖರೀದಿ ಪ್ರಮಾಣವೂ ಕಡಿಮೆಯಿದೆ. ಹಾಲು ಬಳಕೆಯಾಗದೇ ವೆಚ್ಚ ಹೆಚ್ಚಳವಾಗಿ ನಷ್ಟವಾಗುವುದ-ನ್ನು ತಪ್ಪಿಸಲು ಸರಬರಾಜು ಕಡಿಮೆ ಮಾಡಲಾಗುತ್ತಿದೆ ಎನ್ನಲಾಗಿದೆ.

‘ಬೆಂಗಳೂರು, ಮೈಸೂರು ಮಾತ್ರವಲ್ಲದೇ ಶಿವಮೊಗ್ಗ, ದಕ್ಷಿಣ ಕನ್ನಡ, ಹಾಸನ, ತುಮಕೂರು ಸಹಿತ ಹಲವು ಭಾಗಗಳಲ್ಲಿ ಸಮೃದ್ಧಿ ಬಳಕೆ ಮಾಡುತ್ತಾರೆ. ಆದರೆ, ಉತ್ತರ ಕರ್ನಾಟಕದ ಭಾಗಗಳಲ್ಲಿ ಎಮ್ಮೆಯ ಹಾಲಿನ ಬಳಕೆ ಪ್ರಮಾಣ ಹೆಚ್ಚಿರುವು-ದರಿಂದ ಅಲ್ಲಿ ಸಮೃದ್ಧಿ ಹಾಲು ಖರೀದಿ ಪ್ರಮಾಣ ಹೆಚ್ಚಿದೆ’ ಎಂದು ಹಾಲು ಮಹಾಮಂಡಳದ ಅಧಿಕಾರಿಯೊಬ್ಬರು ತಿಳಿಸಿದರು.

ಮೈಸೂರಲ್ಲಿ ರಿಯಾಯಿತಿ



ಮೈಸೂರು ಹಾಲು ಒಕ್ಕೂಟವು ಸಮೃದ್ಧಿ ಹಾಲು ಬಳಕೆ ಪ್ರೋತ್ಸಾಹಿಸಲು ರಿಯಾಯಿತಿಯನ್ನೂ ಘೋಷಿಸಿದೆ. ಹಾಲಿನ ಎಂಆರ್‌ಪಿ ದರದ ಮೇಲೆ ಶೇ 10ರಷ್ಟನ್ನು ಕಡಿತ ಮಾಡಲಾಗಿದೆ.

‘ವಿಜಯಪುರ– ಬಾಗಲಕೋಟೆ ಹಾಲು ಒಕ್ಕೂಟವು ಸಮೃದ್ಧಿ ಹಾಲು ಮಾರಾಟವನ್ನು ತಾಂತ್ರಿಕ ಕಾರಣದಿಂದ ಸ್ಥಗಿತಗೊಳಿಸಿತ್ತು. ಕೆಲವು ದಿನಗಳ ನಂತರ ಪುನಾರಂಭಗೊಳಿಸಲಾಗಿದೆ’ ಎಂದು ವ್ಯವಸ್ಥಾಪಕ ನಿರ್ದೇಶಕ ಶಿವಶಂಕರಸ್ವಾಮಿ ಹೇಳಿದರು.

ಸೋಮವಾರ, ಅಕ್ಟೋಬರ್ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 276 | ಪುಟ 14

prajavani.net prajavani ● www.prajavani.net

ಕಾಡಿನತ್ತ ಸವಾರಿ...

ಮೈಸೂರು ದಸರಾ ಜಂಬೂಸವಾರಿಯಲ್ಲಿ ಅಂಬಾರಿ ಹೊತ್ತಿದ್ದ 'ಅಭಿಮನ್ಯು' ಆನೆ, ಮಾವುತ ವಸಂತ ಅವರೊಂದಿಗೆ ಕಾಡಿನತ್ತ ತೆರಳಲು ಸಜ್ಜಾದ ಕ್ಷಣ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ರಾಂತಿ ಮಿಂಚು

ಕೊಲಂಬೊದಲ್ಲಿ ಭಾನುವಾರ ನಡೆದ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ಎದುರು ಕ್ರಾಂತಿ ಗೌಡ್ ಮೂರು ವಿಕೆಟ್ ಪಡೆದರು. ಭಾರತ 88 ರನ್‌ಗಳಿಂದ ಗೆಲುವು ಸಾಧಿಸಿತು



ಬೆಂಗಳೂರು: ಮನೆ ಬೆಲೆ ಶೇ 10ರಷ್ಟು ಏರಿಕೆ 8 | 'ಒಕ್ಕಲಿಗರೆಲ್ಲರೂ ಹಿಂದೆ ಜೈನರಾಗಿದ್ದರು' 3

ಹುಲಿ ಹತ್ಯೆ: ನಾಲ್ವರು ಆರೋಪಿಗಳ ಬಂಧನ

ಹನೂರು (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ನಡೆದ ಹುಲಿ ಹತ್ಯೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ಪಚ್ಚೆಮಲ್ಲು, ಗಣೇಶ್, ಗೋವಿಂದೇಗೌಡ ಹಾಗೂ ಶಂಪು ಬಂಧಿತರು. ಆರೋಪಿಗಳನ್ನು ಭಾನುವಾರ ಕೊಳ್ಳೇಗಾಲದ ಉಪ ವಿಭಾಗೀಯ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಜೆಎಂಎಫ್‌ಸಿ ನ್ಯಾಯಾಧೀಶರ ನಿವಾಸದಲ್ಲಿ ಹಾಜರುಪಡಿಸಲಾಯಿತು. ಈ ವೇಳೆ ನ್ಯಾಯಾಧೀಶರು ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಿದರು.

ಪ್ರತೀಕಾರದ ಹತ್ಯೆ: 'ಕಾಡಿನಲ್ಲಿ ಮೇಯಲು ಹೋಗಿದ್ದ ಹಸುವನ್ನು ತಿಂದು ಹಾಕಿದ್ದಕ್ಕೆ ಪ್ರತೀಕಾರವಾಗಿ ಹುಲಿಗೆ ವಿಷಹಾಕಿ ಹತ್ಯೆ ಮಾಡಲಾಗಿದೆ' ಎಂಬುದು ತನಿಖೆಯಿಂದ ತಿಳಿದುಬಂದಿದೆ.

'ಪ್ರತ್ಯೇಕ ಧರ್ಮ' ಕೂಗು ಮುನ್ನೆಲೆಗೆ

ಸಿ.ಎಂ ಸಮ್ಮುಖದಲ್ಲಿ ಲಿಂಗಾಯತ ಮಠಾಧೀಶರಿಂದ ಒಕ್ಕೊರಲ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಮಾಡಿರುವ ಶಿಫಾರಸು ಆಧಾರದಲ್ಲಿ ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆಯನ್ನು ಕೇಂದ್ರ ಸರ್ಕಾರ ನೀಡಬೇಕು' ಎನ್ನುವ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಪ್ರತ್ಯೇಕ ಧರ್ಮದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲೇ ಲಿಂಗಾಯತ ಮಠಾಧೀಶರು, ರಾಜಕೀಯ ಮುಖಂಡರು, ಸಮುದಾಯದ ಪ್ರಮುಖರು ಪ್ರಸ್ತಾಪಿಸಿದರು. ಅಲ್ಲದೇ ಪ್ರತ್ಯೇಕ ಧರ್ಮದ ಮಾನ್ಯತೆಗಾಗಿ ಜಾಗೃತಿ ಮುಂದುವರಿಸುವ ನಿರ್ಣಯವನ್ನೂ ಕೈಗೊಳ್ಳಲಾಯಿತು.

ಲಿಂಗಾಯತ ಮಠಾಧೀಶರ ಒಕ್ಕೂಟದ ಅಧ್ಯಕ್ಷರಾದ ಭಾಲ್ಕಿ ಹಿರೇ ಮಠದ ಶ್ರೀ ಬಸವಲಿಂಗ ಪಟ್ಟದ್ದೇವರು ಮಾತನಾಡಿ, 'ಸಿದ್ದರಾಮಯ್ಯ ಅವರ ಒತ್ತಾಸೆಯಿಂದಾಗಿ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಶಿಫಾರಸು ಮಾಡಲಾಗಿದೆ' ಎಂದರು. 5

ಐದು ನಿರ್ಣಯಗಳು

- ಲಿಂಗಾಯತ ಧರ್ಮ ಕನ್ನಡದ ಧರ್ಮ. ಧರ್ಮಕ್ಕಿಂತ ದೇಶ ಮೊದಲು. ರಾಷ್ಟ್ರಪ್ರಜ್ಞೆಯೊಂದಿಗೆ ದೇಶದ ಏಕತೆಗೆ ಸದಾ ಶ್ರಮಿಸುವುದು
- ಪ್ರತ್ಯೇಕ ಧರ್ಮದ ಮಾನ್ಯತೆಗೆ ನಿರಂತರವಾಗಿ ಜಾಗೃತಿ ಮುಂದುವರಿಸಬೇಕು
- ಲಿಂಗಾಯತರಲ್ಲಿನ ಒಳಪಂಗಡಗಳ ಭೇದ ತೊರೆದು, ಉಪಜಾತಿ ಮಧ್ಯೆ ವೈವಾಹಿಕ ಸಂಬಂಧ ಬೆಳೆಸಬೇಕು
- ಪ್ರತಿಯೊಬ್ಬರೂ ಇಷ್ಟಲಿಂಗ ಧಾರಣೆ ಮಾಡಬೇಕು
- ಜನನದಿಂದ-ಮರಣದ ವರೆಗೆ ಶರಣ ಸಂಸ್ಕೃತಿ ಅನುಸರಿಸಬೇಕು



ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ಭಾನುವಾರ ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಬಸವ ಸಂಸ್ಕೃತಿ ಅಭಿಯಾನ ಸಮಾರೋಪ ಸಮಾರಂಭದಲ್ಲಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು ಪ್ರಜಾವಾಣಿ ಚಿತ್ರ

'ಮೆಟ್ರೊಗೆ ಬಸವೇಶ್ವರರ ಹೆಸರು: ಕೇಂದ್ರಕ್ಕೆ ಪ್ರಸ್ತಾವ'

'ನಮ್ಮ ಮೆಟ್ರೊಗೆ ಬಸವೇಶ್ವರರ ಹೆಸರಿಡುವ ಕುರಿತು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ನಮ್ಮ ಮೆಟ್ರೊ ರಾಜ್ಯ ಸರ್ಕಾರದ ಯೋಜನೆ ಆಗಿದ್ದರೆ ಇವತ್ತೇ ಬಸವ ಮೆಟ್ರೊ ಎಂದು ಘೋಷಣೆ ಮಾಡಿ ಬಿಡುತ್ತಿದ್ದೆ. ಆದರೆ, ಕೇಂದ್ರ ಸರ್ಕಾರದ ಅನುಮತಿಯೂ ಬೇಕಾಗಿರುವುದರಿಂದ ಪತ್ರ ಬರೆಯಲಾಗುವುದು' ಎಂದರು.

ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 'ನಮ್ಮ ಮೆಟ್ರೊದ ಕೆಲ ನಿಲ್ದಾಣಗಳಿಗೆ ಅಂಬೇಡ್ಕರ್, ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಸಹಿತ ಹಲವರ ಹೆಸರು ಇಡಲಾಗಿದೆ. ಮೆಟ್ರೊಕ್ಕೆ ಬಸವೇಶ್ವರರ ಹೆಸರಿಡುವುದು ಸೂಕ್ತ' ಎಂದರು.

ಚುನಾವಣೆ: ಕೆಲ ಹೊಸ ಉಪಕ್ರಮ ಜಾರಿ

ಪ್ರಜಾವಾಣಿ ವಾರ್ತೆ/ಪಿಟಿಐ

ಪಟ್ನಾ: 'ವಿಶೇಷ ಸಮಗ್ರ ಪರಿಷ್ಕರಣೆ' ಯಿಂದಾಗಿ (ಎಸ್‌ಐಆರ್) ಬಿಹಾರದಲ್ಲಿ ಮತದಾರರ ಪಟ್ಟಿಯ 'ಶುದ್ಧೀಕರಣ' ವಾಗಿದೆ. ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆ ವೇಳೆ ಹಲವಾರು ಹೊಸ ಉಪಕ್ರಮಗಳನ್ನು ಕೈಗೊಳ್ಳಲಾಗುವುದು ಹಾಗೂ ಇವುಗಳನ್ನು ದೇಶದಾದ್ಯಂತ ಜಾರಿಗೊಳಿಸಲಾಗುವುದು ಎಂದು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಭಾನುವಾರ ಹೇಳಿದ್ದಾರೆ.

ಚುನಾವಣೆ ಸಿದ್ಧತೆಗಳನ್ನು ಪರಿಶೀಲಿಸಲು ಕೈಗೊಂಡಿದ್ದ ರಾಜ್ಯ ಪ್ರವಾಸ ಮುಕ್ತಾಯಗೊಳಿಸಿದ ನಂತರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.



ನೋಂದಣಿ ಮಾಡಿಸಿದ 15 ದಿನಗಳ ಒಳಗಾಗಿ ಮತದಾರರಿಗೆ ಭಾವಚಿತ್ರವಿರುವ ಗುರುತಿನ ಚೀಟಿ (ಎಪಿಕ್) ನೀಡುವುದು ಸೇರಿದಂತೆ ಹಲವಾರು ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು(ಎಸ್‌ಒಪಿ) ಈ ಹೊಸ ಉಪಕ್ರಮಗಳು ಒಳಗೊಂಡಿರಲಿವೆ ಎಂದು ತಿಳಿಸಿದರು.

ಮತಗಟ್ಟೆಗಳ ಬಳಿ ಮತದಾರರು ಭಾರಿ ಸಂಖ್ಯೆಯಲ್ಲಿ ಸೇರಿ, ಉದ್ದನೆಯ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಒಂದು ಮತಗಟ್ಟೆಯಲ್ಲಿ 1,200ಕ್ಕೂ ಹೆಚ್ಚು ಮತದಾರರು ಇರದಂತೆ ನೋಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.

'ಮತದಾರರು ತಮ್ಮ ಮೊಬೈಲ್ ನೊಂದಿಗೆ ಬಂದಿರುತ್ತಾರೆ. ಅದನ್ನು ಬಿಟ್ಟಿರಲು ಯಾರೂ ಇಚ್ಛಿಸುವುದಿಲ್ಲ. ಹೀಗಾಗಿ, ಮೊಬೈಲ್ ಫೋನ್‌ಗಳನ್ನು ಇರಿಸುವುದಕ್ಕಾಗಿ ವಿಶೇಷ ಕೌಂಟರ್‌ಗಳನ್ನು ಸ್ಥಾಪಿಸಲಾಗುವುದು. ಮತ ಚಲಾಯಿಸಿದ ಬಳಿಕ ಮತದಾರರು ತಮ್ಮ ಮೊಬೈಲ್‌ಗಳನ್ನು ಮರಳಿ ಪಡೆಯುವ ವ್ಯವಸ್ಥೆ ಮಾಡಲಾಗುತ್ತದೆ' ಎಂದು ವಿವರಿಸಿದರು. 5



ಬಿಹಾರದಲ್ಲಿ ಎಸ್‌ಐಆರ್ ಬಳಿಕ ಮತದಾರರ ಪಟ್ಟಿ ಸಿದ್ಧಪಡಿಸುವ ವೇಳೆ ಯಾವುದೇ ತಪ್ಪು ಆಗಿಲ್ಲ. ನವೆಂಬರ್ 22ರ ಒಳಗಾಗಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು

ಜ್ಞಾನೇಶ್ ಕುಮಾರ್, ಮುಖ್ಯ ಚುನಾವಣಾ ಆಯುಕ್ತ


ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಾಹಿತಿ ಮೊಗಳ್ಳಿ ಗಣೇಶ್ ನಿಧನ

ಹೊಸಪೇಟೆ (ವಿಜಯನಗರ): ಸಾಹಿತಿ ಪ್ರೊ.ಮೊಗಳ್ಳಿ ಗಣೇಶ್ ಭಾನುವಾರ ಬೆಳಿಗ್ಗೆ ಇಲ್ಲಿನ ತಮ್ಮ ಮನೆಯಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರಿಯರಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 26 ವರ್ಷ ಪ್ರಾಧ್ಯಾಪಕರಾಗಿ, ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸಿದ್ದು 2024ರ ಜೂನ್ 30ರಂದು ನಿವೃತ್ತರಾಗಿದ್ದರು. ಸದ್ಯ ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾ- ಲಯದ ಸಿಂಡಿಕೇಟ್ ಸದಸ್ಯರಾಗಿದ್ದರು.



ಗಣೇಶ್ ಅವರು 7 ಕಥಾಸಂಕಲನಗಳು, 6 ಕಾದಂಬರಿಗಳು, 18 ಸಂಸ್ಕೃತಿ ಚಿಂತನ ಕೃತಿಗಳು, 2 ಕವನ ಸಂಕಲನಗಳು, 4 ನಾಟಕಗಳು, 2 ಪ್ರಬಂಧ ಸಂಕಲನಗಳು, 1 ಆತ್ಮಕತೆ, 6 ಸಂಪಾದಿತ ಕೃತಿಗಳು, ಜಾನಪದ ಅಧ್ಯಯನ ಗ್ರಹಿಕೆಗೆ ಸಂಬಂಧಿಸಿದಂತೆ 10 ಕೃತಿಗಳನ್ನು ರಚಿಸಿದ್ದಾರೆ. ಗಣೇಶ್ ಅವರ ಅಂತ್ಯಕ್ರಿಯೆ ಮಂಡ್ಯದ ಮದ್ದೂರು ತಾಲ್ಲೂಕಿನ ಮಾದನಾಯಕನ ಹಳ್ಳಿಯ ತೋಟದಲ್ಲಿ ಸಂಜೆ ನಡೆಯಿತು.

ಸರ್ಕಾರಿ ವೈದ್ಯ ಸೆರೆ: ಕಂಪನಿ ವಿರುದ್ಧ ಎಫ್‌ಐಆರ್

ಛಿಂದ್ವಾಢ (ಮಧ್ಯ ಪ್ರದೇಶ)(ಪಿಟಿಐ): ಕೆಮ್ಮಿನ ಸಿರಪ್ ಸೇವನೆ ಬಳಿಕ ಮೂತ್ರಪಿಂಡ ವೈಫಲ್ಯದಿಂದಾಗಿ 14ಕ್ಕೂ ಹೆಚ್ಚು ಮಕ್ಕಳು ಮೃತಪಟ್ಟ ಬೆನ್ನಲ್ಲೇ, ಮಧ್ಯಪ್ರದೇಶ ಸರ್ಕಾರ ಹಲವು ಕಠಿಣ ಕ್ರಮಗಳನ್ನು ಕೈಗೊಂಡಿದೆ.



ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದಡಿ ಸರ್ಕಾರಿ ಆಸ್ಪತ್ರೆಯ ವೈದ್ಯರೊಬ್ಬರನ್ನು ಬಂಧಿಸಲಾಗಿದೆ ಹಾಗೂ ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನ ತಯಾರಿಕಾ ಕಂಪನಿ, ತಮಿಳುನಾಡಿನ ಶ್ರೇಸನ್ ಫಾರ್ಮಾಸ್ಯುಟಿಕಲ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

'ಛಿಂದ್ವಾಢ ಜಿಲ್ಲೆ ಪರಾಸಿಯಾ ಪೊಲೀಸ್ ಠಾಣೆಯಲ್ಲಿ ಡಾ.ಪ್ರವೀಣ ಸೋನಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸರ್ಕಾರಿ ಆಸ್ಪತ್ರೆಯ ವೈದ್ಯರಾಗಿದ್ದರೂ ಅವರು ಖಾಸಗಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಪಾಂಡೆ ಸುದ್ದಿಗಾರರಿಗೆ ತಿಳಿಸಿದ್ದಾರೆ. 8

ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನಿಂದ ಮಕ್ಕಳ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಇದ್ದರೂ ತಿಂಗಳುಗಟ್ಟಲೆ ಈ ಸಿರಪ್ ಅನ್ನು ಡಾ.ಪ್ರವೀಣ ಸೋನಿ ಶಿಫಾರಸು ಮಾಡಿದ್ದರು

ಅಜಯ್ ಪಾಂಡೆ, ಛಿಂದ್ವಾಢ ಎಸ್‌ಪಿ

ಪ್ರಮುಖ ಅಂಶಗಳು

- ವೈದ್ಯ ಪ್ರವೀಣ ಸೋನಿ ಹಾಗೂ ಶ್ರೇಸನ್ ಫಾರ್ಮಾಸ್ಯುಟಿಕಲ್ ಕಂಪನಿ ವಿರುದ್ಧ ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆ-1940ರ ಸೆಕ್ಷನ್ 27ಎ ಅಡಿಯೂ ಪ್ರಕರಣ ದಾಖಲು
- ಪರಾಸಿಯಾ ಉಪವಿಭಾಗ ವ್ಯಾಪ್ತಿಯಲ್ಲಿ 11, ಛಿಂದ್ವಾಢ ನಗರದಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದರೆ, ಚೌರಾಯಿ ತಹಸೀಲ್ ವ್ಯಾಪ್ತಿಯಲ್ಲಿ ಒಂದು ಮಗು ಮೃತಪಟ್ಟಿದೆ
- ಮೃತಪಟ್ಟ 14 ಮಕ್ಕಳ ಕುಟುಂಬಗಳಿಗೆ ತಲಾ ₹4 ಲಕ್ಷ ನೆರವು ಘೋಷಿಸಲಾಗಿದೆ
- ಕೆಮ್ಮಿನ ಸಿರಪ್ ಸೇವನೆಯಿಂದ ಬಾಧಿತ ಮಕ್ಕಳಿಂದ ಸಂಗ್ರಹಿಸಿರುವ ಮಾದರಿಗಳನ್ನು ಪರೀಕ್ಷೆಗಾಗಿ ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ ಕಳುಹಿಸಲಾಗಿದೆ

ನೇಪಾಳದಲ್ಲಿ ಪ್ರವಾಹ: 52 ಸಾವು

ಕಠ್ಮಂಡು / ನವದೆಹಲಿ (ಪಿಟಿಐ): ಭಾರಿ ಮಳೆಯಿಂದ ನೇಪಾಳದಲ್ಲಿ ಸಂಭವಿಸಿದ ಭೂಕುಸಿತ ಮತ್ತು ಪ್ರವಾಹದ ಪರಿಣಾಮ 52 ಮಂದಿ ಮೃತಪಟ್ಟಿದ್ದಾರೆ.

ಶುಕ್ರವಾರ ರಾತ್ರಿಯಿಂದ ಪೂರ್ವ ನೇಪಾಳದ ಹಲವೆಡೆ ನಿರಂತರವಾಗಿ ಮಳೆ ಸುರಿಯುತ್ತಿದೆ. ಶನಿವಾರ ರಾತ್ರಿ ಸಂಭವಿಸಿದ ಅವಘಡಗಳಲ್ಲಿ ಕೋಶಿ ಪ್ರಾಂತ್ಯದ ಇಲಾಮ್ ಜಿಲ್ಲೆಯೊಂದರಲ್ಲೇ 37 ಮಂದಿ ಮೃತಪಟ್ಟಿದ್ದಾರೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ. ವಿವಿಧ ಭಾಗಗಳಲ್ಲಿ ಹಲವರು ನಾಪತ್ತೆಯಾಗಿದ್ದಾರೆ.

ವಿವರ 8

ಡಾರ್ಜಿಲಿಂಗ್, ಮಿರಿಕ್ ಪ್ರದೇಶದಲ್ಲಿ ಭಾರಿ ಮಳೆ

ಭೂಕುಸಿತ, ಪ್ರವಾಹ: 23 ಸಾವು

ಕೋಲ್ಕತ್ತ/ಡಾರ್ಜಿಲಿಂಗ್ (ಎಎಫ್‌ಪಿ/ಪಿಟಿಐ): ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿರುವ ಡಾರ್ಜಿಲಿಂಗ್ ಹಾಗೂ ಮಿರಿಕ್ ಪ್ರದೇಶದಲ್ಲಿ ಶನಿವಾರ ರಾತ್ರಿ ಸುರಿದ ಭಾರಿ ಮಳೆಯಿಂದಾದ ಭೂಕುಸಿತ ಹಾಗೂ ಪ್ರವಾಹದಿಂದ ಮಕ್ಕಳು ಸೇರಿದಂತೆ ಕನಿಷ್ಠ 23 ಮಂದಿ ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ.

ಒಂದೇ ರಾತ್ರಿಯಲ್ಲಿ 300 ಮಿ.ಮೀ. ಮಳೆಯಾಗಿದ್ದು, ನದಿಗಳು ಉಕ್ಕಿ ಹರಿದಿವೆ. ಇದರಿಂದ ಹಲವೆಡೆ ವ್ಯಾಪಕ ಹಾನಿಯಾಗಿದೆ. ನೀರು ರಭಸವಾಗಿ ಹರಿಯುತ್ತಿದ್ದು, ಸೇತುವೆ ಹಾಗೂ ರಸ್ತೆಗಳಿಗೆ ಹಾನಿಯಾಗಿದೆ. ಅನೇಕ ಮನೆಗಳು ಕೊಚ್ಚಿಹೋಗಿವೆ. ಹಲವು ಹಳ್ಳಿಗಳಿಗೆ ಸಂಪರ್ಕ ಕಡಿತಗೊಂಡಿದೆ. ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಎರಡು ಕಬ್ಬಿಣದ ಸೇತುವೆಗಳು ಕುಸಿದಿವೆ.

ಜಲಪಾಯಿಗುಡಿ, ಅಲಿಪುರ ದೂವಾರ್, ಸರ್ಸಾಲಿ, ಜಸ್ಬಿರ್‌ಗಾಂವ್, ಮಿರಿಕ್ ಬಸ್ತಿ, ಧಾರ್‌ಗಾಂವ್ (ಮೆಚಿ), ನಾಗರಾಕಾಟಾ, ಮಿರಿಕ್ ಸರೋವರ ಪ್ರದೇಶದಲ್ಲಿ ಸಾವು-ನೋವು ಸಂಭವಿಸಿವೆ. ಮಿರಿಕ್ ಪ್ರದೇಶದಲ್ಲಿ ಭೂಕುಸಿತ ಉಂಟಾಗಿ ಕನಿಷ್ಠ 11 ಮಂದಿ ಅಸುನೀಗಿದ್ದಾರೆ. ಏಳು ಮಂದಿ ಗಾಯಾಳುಗಳನ್ನು ರಕ್ಷಿಸಲಾಗಿದೆ.

ಡಾರ್ಜಿಲಿಂಗ್‌ನಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಧಾರಗಾಂವ್, ನಾಗರಾಕಾಟಾ ಪ್ರದೇಶದಲ್ಲಿ ಅವಶೇಷಗಳಡಿ ಸಿಲುಕಿದ್ದ 40 ಜನರನ್ನು ರಕ್ಷಿಸಲಾಗಿದೆ. ಅನೇಕ ಮನೆಗಳು ನೆಲಸಮವಾಗಿವೆ.

ಈ ಘಟನೆಯಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ಪರಿಹಾರ ಹಾಗೂ ಒಬ್ಬ ಸದಸ್ಯರಿಗೆ ಉದ್ಯೋಗ ನೀಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ್ದಾರೆ.



ಡಾರ್ಜಿಲಿಂಗ್‌ನಲ್ಲಿ ಉಂಟಾದ ಭೂಕುಸಿತದಿಂದಾಗಿ ಸೇತುವೆ ಕುಸಿದಿದ್ದು, ಅಲ್ಲಿ ಸಿಲುಕಿದ್ದ ಜನರನ್ನು ರಕ್ಷಿಸಲಾಯಿತು —ಪಿಟಿಐ ಚಿತ್ರ

ದುರಂತದಲ್ಲಿ ಅನೇಕರು ಮೃತಪಟ್ಟಿರುವುದು ನೋವು ತಂದಿದೆ. ಸಂತ್ರಸ್ತರಿಗೆ ಅಗತ್ಯ ನೆರವು ನೀಡಲಾಗುವುದು. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ

ನರೇಂದ್ರ ಮೋದಿ, ಪ್ರಧಾನಿ

ಪಶ್ಚಿಮ ಬಂಗಾಳ, ಸಿಕ್ಕಿಂ ರಾಜ್ಯಗಳಲ್ಲಿ ಭೂಕುಸಿತ ಉಂಟಾಗಿದ್ದು, ಅನೇಕರು ಮೃತಪಟ್ಟಿದ್ದಾರೆ. ಕೇಂದ್ರ ಸರ್ಕಾರವು ಈ ರಾಜ್ಯಗಳಿಗೆ ಪರಿಹಾರ ಘೋಷಿಸಬೇಕು

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಅಕ್ರಮ ಬಂಧನ: ವ್ಯಕ್ತಿಗೆ ₹2 ಲಕ್ಷ ಪರಿಹಾರ

ಮುಂಬೈ (ಪಿಟಿಐ): 20 ವರ್ಷದ ವ್ಯಕ್ತಿಯೊಬ್ಬರನ್ನು ಬಂಧಿಸುವಂತೆ ಜಲಗಾಂವ್‌ನ ಜಿಲ್ಲಾ ಮ್ಯಾಜಿಸ್ಟ್ರೇಟ್ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿರುವ ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠವು, ವ್ಯಕ್ತಿಗೆ ₹2 ಲಕ್ಷ ಪರಿಹಾರ ನೀಡುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಸೂಚಿಸಿದೆ.

ಅಲ್ಲದೇ, ಬಂಧನ ಆದೇಶ ಹೊರಡಿಸಿದ್ದ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ ವೇತನದಲ್ಲಿ ಈ ಪರಿಹಾರ ಮೊತ್ತವನ್ನು ವಸೂಲಿ ಮಾಡುವಂತೆಯೂ ಆದೇಶಿಸಿದೆ.

ತಮ್ಮನ್ನು ಬಂಧಿಸುವಂತೆ ಜಿಲ್ಲಾ ನ್ಯಾಯಾಲಯ ಆದೇಶ ಹೊರಡಿಸಿದ್ದನ್ನು ಪ್ರಶ್ನಿಸಿ, ದೀಕ್ಷಾಂತ ಸಪ್ಕಾಲೆ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿಭಾ ಕಂಕಣವಾಡಿ ಹಾಗೂ ಹಿತೇನ್ ವೆನೆಗಾವ್ಕರ್ ಅವರು ಇದ್ದ ನ್ಯಾಯಪೀಠ ನಡೆಸಿತು.

'ನನ್ನನ್ನು ಬಂಧಿಸುವ ಕುರಿತು ಕಳೆದ ವರ್ಷ ಜುಲೈನಲ್ಲಿ ಜಿಲ್ಲಾ ನ್ಯಾಯಾಲಯ ಆದೇಶ ಹೊರಡಿಸಿತ್ತು. ಆ ಆದೇಶವನ್ನು ಆಗ ತಕ್ಷಣವೇ ನನಗೆ ನೀಡಿರಲಿಲ್ಲ. ಬೇರೊಂದು ಪ್ರಕರಣದಲ್ಲಿ ಜೈಲಿನಲ್ಲಿದ್ದ ನಾನು ಜಾಮೀನು ಪಡೆದು ಮೇನಲ್ಲಿ ಹೊರಗೆ ಬಂದಾಗ, ಈ ಬಂಧನ ಆದೇಶವನ್ನು ನನಗೆ ನೀಡಲಾಯಿತಲ್ಲದೇ, ನನ್ನನ್ನು ಮತ್ತೊಮ್ಮೆ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ' ಎಂದು ದೀಕ್ಷಾಂತ ಅವರು ಮೇಲ್ಮನವಿಯಲ್ಲಿ ವಿವರಿಸಿದ್ದರು.

ಓರ್ಝೋನ್ ಅರ್ಬಾನಾ ಪ್ರಕರಣ: ಕೆಂಪೇಗೌಡ ವಿಮಾನ ನಿಲ್ದಾಣದ ಬಳಿ ವಸತಿ ಸಮುಚ್ಚಯ

₹423 ಕೋಟಿಯ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರಿಂದ ₹927 ಕೋಟಿ ಸಂಗ್ರಹಿಸಿ, ಫ್ಲ್ಯಾಟ್ ನೀಡದೆ ವಂಚಿಸಿದ ಪ್ರಕರಣದಲ್ಲಿ ಓರ್ಝೋನ್ ಅರ್ಬಾನಾ ಇನ್‌ಫ್ರಾ ಡೆವಲಪರ್ಸ್‌ನ ಪ್ರವರ್ತಕ ಎಸ್. ವಾಸುದೇವನ್ ಅವರ ಕುಟುಂಬಕ್ಕೆ ಸೇರಿದ ₹423 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಓರ್ಝೋನ್ ಅರ್ಬಾನಾ ಡೆವಲಪರ್ಸ್ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುತ್ತಿದೆ. 2015-16ರ ವೇಳೆ ಸಾವಿರಾರು ಗ್ರಾಹಕರಿಗೆ ಫ್ಲ್ಯಾಟ್‌ಗಳನ್ನು ಮಾರಾಟ ಮಾಡಿತ್ತು.

ಹಲವೆಡೆ ಆಸ್ತಿ ಖರೀದಿ



'ವಂಚಿಸಿದ ಹಣದಲ್ಲಿ ವಾಸುದೇವನ್ ಕುಟುಂಬದವರು ದೇಶದ ಹಲವೆಡೆ ಮತ್ತು ವಿದೇಶಗಳಲ್ಲಿ ಸ್ಥಿರಾಸ್ತಿಗಳನ್ನು ಖರೀದಿಸಿದ್ದಾರೆ. ಹಲವು ಐಷಾರಾಮಿ ಕಾರುಗಳನ್ನು ಖರೀದಿಸಿದ್ದಾರೆ. ಷೇರು ಮಾರುಕಟ್ಟೆ ಮತ್ತು ವಿವಿಧ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದಾರೆ. ಈ ಎಲ್ಲವನ್ನೂ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ಇ.ಡಿ ಮಾಹಿತಿ ನೀಡಿದೆ.

2018ರ ಅಂತ್ಯದ ವೇಳೆಗೆ ಗ್ರಾಹಕರಿಗೆ ಫ್ಲ್ಯಾಟ್‌ಗಳನ್ನು ಹಸ್ತಾಂತರಿಸಬೇಕಿತ್ತು. ಆದರೆ 2024ರ ವೇಳೆಗೆ ಶೇ 49ರಷ್ಟು ಫ್ಲ್ಯಾಟ್‌ಗಳು ಮಾತ್ರ ಪೂರ್ಣವಾಗಿದ್ದವು. ಕಂಪನಿಯ ವಿರುದ್ಧ ಗ್ರಾಹಕರು ಹಲವು ದೂರುಗಳನ್ನು ನೀಡಿದ್ದರು. ಆ ದೂರುಗಳ ಆಧಾರದಲ್ಲಿ ಇ.ಡಿ ತನಿಖೆ ಆರಂಭಿಸಿತ್ತು. ಇದೇ ಆಗಸ್ಟ್ 10ರಂದು ದೇಶದ ಹಲವೆಡೆ ಶೋಧ ಕಾರ್ಯ ನಡೆಸಿತ್ತು.

'ಗ್ರಾಹಕರಿಂದ ಪಡೆದ ಠೇವಣಿ, ಫ್ಲ್ಯಾಟ್‌ಗಳ ಮೇಲೆ ಪಡೆದ ಸಾಲದ ಮೊತ್ತ ಎಲ್ಲವನ್ನೂ ವಾಸುದೇವನ್ ಅವರು ತಮ್ಮ ಕುಟುಂಬದ ಸದಸ್ಯರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದರು. ವಂಚನೆಯ ಉದ್ದೇಶದಿಂದಲೇ ಹೀಗೆ ಮಾಡಿದ್ದಾರೆ' ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

'ಬೆಂಗಳೂರು, ದೇವನಹಳ್ಳಿ, ಮುಂಬೈನಲ್ಲಿರುವ ಸ್ಥಿರಾಸ್ತಿಗಳನ್ನು ಈಗ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ವಾಣಿಜ್ಯ ಸಂಕೀರ್ಣ, ನಿರ್ಮಾಣ ಹಂತದ ವಸತಿ ಸಮುಚ್ಚಯ, ನಿವೇಶನ ಮತ್ತು ವಿಲ್ಲಾಗಳು ಇದರಲ್ಲಿ ಸೇರಿವೆ' ಎಂದಿವೆ.

'ಪ್ರಕರಣ ಇನ್ನೂ ತನಿಖೆಯ ಹಂತದಲ್ಲಿದೆ. ತನಿಖೆ ಪೂರ್ಣಗೊಂಡ ನಂತರ, ವಂಚನೆಗೆ ಒಳಗಾದ ಗ್ರಾಹಕರಿಗೆ ಅವರ ಹಣ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಇ.ಡಿ ಮೂಲಗಳು ತಿಳಿಸಿವೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

'ಪತ್ನಿಯೊಂದಿಗಿನ ಖಾಸಗಿ ಕ್ಷಣಗಳ ದೃಶ್ಯ ಸೆರೆ ಹಿಡಿದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯೊಂದಿಗೆ ಕಳೆದ ಖಾಸಗಿ ಕ್ಷಣಗಳ ದೃಶ್ಯಗಳನ್ನು ಮೊಬೈಲ್ ಹಾಗೂ ಕ್ಯಾಮೆರಾದಲ್ಲಿ ಸೆರೆಹಿಡಿದು ವಿದೇಶದಲ್ಲಿರುವ ಸ್ನೇಹಿತನಿಗೆ ಕಳುಹಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಆರೋಪಿಯು ವಿಡಿಯೊ ಮೂಲಕ ಸ್ಪಷ್ಟೀಕರಣ ನೀಡಿದ್ದಾನೆ.

ಆರೋಪಿ ಸೈಯದ್ ಇನಾಮುಲ್ ಹಕ್, 'ಪತ್ನಿಯೊಂದಿಗಿನ ಖಾಸಗಿ ಕ್ಷಣಗಳ ದೃಶ್ಯವನ್ನು ಸೆರೆಹಿಡಿದಿಲ್ಲ. ಬೇರೆ ಮಹಿಳೆಯರೊಂದಿಗೆ ಸಂಬಂಧ ಹೊಂದಿಲ್ಲ. ಪತ್ನಿ ನನ್ನ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಶೀಘ್ರದಲ್ಲೇ ಪೊಲೀಸರ ಮುಂದೆ ಶರಣಾಗಿ ವಾಸ್ತವ ಸಂಗತಿಯನ್ನು ಹೇಳುತ್ತೇನೆ' ಎಂದು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾನೆ.

'ಅಂದಾಜು ₹14 ಲಕ್ಷ ಬೆಲೆಬಾಳುವ ಚಿನ್ನಾಭರಣಗಳನ್ನು ಅವಳ ಬಳಿಯೇ ಬಿಟ್ಟು ಬಂದಿದ್ದೇನೆ. ನನಗೆ ಹಣ, ಚಿನ್ನದ ಆಸೆ ಇಲ್ಲ. ನನ್ನ ತಂದೆ-ತಾಯಿ ಹಾಗೂ ಸಹೋದರಿಯರ ಮೇಲೆ ಸುಳ್ಳು ಆರೋಪ ಮಾಡಿ, ಮಾನಸಿಕ ಹಿಂಸೆ ನೀಡಬೇಕೆಂಬ ಉದ್ದೇಶದಿಂದ ದೂರು ನೀಡಿದ್ದಾಳೆ' ಎಂದು ಹೇಳಿಕೆ ನೀಡಿದ್ದಾನೆ.

ಪತ್ನಿಯೊಂದಿಗೆ ಕಳೆದ ಖಾಸಗಿ ಕ್ಷಣಗಳ ದೃಶ್ಯವನ್ನು ಮೊಬೈಲ್ ಹಾಗೂ ಕ್ಯಾಮೆರಾದಲ್ಲಿ ಸೆರೆಹಿಡಿದು, ವಿದೇಶದಲ್ಲಿರುವ ತನ್ನ ಆಪ್ತರಿಗೆ ಕಳುಹಿಸಿದ್ದ ಆರೋಪದ ಅಡಿ ಪತಿ ಸೇರಿ ನಾಲ್ವರ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಪ್ರಕರಣ ದಾಖಲಾಗುತ್ತಿದ್ದಂತೆ ಪತಿ ಸೈಯದ್ ಇನಾಮುಲ್ ಹಕ್ ಹಾಗೂ ಅಮೀನ್ ಬೇಗ್, ಸೈಯದ್ ವಸೀಂ ಬೋಕರಿ, ಹೀನಾ ಕೌಸರ್ ಅವರು ತಲೆಮರೆಸಿಕೊಂಡಿದ್ದಾರೆ.

ಕೆಆರ್‌ಎಸ್ ಮುಖಂಡರ ವಿರುದ್ಧ ಪ್ರಕರಣ

ಉಪ್ಪಾರಪೇಟೆ ಠಾಣಾಧಿಕಾರಿಗೆ ಜೀವ ಬೆದರಿಕೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದ ಆದೇಶ ಉಲ್ಲಂಘಿಸಿ ರಸ್ತೆಯಲ್ಲಿ ಪ್ರತಿಭಟನೆ ಮಾಡಿದ್ದಲ್ಲದೇ, ಪೊಲೀಸ್ ಅಧಿಕಾರಿಗೆ ಪ್ರಾಣ ಬೆದರಿಕೆ ಹಾಕಿ, ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸಿದ ಆರೋಪದಡಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸೇರಿ 10 ಮಂದಿ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಎಸ್ಐ ಭೀಮಸೇನಾ ಘಾಟಗೆ ಅವರು ನೀಡಿದ ದೂರಿನ ಮೇರೆಗೆ ಅಧ್ಯಕ್ಷ ರವಿಕೃಷ್ಣಾರೆಡ್ಡಿ, ಮುಖಂಡರಾದ ರಘು ಜಾಣಗೆರೆ, ಅಮಿತ್ ರಬೆಲ್ಲೋ, ಗಣೇಶ, ಚಿಕ್ಕೇಗೌಡ, ಸಿ.ಎನ್.ದೀಪಕ್, ಚಂದ್ರು, ಕರೇಗೌಡ, ಜನನಿ ಹಾಗೂ ಪ್ರಮೀಳಾ ಸೇರಿ ಇತರರ ವಿರುದ್ಧ ಎಫ್ಐಆರ್ ದಾಖಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಕೆಆರ್‌ಎಸ್ ಪಕ್ಷದ ಬೆಂಗಳೂರು ಪಶ್ಚಿಮ ಜಿಲ್ಲೆಯ ಅಧ್ಯಕ್ಷ ಅಮಿತ್ ರೆಬೊಲ್ಲೋ ಅವರು ಸೆಪ್ಟೆಂಬರ್ 30ರಂದು ಫ್ರೀಡಂ ಪಾರ್ಕಿನಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಲು ಅನುಮತಿ ಕೋರಿ ಠಾಣೆಗೆ ಮನವಿ ಸಲ್ಲಿಸಿದ್ದರು. ಆದರೆ, ಅಂದು ಎರಡು ಬೇರೆ ಪ್ರತಿಭಟನೆಗಳಿಗೆ ಅನುಮತಿ ನೀಡಿದ್ದ ಕಾರಣ ಪೊಲೀಸರು ಅನುಮತಿ ನಿರಾಕರಿಸಿದ್ದರು.

'ಅನುಮತಿ ನಿರಾಕರಿಸಿದ ಬಳಿಕವೂ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುವುದಾಗಿ ಪಕ್ಷದ ಫೇಸ್‌ಬುಕ್ ಖಾತೆ ಹಾಗೂ ಜಾಲತಾಣಗಳ ಮೂಲಕ ಮುಖಂಡರು ಹೇಳಿಕೆ ನೀಡಿದರು. ಹೈಕೋರ್ಟ್ ಆದೇಶದ ಪ್ರಕಾರ ನಗರದ ಫ್ರೀಡಂ ಪಾರ್ಕ್ ಹೊರತುಪಡಿಸಿ ಬೇರೆ ಕಡೆ ಪ್ರತಿಭಟನೆಗೆ ಅವಕಾಶ ಇಲ್ಲ. ಆದರೂ ಸುಮಾರು 60-70 ಕಾರ್ಯಕರ್ತರು ಗಾಂಧಿನಗರದ 6ನೇ ಮತ್ತು 2ನೇ ಮುಖ್ಯ ರಸ್ತೆಯಲ್ಲಿ ಘೋಷಣೆಗಳನ್ನು ಕೂಗಿ, ಮೆರವಣಿಗೆ ನಡೆಸಿದರು. ಸುಗಮ ಸಂಚಾರಕ್ಕೆ ಅಡ್ಡಿಪಡಿಸಿದರು. ಹಾಗಾಗಿ ಪ್ರತಿಭಟನಾಕಾರರನ್ನು ದಾಖಲಿಸಿ, ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

'ಬಿಡುಗಡೆಯಾದ ಬಳಿಕ ಪ್ರಕರಣದ ತನಿಖೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳಿಗೆ ಜೀವ ಬೆದರಿಕೆ ಹಾಕಿ, ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸುವುದು ಮುಂದುವರಿಸಿದ ಕಾರಣ ಪ್ರಕರಣ ದಾಖಲಿಸಲಾಗಿದೆ' ಎಂದು ಹೇಳಿದ್ದಾರೆ.

'ಮೆರವಣಿಗೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಠಾಣೆಯಲ್ಲಿಯೇ ಎಲ್ಲರಿಗೂ ಜಾಮೀನು ನೀಡಿದರು. ಬಳಿಕ ಮೊಬೈಲ್ ಜಪ್ತಿ ಮಾಡಿದರು. ಹಾಗಾಗಿ ಪೊಲೀಸರ ವರ್ತನೆ ಬಗ್ಗೆ ಜಾಲತಾಣದಲ್ಲಿ ಹೇಳಿಕೆ ನೀಡಲಾಗಿದೆಯೇ ಹೊರತು ಠಾಣಾಧಿಕಾರಿಗೆ ಬೆದರಿಕೆ ಹಾಕಿಲ್ಲ' ಎಂದು ಸಮಿತಿ ಮುಖಂಡರು ತಿಳಿಸಿದ್ದಾರೆ.

ವಿದೇಶಿ ಪೆಡ್ಲರ್ ಬಂಧನ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ವಿದೇಶಿ ಪೆಡ್ಲರ್‌ನನ್ನು ವಿ.ವಿ.ಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು, ನೇಪಾಳ ಮೂಲದ ಪೆಡ್ಲರ್ ಬಳಿ ₹45 ಸಾವಿರ ಮೌಲ್ಯದ 330 ಗ್ರಾಂ ಗಾಂಜಾ ವಶಕ್ಕೆ ಪಡೆದಿದ್ದಾರೆ.

ನೇಪಾಳದಿಂದ ಕಡಿಮೆ ಬೆಲೆಗೆ ಗಾಂಜಾ ತಂದು, ಸ್ಥಳೀಯರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಎಂಬುದು ಪೊಲೀಸರ ವಿಚಾರಣೆ ವೇಳೆ ಗೊತ್ತಾಗಿದೆ.

ಬಂಧಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ತಿಳಿಸಿದ್ದಾರೆ.

ಕಾರ್ಮಿಕನ ಕೊಲೆ

ಬೆಂಗಳೂರು: ಹಣಕಾಸು ವಿಚಾರಕ್ಕೆ ಪಾನಮತ್ತ ಕೂಲಿ ಕಾರ್ಮಿಕರ ನಡುವೆ ನಡೆದ ಜಗಳ ಒಬ್ಬರ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಮಾರತ್‌ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಆಂಧ್ರಪ್ರದೇಶದ ಮಹಾದೇವ (45) ಕೊಲೆಯಾದ ಕಾರ್ಮಿಕ. ಘಟನೆ ಸಂಬಂಧ ರಾಯಚೂರಿನ ರಾಜು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಸ್ನೇಹಿತರಾದ ಮಹಾದೇವ ಮತ್ತು ರಾಜು ಹೋಟೆಲ್‌ನಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ಮಾರತ್‌ಹಳ್ಳಿ ಹೊರ ವರ್ತುಲ ರಸ್ತೆಯಲ್ಲಿ ಶನಿವಾರ ರಾತ್ರಿ ಸ್ನೇಹಿತರಿಬ್ಬರೂ ಮದ್ಯ ಸೇವಿಸಿದ್ದಾರೆ. ಈ ವೇಳೆ ಇಬ್ಬರ ನಡುವೆ ಜಗಳ ನಡೆದಿದೆ. ಬಳಿಕ ಜಗಳ ವಿಕೋಪಕ್ಕೆ ತಿರುಗಿ ರಾಜು, ಮಹಾದೇವನ ಹೊಟ್ಟೆಗೆ ಹರಿತವಾದ ಆಯುಧದಿಂದ ಇರಿದು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಮಾರತ್‌ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೈಲಿನಲ್ಲೇ ಹುಟ್ಟುಹಬ್ಬ ಆಚರಣೆ: ಆಂತರಿಕ ತನಿಖೆಗೆ ಆದೇಶ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರೌಡಿಶೀಟರ್ ಜನ್ಮದಿನ ಆಚರಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರಾಗೃಹ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ಬಿ.ದಯಾನಂದ ಅವರು ಆಂತರಿಕ ತನಿಖೆಗೆ ಆದೇಶ ನೀಡಿದ್ದಾರೆ.

ಸರ್ಜಾಪುರದ ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಜೈಲಿನಲ್ಲಿ ತನ್ನ ಸಹಚರರ ಜತೆ ಹುಟ್ಟುಹಬ್ಬ ಆಚರಿಸಿಕೊಂಡಿರುವ ವಿಡಿಯೊ ಮತ್ತು ಫೋಟೊಗಳು ಜಾಲತಾಣದಲ್ಲಿ ಹರಿದಾಡುತ್ತಿವೆ.

ಅಪರಾಧ ಸುದ್ದಿ

ಇದನ್ನು ಗಂಭೀರವಾಗಿ ಪರಿಗಣಿಸಿರುವ ದಯಾನಂದ್, ಹುಟ್ಟುಹಬ್ಬ ಆಚರಣೆಗೆ ಅವಕಾಶ ನೀಡಿರುವುದು ಮತ್ತು ವಿಡಿಯೊ ಪೋಸ್ಟ್ ಮಾಡಿರುವ ಬಗ್ಗೆ ಆಂತರಿಕ ತನಿಖೆ ನಡೆಸಿ, ವರದಿ ನೀಡುವಂತೆ ಡಿಐಜಿ ದಿವ್ಯಶ್ರೀ ಅವರಿಗೆ ಸೂಚಿಸಿದ್ದಾರೆ.

ಜನವರಿಯಲ್ಲಿ ಸರ್ಜಾಪುರದ ರೌಡಿ ವೆಂಕಟೇಶ್ ಅನ್ನು ಕೊಲೆ ಮಾಡಿದ ಪ್ರಕರಣದಲ್ಲಿ ಶ್ರೀನಿವಾಸ್ ಹಾಗೂ ಸಹಚರರು ಜೈಲು ಸೇರಿದ್ದಾರೆ.

ಶ್ರೀನಿವಾಸ್‌ಗೆ ಜೈಲಿನ ಅಧಿಕಾರಿ ಮತ್ತು ಸಿಬ್ಬಂದಿ ಹುಟ್ಟುಹಬ್ಬ ಆಚರಿಸಿಕೊಳ್ಳಲು ಅವಕಾಶ ನೀಡಿದ್ದು, ಈ ವಿಡಿಯೊವನ್ನು ಸಾಗರ್ ಎಂಬ ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ ಎಂದು ಆರೋಪಿಸಿ ಕೊಲೆಯಾದ ವೆಂಕಟೇಶ್ ಅವರ ಪತ್ನಿ ಎಡಿಜಿಪಿಗೆ ದೂರು ನೀಡಿದ್ದಾರೆ.

ಹಳೆ ಸಾಮಗ್ರಿ ಬೆಂಕಿಗೆ ಆಹುತಿ

ಬೆಂಗಳೂರು: ಆಕಸ್ಮಿಕವಾಗಿ ಬೆಂಕಿ ತಗುಲಿದ ಪರಿಣಾಮ ಗೋದಾಮಿನಲ್ಲಿ ಸಂಗ್ರಹಿಸಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಹಳೆ ಸಾಮಗ್ರಿಗಳು ಸುಟ್ಟು ಕರಕಲಾಗಿವೆ.

ಬೇಗೂರು ಸಮೀಪದ ಅಕ್ಷಯನಗರದಲ್ಲಿ ಭಾನುವಾರ ಈ ಘಟನೆ ನಡೆದಿದ್ದು, ಆರಂಭದಲ್ಲಿ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಗೋದಾಮಿಗೆ ಬೆಂಕಿ ತಗುಲಿದೆ ಎನ್ನಲಾಗಿತ್ತು. ಆದರೆ, ಆಕಸ್ಮಿಕವಾಗಿ ತಗುಲಿದ ಬೆಂಕಿಯಿಂದ ಗೋದಾಮಿನಲ್ಲಿ ದಟ್ಟ ಹೊಗೆ ಕಾಣಿಸಿಕೊಂಡಿದ್ದು, ಕೆಲ ವಸ್ತುಗಳು ಸ್ಫೋಟಗೊಂಡಿವೆ ಎಂದು ತಿಳಿದುಬಂದಿದೆ.

ಗೋದಾಮಿನಲ್ಲಿದ್ದ ಪೇಪರ್ ಮತ್ತು ಹತ್ತಿಯ ರಟ್ಟಿನ ಪೆಟ್ಟಿಗೆಗಳಿಗೆ ಬೆಂಕಿ ಹೊತ್ತಿಕೊಂಡಿದೆ. ನಾಲ್ಕು ಅಗ್ನಿಶಾಮಕ ವಾಹನಗಳಲ್ಲಿ ಬಂದ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಗುಜರಿ ಅಂಗಡಿ ಮಾಲೀಕರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಆನ್‌ಲೈನ್ ಬೆಟ್ಟಿಂಗ್: ಕಚೇರಿ ಪೀಠೋಪಕರಣ ಧ್ವಂಸ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ದಂಧೆ ನಡೆಸಲಾಗುತ್ತಿದೆ ಎಂದು ಆರೋಪಿಸಿ 'ನಮ್ಮ ಕರ್ನಾಟಕ ಸೇನೆ' ಸಂಘಟನೆ ಸದಸ್ಯರು ಭಾನುವಾರ ಕೋರಮಂಗಲ ನಾಲ್ಕನೇ ಬ್ಲಾಕ್‌ನಲ್ಲಿರುವ 'ಗೋಲ್ಡನ್ ಏಸಸ್ ಪೋಕರ್ ರೂಂ' ಕಂಪನಿ ಕಚೇರಿಗೆ ನುಗ್ಗಿ ದಾಂದಲೆ ನಡೆಸಿದ್ದಾರೆ.

ಸಂಘಟನೆ ಸದಸ್ಯರು, ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ಎಸೆದು ದುಂಡಾವರ್ತಿ ತೋರಿದ್ದಾರೆ. ಅಲ್ಲದೆ, ಪೀಠೋಪಕರಣ ಧ್ವಂಸ ಮಾಡಿದ್ದಾರೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಚೇರಿ ಕೆಲಸಗಾರರೊಂದಿಗೆ ಸದಸ್ಯರು ವಾಗ್ವಾದ ನಡೆಸಿದ್ದಾರೆ. ದಾಳಿ ವೇಳೆ ಕಟ್ಟಡದೊಳಗೆ ಬೆಟ್ಟಿಂಗ್‌ನಲ್ಲಿ ನಿರತರಾಗಿದ್ದ ಗ್ರಾಹಕರು ಕಾಲ್ಕಿತ್ತಿದ್ದಾರೆ.

'ಕಟ್ಟಡದಲ್ಲಿ ಪ್ರತಿ ಭಾನುವಾರ ಕಾನೂನುಬಾಹಿರವಾಗಿ ಆನ್‌ಲೈನ್ ಬೆಟ್ಟಿಂಗ್ ಆಡಿಸಲಾಗುತ್ತಿದೆ. ಬೆಟ್ಟಿಂಗ್‌ನಲ್ಲಿ ಬಡ ಜನರು ಹಣ ಕಳೆದುಕೊಳ್ಳುತ್ತಿದ್ದಾರೆ. ಪೊಲೀಸರಿಗೆ ಈ ಅಕ್ರಮ ಗೊತ್ತಿದ್ದರೂ ಹಣದಾಸೆಗೆ ಕಂಪನಿ ವಿರುದ್ಧ ಕ್ರಮ ಜರುಗಿಸಿಲ್ಲ' ಎಂದು ಸಂಘಟನೆ ಸದಸ್ಯರು ಆರೋಪಿಸಿದರು.

'ನಮ್ಮ ಕರ್ನಾಟಕ ಸೇನೆ ಸದಸ್ಯರು, ಗೋಲ್ಡನ್ ಏಸಸ್ ಪೋಕರ್ ರೂಂ ಕಂಪನಿ ಕಟ್ಟಡಕ್ಕೆ ಅತಿಕ್ರಮ ಪ್ರವೇಶ ಮಾಡಿ ದಾಂದಲೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಸಂಘಟನೆಯ 10 ಸದಸ್ಯರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ' ಎಂದು ಕೋರಮಂಗಲ ಠಾಣೆ ಪೊಲೀಸರು ತಿಳಿಸಿದ್ದಾರೆ.

ರಸ್ತೆಗೆ ಉರುಳಿ ಬಿದ್ದ ಮರ ಯುವತಿ ಸಾವು



ಪೀಣ್ಯ ದಾಸರಹಳ್ಳಿ: ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ದ್ವಿಚಕ್ರ ವಾಹನ ಸವಾರರ ಮೇಲೆ ಬುಡ ಸಮೇತ ಮರ ಉರುಳಿ ಬಿದ್ದ ಪರಿಣಾಮ ಯುವತಿ ಮೃತಪಟ್ಟಿದ್ದಾರೆ.

ಹೆಬ್ಬಾಳ ನಿವಾಸಿ ಕೀರ್ತನಾ (24) ಮೃತ ಯುವತಿ. ಘಟನೆಯಲ್ಲಿ ಬೈಕ್ ಸವಾರ ಭಾಸ್ಕರ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಠಾಣೆ ಮುಂಭಾಗದ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಕೀರ್ತನಾ ಮತ್ತು ಭಾಸ್ಕರ್ ತೆರಳುತ್ತಿದ್ದರು. ರಾತ್ರಿ 8 ಗಂಟೆ ಸುಮಾರಿಗೆ ಮರ ಬುಡ ಸಮೇತ ರಸ್ತೆಗೆ ಉರುಳಿ ಬಿದ್ದಿದೆ. ತೀವ್ರವಾಗಿ ಗಾಯಗೊಂಡ ಕೀರ್ತನಾ ಸ್ಥಳದಲ್ಲಿಯೇ ಮೃತಪಟ್ಟರು.

ಸೋಲದೇವನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರಸ್ತೆ ಮೇಲೆ ಮರ ಬಿದ್ದ ಕಾರಣ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದರು. ಮರ ತೆರವು ಕಾರ್ಯಾಚರಣೆ ನಡೆಸಿದರು. ಮೃತದೇಹವನ್ನು ಸಪ್ತಗಿರಿ ಆಸ್ಪತ್ರೆಗೆ ರವಾನೆ ಮಾಡಲಾಯಿತು.

ರಮ್ಯಾಗೆ ಬೆದರಿಕೆ: ಎಫ್‌ಎಸ್‌ಎಲ್‌ಗೆ 12 ಆರೋಪಿಗಳ ಮೊಬೈಲ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಚಿತ್ರ ಹಾಗೂ ಬೆದರಿಕೆ ಸಂದೇಶ ಕಳುಹಿಸಿದ್ದ ಪ್ರಕರಣ ಸಂಬಂಧ ತನಿಖೆ ತೀವ್ರಗೊಳಿಸಿರುವ ಸಿಸಿಬಿ ಪೊಲೀಸರು, ಮೊಬೈಲ್‌ನಿಂದ ಅಳಿಸಿ ಹಾಕಿದ್ದ ದತ್ತಾಂಶ ಮರುಸಂಗ್ರಹಿಸಲು 12 ಆರೋಪಿಗಳ ಮೊಬೈಲ್ ಫೋನ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದ್ದಾರೆ.

ಆರೋಪಿಗಳ ಖಾತೆಗಳು, ಸಂದೇಶಗಳನ್ನು ಮರು ಸಂಗ್ರಹಿಸಬೇಕಿದ್ದು, ವರದಿ ಬಂದ ಬಳಿಕ ಪೊಲೀಸರು ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಕೆ ಮಾಡಲಿದ್ದಾರೆ. ಮಹಿಳೆಯ ಘನತೆ, ಗೌರವಕ್ಕೆ ಧಕ್ಕೆಯಾಗುವಂತೆ ಪೋಸ್ಟ್ ಮಾಡಿದ ಪ್ರಕರಣ ಸಂಬಂಧ ಈವರೆಗೂ 12 ಆರೋಪಿಗಳನ್ನು ಸಿಸಿಬಿ ಬಂಧಿಸಿದೆ. ಸದ್ಯ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. ಜಾಮೀನಿಗಾಗಿ ಪ್ರಯತ್ನಿಸುತ್ತಿದ್ದಾರೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರ ಆರು ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿತ್ತು.

ಈ ಬೆಳವಣಿಗೆಯ ನಂತರ ರಮ್ಯಾ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿ 'ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಒಂದು ಭರವಸೆಯ ಕಿರಣ ಇದ್ದಂತೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ' ಎಂದು ಅದರಲ್ಲಿ ಉಲ್ಲೇಖಿಸಿದ್ದರು. ರಮ್ಯಾ ಅವರು ಈ ಪೋಸ್ಟ್ ಹಾಕಿದ ಬಳಿಕ ಅವರ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು. ಅವುಗಳ ಸ್ಕ್ರೀನ್‌ಶಾಟ್ ಅನ್ನು ರಮ್ಯಾ ತೆಗೆದುಕೊಂಡು ಪೊಲೀಸರಿಗೆ ದೂರು ನೀಡಿದ್ದರು.

8 ಮಂದಿ ವಿರುದ್ಧ ರೌಡಿ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್‌ಗಳನ್ನು ಹೀರೋಗಳಂತೆ ಬಿಂಬಿಸಿ, ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುತ್ತಿದ್ದ 8 ಮಂದಿ ವಿರುದ್ಧ ದಕ್ಷಿಣ ವಿಭಾಗದ ಪೊಲೀಸರು ರೌಡಿಪಟ್ಟಿ ತೆರೆದಿದ್ದಾರೆ.

ಸರ್ಜಾಪುರದ ದೀಪಕ್(22), ಯಲಹಂಕದ ಕುಶಾಲ್ (20), ಬೊಮ್ಮನಹಳ್ಳಿ ಕುಮಾರಿ ಕೈಸರ್ (21) ಜಯನಗರದ ಮಂಜುನಾಥ್ ಅಲಿಯಾಸ್ ದೊಣ್ಣೆ ಮಂಜ (31), ಜಯನಗರದ ಶಂಕರ್ (32) ಚಿಕ್ಕಬಳ್ಳಾಪುರದ ಮನೋಜ್ (22), ಆನೇಕಲ್‌ನ ವೇಣು (19) ಮತ್ತು ಬಾಲಕನ ವಿರುದ್ಧ ರೌಡಿಶೀಟ್‌ರ್ ತೆರೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಜಾಲತಾಣದಲ್ಲಿ ಹೆಚ್ಚು ಫಾಲೋವರ್ಸ್ ಹೊಂದಬೇಕು ಎಂಬ ಆಸೆಗೆ ಬಿದ್ದಿದ್ದ ಆರೋಪಿಗಳು, ರೌಡಿಗಳ ಫೋಟೊ ಮತ್ತು ವಿಡಿಯೊಗಳಲ್ಲಿ ಅವರನ್ನು ಹೀರೋ ರೀತಿ ಬಿಂಬಿಸುತ್ತಿದ್ದರು.

ಈ ಸಂಬಂಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದವು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ.

'ರೌಡಿಗಳನ್ನು ಬೆಂಬಲಿಸಿ ವಿಡಿಯೊ ಮಾಡಿ ಹರಿಬಿಡುವವರ ವಿರುದ್ಧ ರೌಡಿ ಪಟ್ಟಿ ತೆರೆಯಲಾಗಿದೆ. ರೌಡಿಗಳಾದ ವಿಲ್ಸನ್ ಗಾರ್ಡನ್ ನಾಗ, ಮಹೇಶ್ ಸಿದ್ದಾಪುರ ಸಂಬಂಧ ಫ್ಯಾನ್ಸ್ ಪೇಜ್‌ಗಳಲ್ಲಿ ಪರಸ್ಪರ ವೈಷಮ್ಯ ಬರುವ ರೀತಿ ಮತ್ತು ಸಹಾನುಭೂತಿ ವಿಡಿಯೊಗಳನ್ನು ಹರಿಬಿಡಲಾಗುತ್ತಿತ್ತು. ತನಿಖೆ ವೇಳೆ ಇದರ ಹಿಂದೆ ವಿದ್ಯಾರ್ಥಿಗಳು ಇರುವುದು ಗೊತ್ತಾಯಿತು' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ಮಾಹಿತಿ ನೀಡಿದರು.

'ಮದ್ಯದ ಪಾರ್ಟಿಯಲ್ಲಿ ರೌಡಿಶೀಟರ್‌ಗಳು ಡಾನ್ಸ್ ಮಾಡುತ್ತಿರುವ ವಿಡಿಯೊಗಳಿಗೆ ಹಾಡುಗಳನ್ನು ಸೇರಿಸುವುದು ಮತ್ತು ಅವರ ಭಾವಚಿತ್ರಕ್ಕೆ ಸಿನಿಮಾ ಸಂಭಾಷಣೆ ಸೇರಿಸಿ ರೀಲ್ಸ್ ಮಾಡಿ ಅಪ್‌ಲೋಡ್ ಮಾಡುತ್ತಿದ್ದರು. ರೌಡಿಗಳ ಕಟೌಟ್‌ಗಳಿಗೆ ಹಾರ ಹಾಕುವ ವಿಡಿಯೊಗಳಲ್ಲಿ ರೌಡಿಗಳಿಗೆ ಅಣ್ಣ, ಬಾಸ್, ಕಿಂಗ್ ಎಂದು ಸಂಬೋಧಿಸುತ್ತ ಯುವಕರನ್ನು ರೌಡಿಸಂಗೆ ಪರೋಕ್ಷವಾಗಿ ಆಹ್ವಾನಿಸುತ್ತಿದ್ದರು. ಹೀಗಾಗಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದರು.

ಅಪಘಾತ: ಆಟೊ ಚಾಲಕರಿಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಇಬ್ಬರು ಆಟೊ ಚಾಲಕರು ಮೃತಪಟ್ಟಿದ್ದಾರೆ.

ಆಟೊ ಮತ್ತು ಕ್ಯಾಬ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಆಟೊ ಚಾಲಕ, ನೀಲಸಂದ್ರ ನಿವಾಸಿ ಸೈಯದ್ ಅಕ್ರಂ ಪಾಷಾ (50) ಮೃತಪಟ್ಟಿದ್ದಾರೆ. ಪ್ರಯಾಣಿಕರಿಗೆ ಸಣ್ಣ ಪ್ರಮಾಣದ ಗಾಯಗಳಾಗಿವೆ.

ಸೈಯದ್ ಅಕ್ರಂ ಪಾಷಾ ಶನಿವಾರ ರಾತ್ರಿ ಪ್ರಯಾಣಿಕರನ್ನು ಕೂರಿಸಿಕೊಂಡು ಒಆರ್‌ಸಿ ರಸ್ತೆಯ ಚೌಟರಿ ಹಾಲ್ ಬಳಿ ಏಕಮುಖ ಸಂಚಾರದ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವೇಗವಾಗಿ ಆಟೊ ಚಲಾಯಿಸಿದ್ದಾರೆ. ಈ ವೇಳೆ ನಿಯಂತ್ರಣ ಕಳೆದುಕೊಂಡ ಆಟೊ, ರಸ್ತೆ ಬದಿ ನಿಲುಗಡೆ ಮಾಡಿದ್ದ ಕಾರಿಗೆ ಡಿಕ್ಕಿ ಹೊಡೆದು, ನಂತರ ಎದುರಿನಿಂದ ಬರುತ್ತಿದ್ದ ಕ್ಯಾಬ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಆಟೊ ರಸ್ತೆಗೆ ಉರುಳಿಬಿದ್ದಿದೆ. ಗಂಭೀರವಾಗಿ ಗಾಯಗೊಂಡಿದ್ದ ಪಾಷಾ ಅವರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಪ್ರಯಾಣಿಕರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಪೊಲೀಸರು ಆಟೊ ಜಪ್ತಿ ಮಾಡಿದ್ದಾರೆ.

ಉರುಳಿ ಬಿದ್ದ ಆಟೊ: ಗೋವಿಂದರಾಜ ನಗರ ಪೊಲೀಸ್ ಠಾಣೆ ಹಿಂಭಾಗದ ರಸ್ತೆಯಲ್ಲಿ ನಿಯಂತ್ರಣ ತಪ್ಪಿದ ಆಟೊ ಉರುಳಿ ಬಿದ್ದು, ಸರಸ್ವತಿಪುರ ನಿವಾಸಿ ವೆಂಕಟರಾಮಯ್ಯ (62) ಮೃತಪಟ್ಟಿದ್ದಾರೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ರಸ್ತೆ ಗುಂಡಿ ಮುಚ್ಚಿ'



ಚಾಮರಾಜಪೇಟೆಯ ಕೋಟೆ ವೆಂಕಟರಮಣ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿದ್ದು, ಇದರಿಂದ ವಾಹನ ಸಂಚಾರಕ್ಕೆ ಅಡಚಣೆ ಆಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಗುಂಡಿ ಇರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಸಂಭವಿಸುತ್ತಿದ್ದು, ಸಂಬಂಧಪಟ್ಟ ಪಾಲಿಕೆಯ ಸಿಬ್ಬಂದಿ ಕೂಡಲೇ ಈ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಬೇಕು.

ಶ್ರೀಧರ್

'ಗ್ರೇಟರ್ ಬೆಂಗಳೂರಲ್ಲ, ಗಾರ್ಬೇಜ್ ಬೆಂಗಳೂರು'



ಕೆಂಪೇಗೌಡ ರಸ್ತೆಯ ಇಂಡಿಯನ್ ಬ್ಯಾಂಕ್ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಪಾಲಿಕೆಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ಇಲ್ಲಿ ಹಾಕಿರುವ ಕಸವನ್ನು ವಿಲೇವಾರಿ ಮಾಡಿ ನಗರದ ಸೌಂದರ್ಯ ಕಾಪಾಡಬೇಕು.

ಎಸ್. ಶಿವಪ್ರಸಾದ್, ಗಾಂಧಿನಗರ

'ಪುಡಿ ರೌಡಿಗಳ ಹಾವಳಿ ನಿಯಂತ್ರಿಸಿ'

ಹಂಪಿನಗರ ವಾರ್ಡ್ ಸಂಖ್ಯೆ-133ರ ಸರ್ವಿಸ್ ರಸ್ತೆಯ ಶರಾವತಿ ಆಸ್ಪತ್ರೆಯ ಬಳಿ ಕಿಡಿಗೇಡಿಗಳು ಹಾಗೂ ಪುಡಿ ರೌಡಿಗಳ ಹಾವಳಿ ಹೆಚ್ಚಾಗಿದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಸ್ವಿಗ್ಗಿ, ಜೊಮ್ಯಾಟೊ, ಬ್ಲಿಂಕ್ ಇಟ್ ಕಾರ್ಮಿಕರಿಂದ ಹಣ ವಸೂಲಿ ಮಾಡಲು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸುತ್ತಾರೆ. ಈ ಪುಡಿ ರೌಡಿಗಳು ದುಡಿಯುವ ವರ್ಗದ ಕಾರ್ಮಿಕರನ್ನು ಗುರಿಯಾಗಿಸಿ ಈ ರೀತಿ ಮಾಡುತ್ತಿದ್ದಾರೆ. ಈ ಭಾಗದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕು.

ರವಿಕುಮಾರ್. ಎಚ್, ಅಕ್ಷಿತ್ ಗಜಕುಮಾರ್, ವಿನೋದ್

'ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ'



ಜಂಬೂಸವಾರಿ ದಿಣ್ಣೆ ಮುಖ್ಯರಸ್ತೆಯ ಆರ್‌ಬಿಐ ಬಡಾವಣೆಯ ಕ್ಯಾಪಿಟಲ್ ಪಬ್ಲಿಕ್ ಶಾಲೆಯ ಮುಂಭಾದ ಪಾದಚಾರಿ ಮಾರ್ಗದಲ್ಲಿ ಹಳೇ ಬಟ್ಟೆಗಳು ಸೇರಿದಂತೆ ಕಸದ ರಾಶಿ ಹಾಕಲಾಗಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿ ಹಾದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಕಸದ ರಾಶಿ ಬಿದ್ದು ಒಂದು ತಿಂಗಳಾದರೂ ಪಾಲಿಕೆ ಸಿಬ್ಬಂದಿ ಇದನ್ನು ವಿಲೇವಾರಿ ಮಾಡುತ್ತಿಲ್ಲ. ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆ ಆಗುತ್ತಿದೆ.

ಎಚ್. ದೊಡ್ಡ ಮಾರಯ್ಯ, ಸಂತೃಪ್ತಿನಗರ

'ರಸ್ತೆ ದುರಸ್ತಿಗೆ ಆಗ್ರಹ'



ಸಿದ್ದಾಪುರ-ನಲ್ಲೂರಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಇಡೀ ರಸ್ತೆಯೇ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿದಿನ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಈ ಭಾಗದಲ್ಲಿ ಹಲವಾರು ಐಟಿ ಕಂಪನಿಗಳಿದ್ದು, ಸಾವಿರಾರು ಮಂದಿ ಈ ರಸ್ತೆಯ ಮೂಲಕವೇ ತಮ್ಮ ಕಂಪನಿಗಳಿಗೆ ಹಾದು ಹೋಗಬೇಕಾಗಿದೆ. ರಸ್ತೆ ಗುಂಡಿ ಮುಚ್ಚುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ಗುಂಡಿ ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ವಿನೋದ್ ಕಾಂತರಾಜು, ವೈಟ್‌ಫೀಲ್ಡ್

‘ಒಕ್ಕಲಿಗರೆಲ್ಲರೂ ಹಿಂದೆ ಜೈನರಾಗಿದ್ದರು’

ಸಾಲಿಗ್ರಾಮ ಜೈನ ಮಿತ್ರ ಮಂಡಳಿಯ 24ನೇ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿರುವ ಒಕ್ಕಲಿಗರೆಲ್ಲರೂ ಈ ಹಿಂದೆ ಜೈನರಾಗಿದ್ದರು. ಇದಕ್ಕೆ ಹಲವು ಪುರಾವೆಗಳಿವೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ಹೇಳಿದರು.

ಸಾಲಿಗ್ರಾಮ ಜೈನ ಮಿತ್ರ ಮಂಡಳಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 24ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪತ್ರಕರ್ತ ಪದ್ಮರಾಜ ದಂಡಾವತಿ ಅವರಿಗೆ ‘ಸುಮಾ ವಸಂತ ಪ್ರಶಸ್ತಿ’ ಹಾಗೂ ಕಲಾವಿದ ಚಿತ್ತ ಜಿನೇಂದ್ರ ಅವರಿಗೆ ‘ಶ್ರೇಯೋಭದ್ರ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಒಕ್ಕಲಿಗರು ಅಧಿಕವಾಗಿ ನೆಲಸಿರುವ ಮೈಸೂರು, ಹಾಸನ, ಕೋಲಾರ, ತುಮಕೂರು ಸೇರಿದಂತೆ ಇನ್ನೂ ಹಲವು ಕಡೆ ಜೈನ ಬಸದಿಗಳಿವೆ. ಶ್ರವಣ ಬೆಳಗೊಳದಲ್ಲಿ ಬಾಹುಬಲಿಯ ಮೂರ್ತಿಯಿದೆ. ಜೈನರ ಬಾಹುಳ್ಯ ಇಲ್ಲದೆ ಇದಿದ್ದರೆ ಇಂತಹ ಮೂರ್ತಿಗಳನ್ನು, ಬಸದಿಗಳನ್ನು ನಿರ್ಮಿಸಲು ಹೇಗೆ ಸಾಧ್ಯವಾಗುತ್ತಿತ್ತು’ ಎಂದು ಪ್ರಶ್ನಿಸಿದರು.

‘11ನೇ ಶತಮಾನಕ್ಕೂ ಮೊದಲು ಈ ನಾಡಿನ ಒಕ್ಕಲಿಗರೆಲ್ಲರೂ ಜೈನ ಸಮುದಾಯಕ್ಕೆ ಸೇರಿದ್ದರು. ಜೈನ ಸಮುದಾಯ ಪರಂಪರೆಗೆ ಸೇರಿದ ಹೊಯ್ಸಳ ದೊರೆ ಬಿಟ್ಟಿದೇವನು (ವಿಷ್ಣುವರ್ಧನ) ರಾಮಾನುಜಾಚಾರ್ಯರಿಂದ ವೈಷ್ಣವ ದೀಕ್ಷೆ ಪಡೆದು, ನಂತರ ಹಲವು ಜೈನರನ್ನು ವೈಷ್ಣವ ಪರಂಪರೆಗೆ ಮತಾಂತರಿಸಿದನು. ಹೀಗೆ ಮತಾಂತರ ಆದವರು ಈಗ ಒಕ್ಕಲಿಗರಾಗಿದ್ದಾರೆ’ ಎಂದು ಹೇಳಿದರು.

ಸಾಲಿಗ್ರಾಮ ಜೈನ ಮಿತ್ರ ಮಂಡಳಿಯ ಕಾರ್ಯದರ್ಶಿ ಪದ್ಮಿನಿ ನಾಗರಾಜು, ‘ಸಾಲಿಗ್ರಾಮದ ಊರನ್ನು ಸ್ಮರಿಸಿಕೊಳ್ಳುವ ಉದ್ದೇಶದಿಂದ ಜೈನ ಮಿತ್ರ ಮಂಡಳಿಯನ್ನು ಸ್ಥಾಪನೆ ಮಾಡಲಾಯಿತು. ಚಲನಚಿತ್ರ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಕೂಡ ನಮ್ಮ ಊರಿನವರು ಎನ್ನಲು ಹೆಮ್ಮೆ ಆಗುತ್ತಿದೆ. ಮುಂದಿನ ವರ್ಷ ಸಂಸ್ಥೆಯ ಬೆಳ್ಳಿ ಹಬ್ಬ ಆಚರಣೆ ಮಾಡಲಾಗುವುದು’ ಎಂದರು.

ಮಂಡಳಿ ಅಧ್ಯಕ್ಷೆ ನೀರಜಾ ನಾಗೇಂದ್ರಕುಮಾರ್ ಉಪಸ್ಥಿತರಿದ್ದರು.


ಸಮಾರಂಭದಲ್ಲಿ (ಕುಳಿತವರು ಎಡದಿಂದ) ಚಿತ್ತ ಜಿನೇಂದ್ರ ಅವರಿಗೆ ‘ಶ್ರೇಯೋಭದ್ರ ಪ್ರಶಸ್ತಿ’ ಹಾಗೂ ಪದ್ಮರಾಜ ದಂಡಾವತಿ ಅವರಿಗೆ ‘ಸುಮಾ ವಸಂತ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಅಜಿತ್ ಮುರಗುಂಡೆ, ನೀರಜಾ ನಾಗೇಂದ್ರ ಕುಮಾರ್, ಎಲ್‌.ಎನ್‌. ಮುಕುಂದರಾಜ್, ಪದ್ಮಿನಿ ನಾಗರಾಜು ಮತ್ತು ಎಸ್‌.ಎ. ಅಶೋಕ್ ಕುಮಾರ್ ಉಪಸ್ಥಿತರಿದ್ದರು– ಪ್ರಜಾವಾಣಿ ಚಿತ್ರ

ವೈಟ್‌ಫೀಲ್ಡ್ ಭಾಗದಲ್ಲಿ ದಸರಾ ಸಂಭ್ರಮ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿಜಯದಶಮಿ ಪ್ರಯುಕ್ತ ಕಾಡುಗೋಡಿ, ವೈಟ್‌ಫೀಲ್ಡ್ ಸುತ್ತಮುತ್ತಲಿನ ವಿವಿಧ ಗ್ರಾಮಗಳ 50ಕ್ಕೂ ಹೆಚ್ಚು ಗ್ರಾಮ ದೇವತೆಗಳ ಪಲ್ಲಕ್ಕಿಗಳೊಂದಿಗೆ ಅಂಬೇಡ್ಕರ್ ನಗರ ಗುಟ್ಟದ ದಸರಾ ಮೈದಾನದಲ್ಲಿ ನಾಡಹಬ್ಬ ಆಚರಿಸಲಾಯಿತು.

ನವರಾತ್ರಿ ಉತ್ಸವಕ್ಕಾಗಿ ಗ್ರಾಮಗಳ ದೇವಾಲಯಗಳಲ್ಲಿ ಒಂಬತ್ತು ದಿನಗಳು ವಿಶೇಷ ಪೂಜೆ ಸಲ್ಲಿಸಿ ನಂತರ ಕಾಡುಗೋಡಿ ಸುತ್ತಮುತ್ತಲಿನ ಚನ್ನಸಂದ್ರ, ಎಕೆಜಿ ಕಾಲೊನಿ, ನಾಗೊಂಡನಹಳ್ಳಿ, ಇಮ್ಮಡಿಹಳ್ಳಿ, ನಲ್ಲೂರಹಳ್ಳಿ, ರಾಮಗೊಂಡನಹಳ್ಳಿ, ಪಟ್ಟಂದೂರು ಅಗ್ರಹಾರ, ದಿನ್ನೂರು, ಬೆಳ್ಳತ್ತೂರು ಗ್ರಾಮದೇವತೆಗಳನ್ನು ಮೆರವಣಿಗೆ ಮಾಡಲಾಯಿತು.

ಆಂಜನೇಯ ಸ್ವಾಮಿ, ಬಸವೇಶ್ವರ ಸ್ವಾಮಿ, ಶನಿ ಮಹಾತ್ಮ, ಮುನೇಶ್ವರ, ಮಾರಮ್ಮ, ಸಪಲಮ್ಮ, ಯಲ್ಲಮ್ಮ ಗಂಗಮ್ಮ ದೊಡ್ಡಮ್ಮ ಸಹಿತ ವಿವಿಧ ಗ್ರಾಮದೇವತೆಗಳನ್ನು ಪಲ್ಲಕ್ಕಿಗಳಲ್ಲಿ ಕೂರಿಸಿ ಊರುಗಳಲ್ಲಿ ಮೆರವಣಿಗೆ ಮಾಡಲಾಯಿತು.

ಡೊಳ್ಳು ಕುಣಿತ, ಕಂಸಾಳೆ ನೃತ್ಯ ತಮಟೆ ವಾದ್ಯ ಮತ್ತು ವೀರಗಾಸೆ ಸೇರಿದಂತೆ ವಿವಿಧ ಕಲಾ ತಂಡಗಳು ಭಾಗವಹಿಸಿದ್ದವು.

ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ಮುಖಂಡರಾದ ಶ್ರೀಧರ್ ರೆಡ್ಡಿ, ಹೂಡಿ ಪಿಳ್ಳಪ್ಪ ಗುಟ್ಟ ಮಾರಪ್ಪ, ಮನೋಹರ ರೆಡ್ಡಿ, ಮಹೇಂದ್ರ ಮೋದಿ ಭಾಗವಹಿಸಿದ್ದರು.


ವೈಟ್‌ಫೀಲ್ಡ್‌ನ ಅಂಬೇಡ್ಕರ್ ಗುಟ್ಟದಲ್ಲಿ 50ಕ್ಕೂ ಹೆಚ್ಚು ಗ್ರಾಮ ದೇವತೆಗಳ ಪಲ್ಲಕ್ಕಿ ಉತ್ಸವ ನಡೆಯಿತು

‘ಮಾಧ್ವರೆಲ್ಲರೂ ಒಗ್ಗಟ್ಟಾಗಿ ಸಾಗಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಧ್ವ ಮತದ ಮಠಾಧೀಶರು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಒಗ್ಗಟ್ಟಿನಿಂದ ಮಾಧ್ವ ಸಮಾಜದವರನ್ನು ಕೊಂಡೊಯ್ಯಬೇಕು’ ಎಂದು ತಂಬಿಹಳ್ಳಿಯ ಮಾಧವ ತೀರ್ಥರ ಮಠದ ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮೀಜಿ ಹೇಳಿದರು.

ವಿಶ್ವ ಮಧ್ವಮತ ವೆಲ್ಫೇರ್ ಫೌಂಡೇಷನ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕೆ.ವಿ. ಲಕ್ಷ್ಮೀನಾರಾಯಣ ಆಚಾರ್ಯ, ಸಿ.ಆರ್. ಮುರಳಿ, ಶ್ರೀನಿಧಿ ಆಚಾರ್ಯ ಉತ್ತನೂರು ಹಾಗೂ ಎಸ್. ಸುಘೋಷಾಚಾರ್ಯ ಅವರಿಗೆ ‘ಮಧ್ವವಿಜಯ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ದೀಪದ ಬುಡದಲ್ಲಿ ಕತ್ತಲೆ ಎಂಬಂತಾಗಿದೆ ನಮ್ಮ ಸ್ಥಿತಿ. ನಮ್ಮಲ್ಲಿ ಒಗ್ಗಟ್ಟು ಮೂಡಬೇಕು. ಈ ಸಂಬಂಧ ನಾನು ಕಳೆದ 40 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದು, ಈ ಮತದ ಅನೇಕ ಮಠಾಧೀಶರ ಜತೆಗೆ ಮಾತುಕತೆ ನಡೆಸಿದ್ದೇನೆ. ಎಷ್ಟೇ ಪ್ರಯತ್ನಪಟ್ಟರೂ ನಮ್ಮ ಮತದವರಲ್ಲಿ ಒಗ್ಗಟ್ಟು ಸಾಧ್ಯವಾಗಲಿಲ್ಲ. ದೈವ ಇಚ್ಛೆ ಇದ್ದಾಗ ಸಾಧ್ಯ ಆಗುತ್ತದೆ’ ಎಂದು ನಂಬಿದ್ದೇನೆ ಎಂದರು.

‘ಯಾರೇ ಒಬ್ಬರು ಮಧ್ವ ಮತದ ಸ್ವಾಮೀಜಿಯಲ್ಲ. ಎಲ್ಲ ಮಠದ ಸ್ವಾಮೀಜಿಗಳ ಕಾರ್ಯಕ್ರಮಕ್ಕೆ ಎಲ್ಲರೂ ಹೋಗಬೇಕು. ನಾವು ಎಲ್ಲರೂ ಒಂದಾಗಿ ಸಾಗಬೇಕು’ ಎಂದು ಹೇಳಿದರು.

ವಿದ್ವಾಂಸ ಕೆ.ವಿ. ಲಕ್ಷ್ಮೀನಾರಾಯಣ ಆಚಾರ್ಯ, ‘ಮಧ್ವ ಮತದ ಯಶಸ್ಸನ್ನು ಬೇರೆ ಮತದವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕುತಂತ್ರ ಮಾಡಿ, ಕಲಹ ಹುಟ್ಟು ಹಾಕುತ್ತಿದ್ದಾರೆ. ನಾವು ಇದನ್ನು ಅರಿತು, ಒಗ್ಗಟ್ಟಿನಿಂದ ಸಾಗಬೇಕು’ ಎಂದು ಅವರು ಹೇಳಿದರು.

ಸಾಹಿತಿ ಗುರುರಾಜ ಪೋಶೆಟ್ಟಿಹಳ್ಳಿ, ‘ನಮ್ಮ ಸಮುದಾಯದ ಅನೇಕರು ಎಲೆಮರೆಯ ಕಾಯಿಯಂತೆ ಇದ್ದು, ಸಮಾಜಕ್ಕೆ ಅವರದೇ ಆದ ಕೊಡುಗೆ ನೀಡುತ್ತಾ ಬಂದಿದ್ದಾರೆ. ಅವರನ್ನು ಗುರುತಿಸಿ ಗೌರವಿಸುವ ಕಾರ್ಯ ಹೆಚ್ಚಬೇಕು’ ಎಂದು ಅಭಿಪ್ರಾಯಪಟ್ಟರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಉಪಾಧ್ಯಕ್ಷ ಜಿ. ನಾಗೇಂದ್ರ, ಫೌಂಡೇಷನ್ ಸಂಸ್ಥಾಪನಾಧ್ಯಕ್ಷ ವೆಂಕೋಬರಾವ್ ಬುಕ್ಕಸಾಗರ, ರಾಷ್ಟ್ರೀಯ ಅಧ್ಯಕ್ಷ ರಾಘವೇಂದ್ರ ಪ್ರಸಾದ್ ಕೋಟಿ, ಸಹ ಸಂಸ್ಥಾಪಕ ಶ್ರೀನಿವಾಸ ಜೋಶಿ ಉಪಸ್ಥಿತರಿದ್ದರು.


ಸಮಾರಂಭದಲ್ಲಿ ಕೆ.ವಿ. ಲಕ್ಷ್ಮೀನಾರಾಯಣ ಆಚಾರ್ಯ, ಸಿ.ಆರ್. ಮುರಳಿ, ಶ್ರೀನಿಧಿ ಆಚಾರ್ಯ ಉತ್ತನೂರು ಹಾಗೂ ಎಸ್. ಸುಘೋಷಾಚಾರ್ಯ ಅವರಿಗೆ ‘ಮಧ್ವವಿಜಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮೀಜಿ, ಗುರುರಾಜ ಪೋಶೆಟ್ಟಿಹಳ್ಳಿ, ಜಿ. ನಾಗೇಂದ್ರ ಉಪಸ್ಥಿತರಿದ್ದರು

ರಸ್ತೆ ಗುಂಡಿ: ‘ಬಿಬಿಎಂಪಿ’ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ವಿಫಲವಾದ ರಾಜ್ಯ ಸರ್ಕಾರದ ವಿರುದ್ಧ ಬೆಂಗಳೂರು ಬ್ಲ್ಯಾಕ್ ಮಾಸ್ಕ್ ಪ್ರೊಟೆಸ್ಟ್ (ಬಿಬಿಎಂಪಿ) ಎಂಬ ಘೋಷಣೆಯೊಂದಿಗೆ ಮಾಸ್ಕ್ ಧರಿಸಿಕೊಂಡು ರಸ್ತೆ ಗುಂಡಿಗಳ ಬಳಿ ಪ್ರತಿಭಟನೆ ನಡೆಸಲಾಗುವುದು’ ಎಂದು ಉದ್ಯಮಿ ಅನಿಲ್ ಶೆಟ್ಟಿ ತಿಳಿಸಿದ್ದಾರೆ.

‘ಪ್ರತಿಭಟನೆ ಮಾಡುವ ನಾಗರಿಕರು ಸರ್ಕಾರದ ಮತ್ತು ಸ್ಥಳೀಯ ರಾಜಕಾರಣಿಗಳ ಕೆಂಗಣ್ಣಿಗೆ ಗುರಿಯಾಗುವುದರಿಂದ ತಪ್ಪಿಸಿಕೊಳ್ಳಲು ಕಪ್ಪು ಮಾಸ್ಕ್ ಧರಿಸಲಾಗುವುದು. ಈಗಾಗಲೇ ಕೆಲವು ಕಡೆಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ಇದರ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲಾಗುವುದು’ ಎಂದು ಹೇಳಿದ್ದಾರೆ.

ಬೆಂಗಳೂರನ್ನು ವಾಸಯೋಗ್ಯ ನಗರವನ್ನಾಗಿಸಲು ಸಾರ್ವಜನಿಕರು ಕೂಡ ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಕೋರಿದ್ದಾರೆ.


ನಗರದ ರಸ್ತೆ ಗುಂಡಿ ವಿರುದ್ಧ ಮಾಸ್ಕ್ ಧರಿಸಿ ನಾಗರಿಕರು ಪ್ರತಿಭಟನೆ ನಡೆಸಿದರು

ನಗರದಲ್ಲಿ ಇಂದು

ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಅತಿಥಿಗಳು: ದಿಲಿಪಿ ಕೃಷ್ಣಸ್ವಾಮಿ, ವಿ. ನಂದಕುಮಾರ್, ಅಧ್ಯಕ್ಷತೆ: ಎಂ.ಆರ್. ಸೀತಾರಾಂ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 11

‘ಐಕೆಎಸ್ ಹಾರಿಜೋನ್ಸ್– ಭಾರತೀಯ ಜ್ಞಾನ ವ್ಯವಸ್ಥೆ’ ರಾಷ್ಟ್ರೀಯ ಸಮ್ಮೇಳನ: ಅತಿಥಿ: ಅನಿಲ್ ಡಿ. ಸಹಸ್ರಬುಧೆ, ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

ವಿ. ಗೋಪಾಲಗೌಡ–75 ಅಭಿನಂದನೆ, ಪುಸ್ತಕ ಬಿಡುಗಡೆ, ಸಾಕ್ಷ್ಯಚಿತ್ರ ಪ್ರದರ್ಶನ: ಉದ್ಘಾಟನೆ: ಎಂ.ಎನ್. ವೆಂಕಟಾಚಲಯ್ಯ, ಅಭಿನಂದನಾ ನುಡಿ: ಎನ್. ಸಂತೋಷ್ ಹೆಗ್ಡೆ, ಅತಿಥಿಗಳು: ಎ.ಕೆ. ಪಟ್ನಾಯಕ್, ಪವನ್ ಕಲ್ಯಾಣ್, ಎಚ್.ಕೆ. ಪಾಟೀಲ, ಗೋಪಾಲ್ ಸುಬ್ರಮಣ್ಯಂ, ಸಂತೋಷ್ ಎಸ್. ಲಾಡ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಜಿ.ಟಿ. ದೇವೇಗೌಡ, ವೈ.ಎ. ನಾರಾಯಣಸ್ವಾಮಿ, ಅಧ್ಯಕ್ಷತೆ: ಎಂ.ಎನ್. ಶೇಷಾದ್ರಿ, ಆಯೋಜನೆ: ವಿ. ಗೋಪಾಲಗೌಡ ಅಭಿನಂದನಾ ಸಮಿತಿ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4.30


ವಿ. ಗೋಪಾಲ ಗೌಡ


‘ರುದ್ರ ಗೀತಾ’, ‘ಉದ್ಧವ ಗೀತಾ’ ಧಾರ್ಮಿಕ ಪ್ರವಚನ: ವೇಣುಗೋಪಾಲಾಚಾರ್ಯ ಗುಡಿ, ಆಯೋಜನೆ ಮತ್ತು ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹ ದೇವರ ಸನ್ನಿದಿ, ಉತ್ತರಾದಿ ಮಠ, ಬಸವನಗುಡಿ, ಸಂಜೆ 6.30


ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಶಿಕ್ಷಣ

ಶಿಕ್ಷಣದ ಉದ್ದೇಶವು ವ್ಯಕ್ತಿಯ ಮನಸ್ಸನ್ನು ವಿಷಯಗಳಿಂದ ತುಂಬಿಸುವುದಲ್ಲ; ತನ್ನ ಮನಸ್ಸು ಚಿಂತನೆಯಲ್ಲಿ ತೊಡಗುವಂತೆ ಮಾಡುವುದು ಹೇಗೆ ಎಂಬುದನ್ನು ಕಲಿಸುವುದು.

–ಹೆನ್ರಿ ಫೋರ್ಡ್





ನೇಮಕಾತಿ ಪರೀಕ್ಷೆ

ಅಧಿಸೂಚನೆವರೆಗೂ ಕಾಯುವುದೇಕೆ?

• ಸದಾಶಿವ ಸೊರಟೂರು

ನೇಮಕಾತಿ ಪರೀಕ್ಷೆಗಾಗಿ ಪತ್ರಿಕೆಯಲ್ಲಿ ಪ್ರಕಟವಾದ ಅಧಿಸೂಚನೆ ನೋಡುತ್ತಲೇ ಅಭ್ಯರ್ಥಿಗಳು ಎದ್ದು ಕೂರುತ್ತಾರೆ. ಇರುವುದು ನಲವತ್ತೇ ದಿನಗಳು. ರಾಶಿಗಟ್ಟಲೆ ಸಿಲಬಸ್. ಪುಸ್ತಕ ಹೊಂದಿಸಲು ಅಲೆದಾಟ. ಅರ್ಜಿ ಹಾಕಲು ತಾಕಲಾಟ. ಅದರ ಮಧ್ಯೆ, ಕೆಲಸ ಸಿಗುತ್ತದೋ ಇಲ್ಲವೋ ಎಂಬ ವಿಚಿತ್ರ ಚಡಪಡಿಕೆ. ಜೊತೆಗೆ ಒಂದಷ್ಟು ಭಯ, ಒತ್ತಡ. ಓದಬೇಕಾದದ್ದನ್ನು ಓದಲಾಗದೆ, ಬರೆಯಬೇಕಾದದ್ದನ್ನು ಬರೆಯಲಾಗದೆ ಪರೀಕ್ಷೆ ಕೊಠಡಿಯಲ್ಲಿ ಬೆವರಿನ ಮಳೆ.

ನಲವತ್ತು ದಿನಗಳ ಹೋರಾಟ ಮಕಾಡೆ. ಮತ್ತೊಂದು ಅಧಿಸೂಚನೆಯವರೆಗೂ ಕಾಯುತ್ತಾ ಕೂರುವ ಹಣೆಬರಹ. ಕಾಯುತ್ತಾ ಕೂರುವಿರೊ, ತಯಾರಿಗೆ ಕೂರುವಿರೊ ಎನ್ನುವುದು ಬಹಳ ಮುಖ್ಯ. ಅದರ ಮೇಲೆಯೇ ಗೆಲುವು ನಿರ್ಧರಿಸಲ್ಪಡುತ್ತದೆ.

ಒಂದು ನೌಕರಿ ಬೇಕು ಎನ್ನುವವರು ಅಧಿಸೂಚನೆ ಎಂಬ 'ಗುರುಬಲ'ಕ್ಕೆ ಕಾಯುತ್ತಾ ಕೂರಬಾರದು. ತಯಾರಿಗೆ ಇಳಿಯಬೇಕು. ಅಂತಹ ಓದಿಗೆ ಬರೀ ನಲವತ್ತೊ, ಐವತ್ತೊ ದಿನಗಳು ಸಾಕಾಗುವುದಿಲ್ಲ.

ನೌಕರಿ ಬೇಕು ಎಂಬ ಅಪೇಕ್ಷೆ ಮನದಲ್ಲಿ ಮೂಡಿದ ದಿನವೇ ಓದುವಿಕೆ ಶುರುವಾಗಬೇಕು. ಸಿಲಬಸ್ ಇಲ್ಲದೆ ಏನು ಓದುವುದು ಎಂಬ ಪ್ರಶ್ನೆ ನಿಮ್ಮದಾಗಿದ್ದರೆ, ಏನೇನು ಓದಬಹುದು ಎಂಬುದನ್ನು ಇಲ್ಲಿ ಚರ್ಚಿಸೋಣ. ಎಲ್ಲ ಪರೀಕ್ಷೆಗಳಿಗೂ ಒಂದು ಸಾಮಾನ್ಯ ಪತ್ಯ ಅನ್ನುವುದು ಇರುತ್ತದೆ. ಅದನ್ನು ಓದಿಕೊಂಡು ಬಿಟ್ಟರೆ ಮುಂದೆ ಅವರು ನೀಡುವ ಪತ್ಯ ಸುಲಭಕ್ಕೆ ನಿಮ್ಮ ಕೈವಶವಾಗುತ್ತದೆ.

ಹಳೆಯ ಪ್ರಶ್ನೆಪತ್ರಿಕೆ, ಹೊಸ ಭರವಸೆ: ನೀವು ಕಣ್ಣಿಟ್ಟಿರುವ ಮೂರ್ನಾಲ್ಕು ನೌಕರಿಗಳಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿ. ಜೊತೆಗೆ, ಇತರ ನೌಕರಿಗಳ ನೇಮಕಾತಿಗಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನೂ ಸಂಗ್ರಹಿಸಿಕೊಳ್ಳಿ. ಎರಡು ದಿನ ಕೂತು, ಅವುಗಳಲ್ಲಿ ಬಂದಿರುವ ಸಾಮಾನ್ಯ ಅಂಶಗಳನ್ನು ಗುರುತು ಮಾಡಿಕೊಳ್ಳಿ. ಬಹುತೇಕ ಪರೀಕ್ಷೆಗಳಲ್ಲಿ ಒಂದು ಸಾಮಾನ್ಯ ಪತ್ರಿಕೆ ಇದ್ದೇ ಇರುತ್ತದೆ. ಅದಕ್ಕೆ ಸಾಮಾನ್ಯ ವಿಷಯಗಳ ಓದುವಿಕೆ ಮುಖ್ಯ. ಆ ದಿಸೆಯಲ್ಲಿ ತಯಾರಿ ನಡೆಸಿ.

ದಿನಪತ್ರಿಕೆಗಳೆಂಬ ಬೆಳಕು: ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದಿನಪತ್ರಿಕೆಗಳು ತುಂಬಾ ಸಹಾಯಕ. ಅವನ್ನು ನಿರಂತರವಾಗಿ ಓದುತ್ತಾ ಬನ್ನಿ. ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಪಡೆದು ಕೆಲಸ ಹಿಡಿದವರ ಬಳಿ 'ಸರ್, ದಿನಪತ್ರಿಕೆಗಳಿಂದ ಏನಾದ್ರೂ ಉಪಯೋಗವಾದೀತ?' ಎಂದು ಕೇಳಿ ನೋಡಿ. 'ಹೌದು, ದಿನಪತ್ರಿಕೆ ಎಂಬುದು ಅಗತ್ಯವಾದ ಓದು. ಅದರಿಂದ ಹೆಚ್ಚಿನ ಸಹಾಯವಾಗುತ್ತದೆ' ಅನ್ನುತ್ತಾರೆ.

ದಿನಕ್ಕೆ ಕನಿಷ್ಠ ಎರಡು–ಮೂರು ಪತ್ರಿಕೆಗಳನ್ನು ವಿವರವಾಗಿ ಓದುವುದು ಒಳ್ಳೆಯದು. ಒಂದು ಇಂಗ್ಲಿಷ್ ಪತ್ರಿಕೆಯೂ ಜೊತೆಗೆ ಇರಲಿ. ಸಾಮಾನ್ಯ ಜ್ಞಾನ ನಿಮ್ಮನ್ನು ತಲುಪುವುದಲ್ಲದೆ ಪ್ರಚಲಿತ ವಿದ್ಯಮಾನಗಳ ಕುರಿತು ಚರ್ಚೆಗಳಿರುತ್ತವೆ. ಪ್ರಬಂಧದ ಮಾದರಿಯ ವಿವರ ಬಯಸುವ ಪರೀಕ್ಷೆಗಳಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ಚರ್ಚೆ ರೂಪದ ಪ್ರಶ್ನೆಗಳಿರುತ್ತವೆ. ಅಲ್ಲಿಗೆ ಇದರಿಂದ ಸಹಾಯವಾದೀತು. ಅಂತರರಾಷ್ಟ್ರೀಯ ಆಗುಹೋಗುಗಳ ಜ್ಞಾನ ನಿಮಗೆ ಸಿಗುತ್ತದೆ. ಪ್ರಚಲಿತ ವಿಷಯಗಳ ಬಗ್ಗೆ ಏನೇ ಕೇಳಿದರೂ ನೀವು ಬರೆಯಲು ಸಿದ್ಧರಾಗಬಹುದು.

ಸುಮ್ಮನೆ ಹಾಗೆ ಓದಿ ಎತ್ತಿಡುವುದಕ್ಕಿಂತ, ಓದಿದ ಮುಖ್ಯ ವಿಷಯಗಳನ್ನು ಟಿಪ್ಪಣಿ ಮಾಡಿಟ್ಟುಕೊಳ್ಳಿ.

ಪಠ್ಯಪುಸ್ತಕಗಳೆಂಬ ಭರವಸೆಯ ಗೆಳೆಯ: ನಾವು ಇಷ್ಟು ದಿನ ಓದಿದ ಪಠ್ಯಪುಸ್ತಕಗಳನ್ನು ಎತ್ತಿಟ್ಟುಕೊಳ್ಳುವುದು ತುಂಬಾ ಒಳ್ಳೆಯದು. ವರ್ಷದ ಕೊನೆಯಲ್ಲಿ ಪಠ್ಯಪುಸ್ತಕಗಳನ್ನು ರದ್ದಿಗೆ ಹಾಕುವುದಕ್ಕಿಂತ ನಷ್ಟ ಮತ್ತೊಂದಿಲ್ಲ. ಆರನೇ ತರಗತಿಯಿಂದ ಪದವಿ ತರಗತಿವರೆಗಿನ ಎಲ್ಲಾ ಪುಸ್ತಕಗಳ ಒಂದು ಸೆಟ್ ನಿಮ್ಮ ಬಳಿ ಇರಲಿ. ಅಲ್ಲದೆ ಸಿಬಿಎಸ್‌ಇ ಪಠ್ಯಪುಸ್ತಕಗಳನ್ನು ಸಂಗ್ರಹಿಸಿಕೊಳ್ಳಿ.

ಪಠ್ಯಪುಸ್ತಕಗಳಲ್ಲಿ ಸಮಾಜ ವಿಜ್ಞಾನ, ಕನ್ನಡ ಭಾಷೆ, ಸಾಮಾನ್ಯ ವಿಜ್ಞಾನ, ಸಾಮಾನ್ಯ ಗಣಿತದ ಬಗ್ಗೆ ಗಮನ ಕೇಂದ್ರೀಕರಿಸಿ. ನೀವು ಈಗಾಗಲೇ ಓದಿರುವ ಪುಸ್ತಕಗಳಾದ್ದರಿಂದ ಓದುವುದು ಮತ್ತು ನೆನಪಿಡುವುದು ಸುಲಭ. ಓದಿದ್ದನ್ನು ಟಿಪ್ಪಣಿ ಮಾಡಿಟ್ಟುಕೊಳ್ಳಿ.

ಪರೀಕ್ಷೆಗಳಲ್ಲಿ ಕೇಳುವ ಸಾಮಾನ್ಯ ಜ್ಞಾನದ ವಿಷಯಗಳು ಪಠ್ಯವನ್ನು ಹೆಚ್ಚು ಆಧರಿಸಿರುತ್ತವೆ. ಅಲ್ಲದೆ ಪಠ್ಯ ಓದುವುದರಿಂದ ನಿಮಗೆ ನಿಖರ ಮಾಹಿತಿ ಸಿಗುತ್ತದೆ. ಒಂದು ವೇಳೆ ಪರೀಕ್ಷಾ ಮಂಡಳಿ ತಪ್ಪು ಉತ್ತರ ಪ್ರಕಟಿಸಿದರೆ, ನೀವು ಪಠ್ಯದ ಆಕರವನ್ನು ಸಲ್ಲಿಸಬಹುದು. ಪಠ್ಯದಲ್ಲಿ ಬಂದಿರುವುದು ಅಧಿಕೃತವಾದದ್ದು.

ಜಾಲತಾಣ ಅಂಕದ ಖಜಾನೆ: ಈಗಾಗಲೇ ಬಹಳಷ್ಟು ವೆಬ್‌ಸೈಟ್‌ಗಳು ಈ ದಿಸೆಯಲ್ಲಿ ಸಕ್ರಿಯವಾಗಿವೆ. ಪ್ರಚಲಿತ ವಿದ್ಯಮಾನಗಳ ಪ್ರಶ್ನೋತ್ತರಗಳು, ಚರ್ಚೆಗಳು, ಪ್ರಬಂಧಗಳು ಮತ್ತು ಮಾಹಿತಿ ನಿಮಗೆ ಸಿಗುತ್ತದೆ. ಅದನ್ನು ಪ್ರತಿನಿತ್ಯ ನೀವು ಓದುತ್ತಾ ಹೋಗಬಹುದು.

ಆ್ಯಪ್‌ಗಳು ಮತ್ತು ಜಾಲತಾಣಗಳಲ್ಲಿ ಉಚಿತವಾದವೂ ಇವೆ, ಹಣ ಖರೀದಿಸಿ ಬಳಸಬಹುದಾದವೂ ಇವೆ. ಬಹಳಷ್ಟು ಮಾಹಿತಿಗಳು ಎರಡು ಕಡೆಯೂ ಲಭ್ಯವಾಗುವುದರಿಂದ ನಿಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು. ಅಲ್ಲದೆ ಅಣಕು ಪರೀಕ್ಷೆಗಳು ಕೂಡ ಇರುವುದರಿಂದ, ಅವನ್ನು ತೆಗೆದುಕೊಂಡು ನೀವು ನಿಮ್ಮ ಓದಿನ ಸ್ಥಿತಿಯನ್ನು ಪರೀಕ್ಷಿಸಿಕೊಳ್ಳಬಹುದು. ನಿಮಗೆ ಆತ್ಮವಿಶ್ವಾಸ ನೀಡುವ ಕೆಲಸವನ್ನು ಅಣಕು ಪರೀಕ್ಷೆಗಳು ಮಾಡುತ್ತವೆ.

ಬಹುತೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮಾನಸಿಕ ಸಾಮರ್ಥ್ಯಕ್ಕೆ ತಾಲೀಮು ನೀಡುವ ಪ್ರಶ್ನೆಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಇವುಗಳಿಗೆ ತಯಾರಿ ನಡೆಸಲು ನೇಮಕಾತಿ ಸಮಯದ ಸಿಲಬಸ್‌ನ ಅವಶ್ಯಕತೆ ಇಲ್ಲ. ನೀವು ಹಳೆಯ ಪ್ರಶ್ನೆಪತ್ರಿಕೆಗಳನ್ನು ಗಮನಿಸಿಕೊಂಡರೆ, ಅದೇ ಮಾದರಿಯಲ್ಲಿ ಸಿಗುವ ಸಂಪನ್ಮೂಲಗಳನ್ನು ಒಳಗೊಂಡ ಪುಸ್ತಕಗಳ ಲಭ್ಯತೆ ಬಹಳಷ್ಟಿರುತ್ತದೆ. ನೀವು ಅವನ್ನು ಖರೀದಿಸಿ ಪ್ರತಿನಿತ್ಯ ಅಭ್ಯಸಿಸುವುದು ಒಳ್ಳೆಯದು. ವಿವಿಧ ನಮೂನೆಗಳ ಬಗ್ಗೆ ಸತತ ಅಭ್ಯಾಸ ಮಾಡುವುದರಿಂದ, ಆ ಬಗೆಯ ಯಾವುದೇ ಪ್ರಶ್ನೆ ಕೊಟ್ಟರೂ ಅದರ ಮೂಲ ಹಿಡಿದು ಬಿಡಿಸಲು ನಿಮಗೆ ಅನುಕೂಲವಾಗುತ್ತದೆ.

ಯಾವುದೇ ನೌಕರಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಕರೆಯುವ ಮುನ್ನ ನೀವು ಇವಿಷ್ಟು ವಿಷಯಗಳನ್ನು ಚೆನ್ನಾಗಿ ಓದಿಕೊಂಡು ಸಿದ್ಧರಾಗಿದ್ದರೆ ಒಳ್ಳೆಯದು. ನಂತರ, ಅಧಿಸೂಚನೆಯಲ್ಲಿ ಕೊಡಲಾಗುವ ನಿರ್ದಿಷ್ಟ ಪಠ್ಯಕ್ಕೆ ತಯಾರಿ ನಡೆಸಲು ಅನುಕೂಲವಾಗುತ್ತದೆ. ತಯಾರಿಗೆ ಸಮಯವೂ ಸಿಗುತ್ತದೆ, ಗೆಲುವು ಕೂಡ ದಕ್ಕುತ್ತದೆ. ಎಷ್ಟು ಓದುವಿರೋ ಅಷ್ಟು ಗೆಲುವಿನ ಸಾಧ್ಯತೆ ಹೆಚ್ಚು.



ಸಮಾಧಾನ

ಡಾ. ಡಿ.ಎಂ.ಹೆಗಡೆ, ಸಮಾಲೋಚಕ

ಹರೆಯದ ಮಗನ ತಿದ್ದುವುದು ಹೇಗೆ?

ನಮಗೆ ಇಬ್ಬರು ಮಕ್ಕಳು. ಮಗ ಎರಡನೇ ಪಿಯುಸಿ ಮತ್ತು ಮಗಳು ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದಾರೆ. ಮಗ ಓದಿನಲ್ಲಿ ಪರವಾಗಿಲ್ಲ. ಆದರೆ ವಿಪರೀತ ಹುಡುಗಾಟಿಕೆಯ ಸ್ವಭಾವ. ಯಾವಾಗಲೂ ಏನಾದರೂ ಕೀಟಲೆ ಮಾಡುತ್ತಾ ಇರುತ್ತಾನೆ. ಇತರರ ಕಾಲೆಳೆಯುವುದೆಂದರೆ ಅವನಿಗೆ ಏನೋ ಮೋಜು. ಎಷ್ಟೇ ಬುದ್ಧಿ ಹೇಳಿದರೂ ಬೈದರೂ ಸರಿಯಾಗುತ್ತಿಲ್ಲ. ತಂಗಿಗೂ ವಿಪರೀತ ಕಿಚಾಯಿಸುತ್ತಾನೆ. ಕಾಲೇಜಿನಿಂದ ದೂರುಗಳು ಬರುತ್ತಿವೆ. ಮಗನಿಗೆ ಬೈದರೆ, ಹೊಡೆದರೆ ಮೈಮೇಲೇರಿ ಬರುತ್ತಾನೆ. ಗೆಳೆಯರೊಟ್ಟಿಗೆ ಊರೆಲ್ಲ ಸುತ್ತುತ್ತಾನೆ. ಸರಿಯಾದ ಸಮಯಕ್ಕೆ ಮನೆಗೆ ಬರುವುದಿಲ್ಲ. ಪರಿಹಾರ ಹೇಗೆ?

ಗೌತಮಿ ಗಿರೀಶ್ ಭಂಡಾರಿ, ಬೆಂಗಳೂರು

ನಮ್ಮ ಮಕ್ಕಳು ನಾವು ಹೇಳಿದಂತೆ ಕೇಳಬೇಕು ಎನ್ನುವ ಆಸೆಯು ಪಾಲಕರಲ್ಲಿ ಇರುವುದು ತೀರಾ ಸಹಜ. ಮಕ್ಕಳ ಒಳ್ಳೆಯದಕ್ಕೇ ತಾನೆ ನಾವು ಹೇಳುವುದು ಎನ್ನುವ ಅವರ ವಾದವೂ ಸರಿಯೇ. ಆದರೆ, ಪಾಲಕರ ಮಾತನ್ನು ಕೇಳುವ ವ್ಯವಧಾನ ಮಕ್ಕಳಿಗೆ ಇರುವುದಿಲ್ಲ; ಮಕ್ಕಳ ಮನಸ್ಸಿಗೆ ನಾಟುವಂತೆ ಹೇಳಬೇಕಾದ ಸಮಾಧಾನ ಪಾಲಕರಿಗೆ ಇರುವುದಿಲ್ಲ.

ಹದಿಹರೆಯದ ಮಗ ಹೀಗೆ ಆಡುತ್ತಿದ್ದರೆ ಪಾಲಕರಿಗೆ ಚಿಂತೆಯಾಗುತ್ತದೆ. ಹಾಗೆಂದು, ನೀವು ಅವನನ್ನು ಹೀನಾಯವಾಗಿ ಬೈಯ್ಯಬಾರದು. ಇನ್ನು ಹೊಡೆಯುವುದಂತೂ ಮಾಡಲೇಬಾರದು. ಅದರಿಂದ ಅವಮಾನಿತನಾಗಿ, ಅವನು ಇನ್ನಷ್ಟು ರೊಚ್ಚಿಗೇಳಬಹುದು. ಅವನಿಗೆ ತಂದೆ, ತಾಯಿ ಬಗ್ಗೆ ಗೌರವವಾಗಲೀ ಭಯವಾಗಲೀ ಇದ್ದಂತಿಲ್ಲ. ಎಳವೆಯಿಂದಲೇ ಅವನಿಗೆ ಏನೋ ಕೊರತೆಯಾದಂತಿದೆ. ಅದರ ವಿರುದ್ಧ ಅವನು ಈಗ ಸಿಡಿದೆದ್ದ ಹಾಗಿದೆ. ಬಾಲ್ಯದಲ್ಲಿ ಅವನಿಗೆ ಪಾಲಕರಿಂದ ಅಥವಾ ಶಿಕ್ಷಕರಿಂದ ಹಿಂಸೆ, ಅವಮಾನ ಆಗಿರಬಹುದು. ಅವನ ಮನಸ್ಸು ಆ ನೋವನ್ನು ಮರೆತಿರಲಿಕ್ಕಿಲ್ಲ. ಅದಕ್ಕೆ ಪ್ರತೀಕಾರವಾಗಿ, ಅವನಿಗೇ ಗೊತ್ತಿಲ್ಲದ ಹಾಗೆ ಅವನು ಈಗ ಎಲ್ಲ ಕಟ್ಟಳೆಗಳಿಂದ ಮುಕ್ತನಾದಂತೆ ವ್ಯವಹರಿಸುತ್ತಿರಬಹುದು.

ಮಠದಲ್ಲಿ ಬೆಳೆದ ಗಿಳಿ ಹಾಗೂ ಕಟುಕನ ಮನೆಯಲ್ಲಿ ಬೆಳೆದ ಗಿಳಿಯ ಕತೆ ನಿಮಗೆ ಗೊತ್ತಿರಬಹುದು. ಮಕ್ಕಳೂ ಅಷ್ಟೆ. ತಮ್ಮ ಸುತ್ತಲಿನ ಪರಿಸರದಿಂದ ಕಲಿಯುತ್ತಾರೆ. ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ನಿರ್ಧರಿಸುವ ಪಕ್ವತೆ ಅವರಿಗೆ ಇರುವುದಿಲ್ಲ. ಕೆಲವರಂತೂ ಯಾವಾಗಲೂ ದ್ವಂದ್ವ ಹಾಗೂ ಗೊಂದಲಗಳಿಂದ ಬಳಲುತ್ತಾರೆ.

ನೀವು ನಿಮ್ಮ ಮಗನಿಗೆ ಬೆಂಬಲವಾಗಿಯೇ ಇದ್ದುಕೊಂಡು ಅವನನ್ನು ಸರಿದಾರಿಗೆ ತರಲು ಪ್ರಯತ್ನಿಸಬೇಕು. ಅವನ ಗೆಳೆಯರ ಪಾಲಕರ ಸಹಾಯವನ್ನೂ ಪಡೆಯಬಹುದು. ಅವನ ಶಿಕ್ಷಕರನ್ನು ಸಂಪರ್ಕಿಸಿ ಸಲಹೆ ಪಡೆದುಕೊಳ್ಳಬಹುದು. ಪರೀಕ್ಷೆಯಲ್ಲಿ ಮಕ್ಕಳು ಕಡಿಮೆ ಅಂಕ ಗಳಿಸುತ್ತಾರೆ, ನಪಾಸಾಗುತ್ತಾರೆ ಅಥವಾ ಮಕ್ಕಳು ಮಾಡುವ ಕೆಲವು ತಪ್ಪುಗಳಿಂದ ತಮಗೆ ಅವಮಾನವಾಗುತ್ತದೆ ಎನ್ನುವ ಒತ್ತಡದಿಂದ ಪಾಲಕರು ಮೊದಲು ಹೊರಗೆ ಬರಬೇಕು.

ನಾವೂ ಮಕ್ಕಳಾಗಿದ್ದವರು. ಹೇಗೆ ಹೇಗೋ ಇದ್ದವರು. ಯಾವುದಕ್ಕೆ ಯಾವುದನ್ನೋ ಮಾಡಿದವರು. ಏನೇನೋ ಆಗಬೇಕಾಗಿದ್ದವರು. ಏನೋ ಆದವರು. ಈಗ ಇಲ್ಲಿಯವರೆಗೆ ಬಂದಿದ್ದೇವೆ, ಹೀಗೆ ಆಗಿದ್ದೇವೆ. ಇದನ್ನು ಮನಸ್ಸಿನಲ್ಲಿಟ್ಟು ನಮ್ಮ ಮಕ್ಕಳನ್ನು ಗಮನಿಸಬೇಕು. ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಅವರನ್ನು ದೋಷಿಯನ್ನಾಗಿ ಮಾಡಬಾರದು.

ನಿಮ್ಮ ಮಗನ ಮನಸ್ಸಿಗೆ ಸಜ್ಜನರ ಸಂಗದಿಂದ, ಒಳ್ಳೆಯ ವಿಚಾರಗಳಿಂದ ಬಹಳಷ್ಟು ಸಕಾರಾತ್ಮಕ ವಿಷಯಗಳು ಸಿಗುವಂತೆ ಹಾಗೂ ಅದರಿಂದಾಗುವ ಪ್ರಯೋಜನಗಳ ಬಗ್ಗೆ ಅವನಿಗೆ ಅರಿವಾಗುವಂತೆ ನೋಡಿಕೊಳ್ಳಿ. ಒಟ್ಟಿನಲ್ಲಿ ಇದು ಹೀಗೆಯೇ ಎಂದೇನೂ ಹೇಳಲಿಕ್ಕಾಗದು. ಪಾಲಕರು ತಮ್ಮ ಕರ್ತವ್ಯವನ್ನು ಮಾಡಬೇಕು. ಅದನ್ನು ಕಂಡು ಮಕ್ಕಳು ಶಿಸ್ತಿನಿಂದ ತಮ್ಮ ಕೆಲಸವನ್ನು ಮಾಡಬೇಕು. ಆಗ ಇಬ್ಬರಿಗೂ ಯಶಸ್ಸು ಸಿಗಲು ಸಾಧ್ಯ.

ನಿಮ್ಮ ಪ್ರಯತ್ನದ ನಂತರವೂ ಅವನ ವರ್ತನೆಯಲ್ಲಿ ಸಕಾರಾತ್ಮಕ ಬದಲಾವಣೆ ಕಾಣದಿದ್ದರೆ, ಸಮರ್ಥ ಮನೋವೈದ್ಯರನ್ನು ಸಂಪರ್ಕಿಸುವುದು ಸೂಕ್ತ.

ವಿದ್ಯಾರ್ಥಿ ವೇತನ ಕೈಪಿಡಿ

ರೂಪಾ ರಾಹುಲ್ ಬಜಾಜ್ ಸ್ಕಾಲರ್‌ಷಿಪ್ ಫಾರ್ ವಿಮೆನ್ ಇನ್ ಎಂಜಿನಿಯರಿಂಗ್

ಬಜಾಜ್ ಆಟೊ ಲಿಮಿಟೆಡ್‌ನ ಪ್ರಮುಖ ಉಪಕ್ರಮವಾದ ಈ ವಿದ್ಯಾರ್ಥಿವೇತನವು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ (ಸಿಎಸ್‌ಆರ್) ಭಾಗವಾಗಿದೆ. ಎಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿನಿಯರನ್ನು ಇದು ಪ್ರೋತ್ಸಾಹಿಸುತ್ತದೆ.

ಅರ್ಹತೆ: ಆಯ್ದ 40 ಉನ್ನತ ಎಂಜಿನಿಯರಿಂಗ್ ಕಾಲೇಜುಗಳಿಗೆ ದಾಖಲಾದ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಲು ಅರ್ಹರು. ಅನ್ವಯವಾಗುವ ವಿಭಾಗಗಳು: ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್, ಇಂಡಸ್ಟ್ರಿಯಲ್/ಪ್ರೊಡಕ್ಷನ್, ಆಟೊಮೊಬೈಲ್, ಮೆಕಾಟ್ರಾನಿಕ್ಸ್, ಇನ್‌ಸ್ಟ್ರುಮೆಂಟೇಶನ್, ಮೆಟೀರಿಯಲ್ ಸೈನ್ಸಸ್ ಮತ್ತು ಮೆಟಲರ್ಜಿ. 12ನೇ ತರಗತಿಯಲ್ಲಿ ಕನಿಷ್ಠ ಶೇ 75ರಷ್ಟು ಅಂಕ ಪಡೆದಿರಬೇಕು.

ಆರ್ಥಿಕ ಸಹಾಯ: ₹ 8 ಲಕ್ಷದವರೆಗೆ ವಿದ್ಯಾರ್ಥಿವೇತನ.
ಉದ್ಯಮ ವೃತ್ತಿಪರರಿಂದ ಮಾರ್ಗದರ್ಶನ.
ಒಟ್ಟಾರೆ ಬೆಳವಣಿಗೆಗೆ ಅನುವಾಗುವಂತೆ ಜೀವನಕೌಶಲ ವೃದ್ಧಿ ಮತ್ತು ವೃತ್ತಿಪರ ಅಭಿವೃದ್ಧಿಗೆ ನೆರವು.
ನಿರಂತರ ಬೆಂಬಲ ಮತ್ತು ಸಹಯೋಗಕ್ಕಾಗಿ ಹಳೆಯ ವಿದ್ಯಾರ್ಥಿಗಳು ಹಾಗೂ ಕಾರ್ಯಜಾಲದ ಸಂಪರ್ಕ.
ಅರ್ಜಿ ಸಲ್ಲಿಸಲು ಕೊನೇ ದಿನ: 31-10-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: Short Url: www.b4s.in/praja/BAJAJ1

ವಿದೇಶಿ ಭಾಷೆ ಕಲಿಕೆ ಅರ್ಜಿ ಆಹ್ವಾನ

ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರವು 2025–26ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ, ಕೆಳಗಿನ ವಿದೇಶಿ ಭಾಷೆಗಳ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ. ಸರ್ಟಿಫಿಕೇಟ್ ಕೋರ್ಸ್ (8 ತಿಂಗಳ ಅವಧಿ), ಅಂಡರ್‌ಗ್ರ್ಯಾಜುಯೇಟ್ ಡಿಪ್ಲೊಮಾ ಮತ್ತು ಪೋಸ್ಟ್‌ಗ್ರ್ಯಾಜುಯೇಟ್ ಡಿಪ್ಲೊಮಾ (8 ತಿಂಗಳ ಅವಧಿ) ಕೋರ್ಸ್: ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪಾನೀಸ್, ಚೈನೀಸ್ ಮತ್ತು ರಷ್ಯನ್.

- **ಪ್ರವೇಶಕ್ಕೆ ಕೊನೆಯ ದಿನಾಂಕ:** 11 ಅಕ್ಟೋಬರ್ 2025

ಅರ್ಹತೆ
- ಸರ್ಟಿಫಿಕೇಟ್ ಕೋರ್ಸ್‌ಗಾಗಿ– 2ನೇ ಪಿಯುಸಿ/12ನೇ ತರಗತಿ ಉತ್ತೀರ್ಣರಾಗಿರಬೇಕು
- ಡಿಪ್ಲೊಮಾ/ಪೋಸ್ಟ್‌ಗ್ರ್ಯಾಜುಯೇಟ್ ಡಿಪ್ಲೊಮಾಗಾಗಿ– ಹಿಂದಿನ ಹಂತದ ಕೋರ್ಸ್ ಉತ್ತೀರ್ಣರಾಗಿರಬೇಕು

ವಿವರಗಳಿಗೆ: 080-29572019/6361756549 ದೂರವಾಣಿ ಸಂಖ್ಯೆ ಅಥವಾ ಸೆಂಟ್ರಲ್ ಕಾಲೇಜು ಹಿಂಭಾಗದಲ್ಲಿರುವ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಕೇಂದ್ರದ ನಿರ್ದೇಶಕಿ ಪ್ರೊ. ಜ್ಯೋತಿ ವೆಂಕಟೇಶ್ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್



Dr. B.R. Ambedkar

Questions and Answers

3. He raised it 'brick by brick'. In this context, what was raised?
Ans: In this context, he raised brick by brick was the examples and experiences of other nations and the distinctive needs of our society, which now stands as the Fundamental Rights in the constitution of Indian.

4. Who were the other notable members of the drafting committee?
Ans: The other notable members of the drafting committee were Alladi Krishnaswami Iyyar, K. M. Munshi and Gopalaswami Ayyangar etc..

5. Ambedkar had ' rare gifts ' What were they?.
Ans : Ambedkar had rare gifts like unraveling the most complicated legal concepts. in a language which the laymen understood. And also hehad tactfulness, frankness, and patience.

6. The constitution is a fundamental document to both the ruler and the ruled. How?
Ans: The constitution is a fundamental document to both the ruler and the ruled because the Constitution is a document which defines the position and power of the three organs of the State, the executive, the judiciary and the legislature. It is also dealing with fundamental rights which gives powers to citizens.

Share Your Responses

1. Nehru court Ambedkar as a law minister for three reasons. What are they? (paragraph 7)
Ans: The three reasons are
1. He had skills in the field of law and legislation.
2. His vision of Social justice
3. His own campaigns against social injustice.

2. Are you aware of the facilities provided by the Social Welfare Department? Mention any two.
Ans: Yes. The Social Welfare Department, as suggested by the name, strives for social welfare and justice. It ensures the welfare of the Scheduled Caste/Scheduled tribe, handicapped and marginalized sections of society. National Overseas Scholarship for the SCs/STs and Free Coaching Scheme for SC/ST and OBC students, and many welfare schemes are providing.

3. After independence, members of the Scheduled Castes have found doors opened to them. How?
Ans: Before independence, members of the Scheduled Castes were ill-treated but after independence the picture changed. Now no legal bars exist today for self-expression or self-advancement. Since Independence, members of the scheduled castes have found doors opened to them. No legal bars exist for self–expression or self –advancement. They can enroll themselves in institutes of higher learning and enter public services. They occupy high offices of state and center. They also compete for the posts of judges, ambassadors and governors. They have acquitted themselves creditably in all these positions of responsibility.

4. All people should be given equal opportunities to prove themselves. How are the members of the Scheduled Castes proving themselves?
Ans: All people including Scheduled castes should be given equal opportunities to prove themselves.

People from the Scheduled Castes are enrolling themselves in institutes of higher learning and entering public services. They have come to occupy high offices of State, both at the Centre and in the States. Judges, ambassadors and governors have been drawn from their ranks. And they have acquitted themselves creditably in all these positions of responsibility.

5. Babasaheb Ambedkar considers public agitation in free India as unconstitutional. Why?
Ans: Ambedkar considers public agitation in free India as unconstitutional because the right to rebellion is recognized against a government without people's consent it should be a dictatorship such agitations invariably result in the loss of lives and Public property.

Share Your Responses

1. What were the opinions of the Buddha and Avvai regarding the caste divisions?
Ans: The opinion of Buddha regarding the last divisions are (1) The noble and wholesome people and (2) The ignoble and unwholesome people.

The **Tamil Poetess Awai** said that (1) The charitable who give and are superior (2) The misers who do not give and are inferior.

2. Caste system in India is in a strong position because of _____[fill in the blank picking theanswer from paragraph 11]
Ans: Power structure.Question

3. Why did the British magnify the caste distinctions?
Ans: The British rulers magnify or exaggerated the caste distinctions to strengthen their control over us. So they started the policy of "Divide and Rule".

4. The word 'hegemony' means ______
a) distinction b) control c) strength
Ans: b) Control

5. 'They brought about a veritable revolution in social thought.'
a) Who are 'they' ?
b) What 'revolution' is referred to here?
c) How did they bring about the revolution?

(Contd)

BIOLOGY

PRINCIPLES OF INHERITANCE AND VARIATION

2. The human male and female bird are heterogametic while the human female and male bird are homogametic. Why are they called so?
Ans:- (a) Sex chromosomes are heteromorphic in both human male and female bird.

Human Male – XY, Female Bird – ZW.

They produce two types of gametes and are hence heterogametic.

Human Males – (A + X), (A + Y),

Female Bird – (A + Z), (A + W).

b) Human female as well as male bird have homomorphic sex chromosomes.

Human Female – XX, Male Bird – ZZ.


They produce only type of gametes and are hence homogametic.

Human Females-(A + X), Male Bird – (A + Z).


3. In Pea plant, smooth seed coat is dominant over wrinkled seed coat. What will be the expected ratio of phenotypes of the offspring in a cross between –

i	Heterozygous smooth	x	Heterozygous smooth
ii	Heterozygous smooth	x	Homozygous wrinkled
iii	Heterozygous smooth	x	Homozygous smooth


Ans:- Smooth Seed coat - S, Wrinkled Seed coat – s



Smooth - 3, Wrinkled - 1 or 3 : 1.



Smooth - 2, Wrinkled - 2 or 1 : 1



All Smooth or 1 : 0.

4. T.H. Morgan while going on walk, found a fruit covered with flies. He took the flies to the laboratory. He, alongwith his students, performed experiments for several generations. They were surprised to observe that some of characters do not obey Mendelian principle of independent assortment.
i) Write the common name of flies and also the scientific name.
ii) What is the cause of this phenomenon?
iii) Fill in the blanks:
The tendency of certain traits of two characters to be inherited together generation after generation is called ….
The tendency of traits of two characters to separate in certain generation is ….

Ans:- i) Common Name: Fruit fly
Scientific Name: Drosophila Melanogaster
ii) Linkage
iii) Linkage, crossing over

5. Colour blindness is a sex-linked disease. It is due to X-chromosome. Normal parents have three normal daughters and one colour blind son. What is the reason for it? Ten possible reasons are given. Find out which are correct -
i) It is an autosomal linked inheritance.
ii) It is a sex-linked inheritance.
iii) Father is a carrier.
iv) Mother is a carrier
v) Son acquired character from mother.
vi) Son acquired character from father.
vii) Daughter is heterozygous for colour blindness.
viii) Daughter is homozygous for colour blindness.
ix) Daughter is heterozygous and homozygous for normal vision.
x) In future the family may have normal sons.

Ans:- ii) It is a sex-linked inheritance.
iii) Mother is a carrier

(Contd….)

ಬಸವ ಸಂಸ್ಕೃತಿ ಅಭಿಯಾನ ಸಮಾರೋಪ: ವಿಭೂತಿ ಹಚ್ಚಿ ಗಮನ ಸೆಳೆದ ಸಿ.ಎಂ

‘ನಮ್ಮದು ಬಸವ ತತ್ವದ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಬಸವಣ್ಣನ ಅಪ್ಪಟ ಅಭಿಮಾನಿ. ಈಗಲೂ ಬಸವ ತತ್ವದಲ್ಲಿ ನಂಬಿಕೆ-ಬದ್ಧತೆ ಇಟ್ಟುಕೊಂಡೇ ಸಾರ್ವಜನಿಕ ಜೀವನದಲ್ಲಿದ್ದೇನೆ. ಅವರ ತತ್ವದ ಮೇಲೆಯೇ ನಮ್ಮ ಸರ್ಕಾರವೂ ನಡೆಯುತ್ತಿದೆ. ಭಾಗ್ಯ, ಗ್ಯಾರಂಟಿ ಯೋಜನೆಗಳ ಹಿಂದೆ ಅವರ ಆಶಯವಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಲಿಂಗಾಯತ ಮಠಾಧೀಶರ ಒಕ್ಕೂಟ ಭಾನುವಾರ ಆಯೋಜಿಸಿದ್ದ ‘ಬಸವ ಸಂಸ್ಕೃತಿ ಅಭಿಯಾನ’ದ ಸಮಾರೋಪ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

‘ನಮ್ಮಲ್ಲಿ ಅನೇಕ ಜಾತಿ, ಧರ್ಮಗಳಿವೆ. ನಾವೆಲ್ಲರೂ ಶೂದ್ರರು. ಚಾತುರ್ವರ್ಣ ವ್ಯವಸ್ಥೆಯಲ್ಲಿ ನಾಲ್ಕನೇ ಸ್ಥಾನದಲ್ಲಿ ಇರುವವರು. ಜಾತಿ ಯಾವುದೇ ಆದರೂ ನಾವೆಲ್ಲರೂ ಒಂದೇ ಎನ್ನುವುದನ್ನು ಶೂದ್ರರು ಅರಿಯಬೇಕು. ನಾವು ಮನುಷ್ಯ ನಿರ್ಮಿತ ಜಾತಿ, ಧರ್ಮದ, ಅಸಮಾನತೆಯ ತಾರತಮ್ಯಗಳನ್ನು ಸಹಿಸುವುದು ಅಷ್ಟೇ ಅಲ್ಲ. ಆಚರಿಸಲೂಬಾರದು’ ಎಂದರು.

‘ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಬಸವಣ್ಣನವರ ಭಾವಚಿತ್ರ ಇಡುವುದನ್ನು ಕಡ್ಡಾಯ ಮಾಡಲಾಗಿದೆ. ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವ ಮೂಲಕ ಇಡೀ ಸರ್ಕಾರ ಬಸವಣ್ಣನವರಿಗೆ ಗೌರವ ಸೂಚಿಸಿದೆ. ಬಸವಣ್ಣನವರು ನುಡಿದಂತೆ ನಡೆದರು. ನಾವು ನುಡಿದಂತೆ ನಡೆದಾಗ ಮಾತ್ರ ನಿಜವಾದ ಬಸವ ಅನುಯಾಯಿಗಳಾಗುತ್ತೇವೆ’ ಎಂದರು.

ಚಿತ್ರದುರ್ಗದ ಮಾದಾರ ಚನ್ನಯ್ಯ ಸ್ವಾಮೀಜಿ ಮಾತನಾಡಿ, ‘ಬಸವಣ್ಣ ಹೇಳಿದಂತೆ ಲಿಂಗಾಯತರು ದಲಿತ ಸಮುದಾಯಗಳ ಜನರನ್ನು ಬರಮಾಡಿಕೊಂಡು, ಲಿಂಗಧಾರಣೆ ಮಾಡಿಸಿದ್ದರೆ ಇಂದು ಅವರ ಸಂಖ್ಯೆ ಶೇ 87ರಷ್ಟಿರುತ್ತಿತ್ತು. ದಲಿತ ಮತ್ತು ಹಿಂದುಳಿದ ಸಮುದಾಯಗಳಿಗೆ ಸೇರಿದವರೆಲ್ಲ ನಿಜವಾದ ಅರ್ಥದಲ್ಲಿ ಬಸವಣ್ಣನ ಮಕ್ಕಳೇ ಆಗಿದ್ದೇವೆ’ ಎಂದರು. ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಸ್ವಾಮೀಜಿಗಳು, ಸಚಿವರಾದ ಕೆ.ಎಚ್. ಮುನಿಯಪ್ಪ, ಡಾ. ಶರಣಪ್ರಕಾಶ ಪಾಟೀಲ, ಲಕ್ಷ್ಮಿ ಹೆಬ್ಬಾಳಕರ, ಶಾಸಕ ಬಿ.ಆರ್. ಪಾಟೀಲ, ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್, ಸಾಹಿತಿ ಗೊ.ರು. ಚನ್ನಬಸಪ್ಪ ಇದ್ದರು.

‘ಲಿಂಗಾಯತರು ಸಿದ್ದರಾಮಯ್ಯ ಜತೆ ನಿಲ್ಲಿ’

‘ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಫೋಟೊ ಇಡುವುದನ್ನು ಸಿದ್ದರಾಮಯ್ಯ ಕಡ್ಡಾಯ ಮಾಡಿದರು, ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿದರು. ಮಹಿಳಾ ವಿವಿಗೆ ಅಕ್ಕಮಹಾದೇವಿಯ ಹೆಸರು ಇಟ್ಟರು. ನಮ್ಮ ಸಮುದಾಯಕ್ಕೆ ಲಿಂಗಾಯತ ನಾಯಕರಿಗಿಂತ ಹೆಚ್ಚು ಕೆಲಸಗಳನ್ನು ಮಾಡಿಕೊಟ್ಟಿರುವು-ದರಿಂದ ಸಮುದಾಯವು ಅವರ ಜತೆ ನಿಲ್ಲಬೇಕಾಗಿದೆ’ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ಮುಂದಿನ ವರ್ಷ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು
ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಖ್ಯಾಂಶಗಳು

- ಜಾತಿ, ಧರ್ಮದ ಅಸಮಾನತೆಯನ್ನು ಆಚರಿಸಬಾರದು
- ಗ್ಯಾರಂಟಿ ಯೋಜನೆಗಳ ಹಿಂದೆ ಬಸವಣ್ಣನ ಆಶಯವಿದೆ: ಸಿ.ಎಂ

‘ಪ್ರತ್ಯೇಕ ಧರ್ಮ’ ಕೂಗು ಮುನ್ನೆಲೆಗೆ

ಒಂದನೇ ಪುಟದಿಂದ...

'ಕೇಂದ್ರ ಸರ್ಕಾರ ಈಗ ಒಪ್ಪಿಗೆ ನೀಡಬೇಕಾಗಿದೆ. ಒಂದಿಲ್ಲೊಂದು ದಿನ ಕೇಂದ್ರದಿಂದಲೂ ಅನುಮತಿ ಸಿಕ್ಕೇ ಸಿಗುತ್ತದೆ’ ಎಂದರು.

ಜಾಗತಿಕ ಲಿಂಗಾಯತ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಮಾತನಾಡಿ, ‘ಪ್ರತ್ಯೇಕ ಧರ್ಮ ಮಾನ್ಯತೆಯ ಪ್ರಯತ್ನ ಮುಂದುವರಿದಿದೆ. ಈಗ ನಮ್ಮಲ್ಲಿ ಸಾವಿರಕ್ಕೂ ಹೆಚ್ಚು ಮಠಗಳು ಸಕ್ರಿಯವಾಗಿವೆ. ಆದರೂ 300ಕ್ಕೂ ಹೆಚ್ಚು ವಿರಕ್ತಮಠಗಳು ನಮ್ಮಿಂದ ಹೊರಗಿವೆ. ತಕರಾರು ಮಾಡದೇ ಅವರೂ ಲಿಂಗಾಯತ ಧರ್ಮದ ಭಾಗ ಆಗಬೇಕು’ ಎಂದು ಅವರು ಸಲಹೆ ನೀಡಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಮಾತನಾಡಿ, ‘ಬಸವ ತತ್ವವೇ ಬೇರೆ, ಧರ್ಮವೇ ಬೇರೆ, ಬಸವ ಧರ್ಮವು ಇಂದು ಇಡೀ ಪ್ರಪಂಚಕ್ಕೆ ಬೇಕಾಗಿದೆ. ಲಿಂಗಾಯತ ಧರ್ಮಕ್ಕಾಗಿ ಹೋರಾಟ ನಡೆಯಬೇಕು’ ಎಂದು ನುಡಿದರು.

ಸಚಿವ ಎಂ.ಬಿ. ಪಾಟೀಲ, ‘ಲಿಂಗಾಯತರು ಯಾರ ವಿರೋಧಿಗಳೂ ಅಲ್ಲ. ಭೌಗೋಳಿಕವಾಗಿ ನಾವು ಹಿಂದೂಗಳೇ ಆಗಿದ್ದೇವೆ. ಆದರೆ, ಧರ್ಮದಿಂದ ಲಿಂಗಾಯತರು. ಲಿಂಗಾಯತ ಧರ್ಮ ಹೆಚ್ಚು ಹೆಚ್ಚು ಪ್ರಸಾರವಾಗಿ, ಬಸವ ಭಾರತ ಆಗಬೇಕು’ ಎಂದು ತಿಳಿಸಿದರು.

ಪ್ರತ್ಯೇಕ ಧರ್ಮದ ಮಾನ್ಯತೆಗೆ ಜಾಗೃತಿ ಮುಂದುವರಿಸುವುದೂ ಸೇರಿ ಐದು ನಿರ್ಣಯಗಳನ್ನು ಕೈಗೊಳ್ಳಲಾಯಿತು.

‘ದಲಿತ, ಮುಸ್ಲಿಂ ಮಹಿಳೆಯರ ಹೆಸರುಗಳಿಗೆ ಕೊಕ್’


ಅಲ್ಕಾ ಲಾಂಬಾ

ನವದೆಹಲಿ(ಪಿಟಿಐ): ಬಿಹಾರದಲ್ಲಿ ಕೈಗೊಂಡಿದ್ದ ‘ಎಸ್‌ಐಆರ್’ ವೇಳೆ, ದಲಿತ ಹಾಗೂ ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಲಾಗಿತ್ತು. ಅಂದಾಜು 23 ಲಕ್ಷ ಮಹಿಳೆಯರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಕಾಂಗ್ರೆಸ್ ಪಕ್ಷ ಭಾನುವಾರ ಆರೋಪಿಸಿದೆ.

ರಾಜ್ಯದ 59 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಇಷ್ಟೊಂದು ಸಂಖ್ಯೆಯ ಮಹಿಳೆಯರ ಹೆಸರುಗಳನ್ನು ತೆಗೆದು ಹಾಕಲಾಗಿದೆ. 2020ರ ಚುನಾವಣೆಯಲ್ಲಿ ಈ ಕ್ಷೇತ್ರಗಳಲ್ಲಿಯೇ ತೀವ್ರ ಹಣಾಹಣಿ ಇತ್ತು ಎಂದು ಪಕ್ಷದ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ಅಲ್ಕಾ ಲಾಂಬಾ ಹೇಳಿದ್ದಾರೆ.

ಹೆಚ್ಚುವರಿ ವಿಮಾನ ನಿಯೋಜನೆ, ದರ ನಿಯಂತ್ರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಮುಂಬೈ: ಹಬ್ಬಗಳ ಸಂದರ್ಭದಲ್ಲಿ ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ಬೇಡಿಕೆಗೆ ತಕ್ಕಂತೆ ಹೆಚ್ಚುವರಿ ವಿಮಾನಗಳನ್ನು ನಿಯೋಜಿಸುವಂತೆ ಹಾಗೂ ಹೆಚ್ಚಿನ ಪ್ರಯಾಣ ದರ ವಿಧಿಸದಂತೆ ಕ್ರಮಕೈಗೊಳ್ಳುವಂತೆ ವಿಮಾನಯಾನ ಸಂಸ್ಥೆಗಳಿಗೆ ಡಿಜಿಸಿಎ ನಿರ್ದೇಶಿಸಿದೆ.

ಹಬ್ಬಗಳ ಸಂದರ್ಭದಲ್ಲಿ ಪ್ರಯಾಣ ದರ ಹೆಚ್ಚಳವಾಗುತ್ತಿರುವುದಕ್ಕೆ ನಾಗರಿಕ ವಿಮಾನಯಾನ ಸಚಿವಾಲಯದ ವಿರುದ್ಧ ಪ್ರಯಾಣಿಕರಿಂದ ಆಕ್ಷೇಪ ಕೇಳಿಬಂದಿದ್ದವು. ಇದನ್ನು ಪರಿಗಣಿಸಿರುವ ನಾಗರಿಕ ವಿಮಾನಯಾನ ಮಹಾ ನಿರ್ದೇಶ-ನಾಲಯವು (ಡಿಜಿಸಿಎ), ಪ್ರಯಾಣ ದರಗಳ ಬಗ್ಗೆ ಗಮನಹರಿಸುವಂತೆ ಸಚಿವಾಲಯಕ್ಕೆ ಸೂಚಿಸಿದೆ. ಅಲ್ಲದೇ, ದರ ಹೆಚ್ಚಳ ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ನಿರ್ದೇಶಿಸಿದೆ.

ಪ್ರಯಾಣಿಕರು ಹೆಚ್ಚಾಗಿ ತೆರಳುವ ಪ್ರದೇಶಗಳ ಮಾರ್ಗವಾಗಿ ಹೆಚ್ಚುವರಿ ವಿಮಾನಗಳನ್ನು ನಿಯೋಜಿಸುವಂತೆ ವಿಮಾನಯಾನ ಸಂಸ್ಥೆಗಳಿಗೆ ತಿಳಿಸಿದೆ. ಇಂಡಿಗೊ ಸಂಸ್ಥೆಯು 730 , ಏರ್ ಇಂಡಿಯಾ 486, ಸ್ಪೈಸ್‌ಜೆಟ್ 546 ವಿಮಾನಗಳನ್ನು ಹೆಚ್ಚುವರಿಯಾಗಿ ನಿಯೋಜಿಸುವ ಭರವಸೆ ನೀಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚುನಾವಣೆ: ಕೆಲ ಹೊಸ ಉಪಕ್ರಮ ಜಾರಿ

ಒಂದನೇ ಪುಟದಿಂದ...

‘ಎಲ್ಲ ಮತಗಟ್ಟೆಗಳಲ್ಲಿ ಶೇ100ರಷ್ಟು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಅಳವಡಿಸಲಾಗುವುದು. ಇವಿಎಂಗಳಲ್ಲಿ ದತ್ತಾಂಶ ತಾಳೆಯಾಗದೇ ದೂರುಗಳು ಬಂದ ವೇಳೆ, ವಿವಿಪ್ಯಾಟ್ ಚೀಟಿಗಳ ಪರಿಶೀಲನೆ ಕಡ್ಡಾಯಗೊಳಿಸಲಾಗುವುದು’ ಎಂದರು.

ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ಡಾ.ವಿವೇಕ ಜೋಶಿ ಉಪಸ್ಥಿತರಿದ್ದರು.



ಆಧಾರ್–ಸ್ಪಷ್ಟನೆ: ‘ಆಧಾರ್ ಕಾರ್ಡ್ ವ್ಯಕ್ತಿಯ ಗುರುತು ದೃಢಪಡಿಸುವ ಉದ್ದೇಶಕ್ಕಾಗಿ ಇರುವುದು. ಅದು ಜನ್ಮದಿನಾಂಕ ಅಥವಾ ವಿಳಾಸ ಇಲ್ಲವೇ ಪೌರತ್ವದ ಪುರಾವೆ ಅಲ್ಲ’ ಎಂದು ಪ್ರಶ್ನೆಯೊಂದಕ್ಕೆ ಸಿಇಸಿ ಜ್ಞಾನೇಶ್ ಕುಮಾರ್ ಪ್ರತಿಕ್ರಿಯಿಸಿದರು.

ಆಯೋಗವು, ಬಿಹಾರ ವಿಧಾನಸಭೆ ಚುನಾವಣೆ ದಿನಾಂಕ ಕುರಿತು ಒಂದೆರಡು ದಿನಗಳಲ್ಲಿ ಘೋಷಿಸುವ ಸಾಧ್ಯತೆ ಇದೆ.

ಪ್ರಮುಖ ಅಂಶಗಳು

- 2 ದಿನಗಳ ಪ್ರವಾಸ ಕೈಗೊಂಡಿದ್ದ ಸಿಇಸಿ ಜ್ಞಾನೇಶ್ ಕುಮಾರ್. ಚುನಾವಣೆ ಸಿದ್ಧತೆ ಕುರಿತು ಅಧಿಕಾರಿಗಳೊಂ-ದಿಗೆ ಚರ್ಚೆ
- ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ. ಸಲಹೆ–ಸೂಚನೆ ಆಲಿಕೆ
- 243 ಕ್ಷೇತ್ರಗಳ ಪೈಕಿ 38 ಪರಿಶಿಷ್ಟ ಜಾತಿ ಹಾಗೂ 2 ಕ್ಷೇತ್ರ ಪರಿಶಿಷ್ಟ ಪಂಗಡಗಳಿಗೆ ಮೀಸಲು
- ಛತ್ ಹಬ್ಬದ ಬಳಿಕ ಚುನಾವಣೆ ನಡೆಸುವಂತೆ ಬಹುತೇಕ ರಾಜಕೀಯ ಪಕ್ಷಗಳಿಂದ ಮನವಿ

ಮೋದಿ, ರಾಹುಲ್ ಪ್ರಸ್ತಾಪಿಸಿದ್ದ ವಿಚಾರಗಳಿಗೆ ಉತ್ತರಿಸದ ಸಿಇಸಿ

ಬಿಹಾರದಲ್ಲಿ ಕೈಗೊಂಡಿದ್ದ ‘ಎಸ್‌ಐಆರ್’ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಿಇಸಿ ಜ್ಞಾನೇಶ್ ಕುಮಾರ್, ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾಪಿಸಿದ್ದ ‘ನುಸುಳುಕೋರರು’ ಹಾಗೂ ‘ಮತ ಕಳವು’ ಕುರಿತು ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಮಾಡಿದ್ದ ಆರೋಪಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ.

‘ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಹಾರಕ್ಕೆ ಭೇಟಿ ನೀಡಿದಾಗಲೆಲ್ಲಾ ನುಸುಳುಕೋರರ ಕುರಿತು ಪ್ರಸ್ತಾಪಿಸು-ತ್ತಿದ್ದರು. ಬಿಹಾರದಲ್ಲಿ ದೊಡ್ಡ ಸಂಖ್ಯೆಯಲ್ಲಿ ನುಸುಳುಕೋರರಿದ್ದು, ಅವರು ಮತ ಚಲಾಯಿಸುತ್ತಾರೆ ಎಂದು ಮೋದಿ ಹಾಗೂ ಶಾ ಹೇಳಿದ್ದಾರಲ್ಲ’ ಎಂದು ಪತ್ರಕರ್ತರು ಪ್ರಶ್ನಿಸಿದರು. ಇದಕ್ಕೆ ಸಿಇಸಿ ಉತ್ತರಿಸಲಿಲ್ಲ.

‘ಎಸ್‌ಐಆರ್ ವೇಳೆ ಎಷ್ಟು ಜನ ನುಸುಳುಕೋರರು ಪತ್ತೆಯಾಗಿದ್ದಾರೆ’ ಎಂಬ ಪ್ರಶ್ನೆಗೂ ಅವರು ಉತ್ತರಿಸಲಿಲ್ಲ.

‘ಮತ ಕಳವು’ ಕುರಿತು ರಾಹುಲ್ ಗಾಂಧಿ ಮಾಡುತ್ತಿರುವ ಆರೋಪಗಳ ಕುರಿತ ಮತ್ತೊಂದು ಪ್ರಶ್ನೆಗೂ ಸಿಇಸಿ ಪ್ರತಿಕ್ರಿಯೆ ನೀಡಲಿಲ್ಲ.

ಆದರೆ, ‘ಮುಜಫ್ಫರಪುರದ ನಿರ್ದಿಷ್ಟ ಮತಗಟ್ಟೆಯೊಂದರ ಮತದಾರರ ಪಟ್ಟಿಯಲ್ಲಿ ಒಂದೇ ಸಮುದಾಯಕ್ಕೆ ಸೇರಿದ 100ಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಸೇರ್ಪಡೆ ಮಾಡಿರುವ ಕುರಿತು ತನಿಖೆ ನಡೆಸಬೇಕು’ ಎಂದು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ವಿನೋದ್ ಗುಂಜ್ಯಾಲ್ ಅವರಿಗೆ ಸೂಚಿಸಿದರು.

‘ಅನೇಕ ಮತದಾರರಿಗೆ ಮನೆ ಇಲ್ಲ. ಇಂಥ ಸಂದರ್ಭಗಳಲ್ಲಿ, ನೆರೆ ಮನೆಯ ಸಂಖ್ಯೆಯನ್ನು ಇಂತಹ ಮತದಾರರಿಗೆ ಹಂಚಿಕೆ ಮಾಡಲಾಗುತ್ತದೆ. ಹೀಗಾಗಿ, ಒಂದು ಮನೆಯಲ್ಲಿ ಅನೇಕ ಮತದಾರರು ಕಂಡುಬರುವ ಸಾಧ್ಯತೆ ಹೆಚ್ಚು’ ಎಂದು ಅವರು ಕಾಂಗ್ರೆಸ್ ಪಕ್ಷದ ನಿಯೋಗ ಎತ್ತಿದ್ದ ಆಕ್ಷೇಪಕ್ಕೆ ಪ್ರತಿಕ್ರಿಯಿಸಿದರು.

‘ತೃಪ್ತಿ ತಂದಿದೆ’: ‘ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯ ತೃಪ್ತಿ ತಂದಿದೆ. ಮತದಾರರ ಪಟ್ಟಿಯ ‘ಶುದ್ಧೀಕರಣ’ ಕಾರ್ಯದಲ್ಲಿ 90 ಸಾವಿರಕ್ಕೂ ಅಧಿಕ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಶ್ಲಾಘನೀಯ ಕಾರ್ಯ ಮಾಡಿದ್ದಾರೆ’ ಎಂದು ಜ್ಞಾನೇಶ್ ಕುಮಾರ್ ಹೇಳಿದರು.

‘22 ವರ್ಷಗಳ ಬಳಿಕ ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಲಾಗಿದೆ. ನೈಜ ಮತದಾರರ ಸಂಖ್ಯೆಯನ್ನು 7.89 ಕೋಟಿಯಿಂದ 7.43 ಕೋಟಿಗೆ ಇಳಿಸಲು ಇದರಿಂದ ಸಾಧ್ಯವಾಗಿದೆ’ ಎಂದು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅರಸರಿಗೊಂದು ಧರ್ಮ, ಆಳಿಗೊಂದು ಧರ್ಮವಿಲ್ಲ.

ತ.ರಾ.ಸು.

ಸಂಪಾದಕೀಯ

ಮಕ್ಕಳ ಸಾವು ಹೃದಯವಿದ್ರಾವಕ ಜೀವಗಳೊಂದಿಗೆ ಚೆಲ್ಲಾಟ ಬೇಡ

ಮಧ್ಯಪ್ರದೇಶ ಹಾಗೂ ರಾಜಸ್ಥಾನ ರಾಜ್ಯಗಳಲ್ಲಿ ಕೆಮ್ಮಿನ ಸಿರಪ್‌ನ ಸೇವನೆಯಿಂದ ಕನಿಷ್ಠ 14 ಮಕ್ಕಳು ಮೃತಪಟ್ಟಿರುವ ಘಟನೆ ಹೃದಯವಿದ್ರಾವಕ. ಜೀವದಾಯಿನಿ ಆಗಬೇಕಿದ್ದ ಔಷಧವೇ ಜೀವ ಕಳೆದುಕೊಳ್ಳಲು ಕಾರಣವಾದ ದುರ್ಘಟನೆ ಇದಾಗಿದೆ. ತಮಿಳುನಾಡಿನಲ್ಲಿ ತಯಾರಿಸಲಾಗಿದ್ದ 'ಕೋಲ್ಡ್ರಿಫ್' ಎಂಬ ಸಿರಪ್‌ನಿಂದಾಗಿ ಮಕ್ಕಳು ಪ್ರಾಣ ಕಳೆದುಕೊಳ್ಳಬೇಕಾಯಿತು ಎಂದು ಹೇಳಲಾಗಿದೆ. 'ಕೋಲ್ಡ್ರಿಫ್'ನಲ್ಲಿ 'ಡೈಇಥಿಲೀನ್ ಗ್ಲೈಕೋಲ್' (ಡಿಇಜಿ) ಎಂಬ ದ್ರಾವಣದ ಪ್ರಮಾಣವು ಅನುಮತಿಸಿದ ಮಿತಿಗಿಂತಲೂ ಹಲವು ಪಟ್ಟು ಹೆಚ್ಚಾಗಿದ್ದುದು ತಮಿಳುನಾಡು ಆರೋಗ್ಯ ಇಲಾಖೆಯು ನಡೆಸಿದ ಪರೀಕ್ಷೆಯಿಂದ ದೃಢಪಟ್ಟಿದೆ. ಕೈಗಾರಿಕೆಗಳಲ್ಲಿ ಹೆಚ್ಚಾಗಿ ಬಳಕೆಯಾಗುವ ಡಿಇಜಿಯು ಒಂದು ವಿಷಕಾರಿ ದ್ರಾವಣವಾಗಿದ್ದು, ಮೂತ್ರಪಿಂಡವನ್ನು ಹಾನಿಗೊಳಿಸುತ್ತದೆ ಎಂಬುದಾಗಿ ವೈದ್ಯಕೀಯ ಅಧ್ಯಯನ ವರದಿಗಳು ಬಹುಹಿಂದೆಯೇ ಮಾಹಿತಿ ನೀಡಿವೆ. ಔಷಧಿಗಳಲ್ಲಿ ಇಂತಹ ದ್ರಾವಣಗಳ ಬಳಕೆ ಕುರಿತಂತೆ ಎಚ್ಚರದಿಂದ ಇರಬೇಕಿದ್ದ ಸರ್ಕಾರಗಳು, 'ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದ ಹಾಗೆ' ಎನ್ನುವ ಗಾದೆಯಂತೆ, ಅನಾಹುತವೆಲ್ಲ ಘಟಿಸಿದ ಮೇಲೆ ಕಲುಷಿತ ಔಷಧಗಳ ಮಾರಾಟದ ಮೇಲೆ ನಿಷೇಧ ಹೇರಿವೆ. ಮಕ್ಕಳಿಗೆ 'ಕೋಲ್ಡ್ರಿಫ್' ನೀಡಲು ಕಾರಣರಾದ ವೈದ್ಯರನ್ನು ಅಮಾನತುಗೊಳಿಸಿವೆ. ಅಲ್ಲದೆ, ಕೋಲ್ಡ್ರಿಫ್ ಸಿರಪ್ ತಯಾರಿಕೆ ಕಂಪನಿಯಾದ ತಮಿಳುನಾಡಿನ ಸ್ರೇಸನ್ ಫಾರ್ಮಾ ವಿರುದ್ಧ ಎಫ್‌ಐಆರ್ ಅನ್ನೂ ದಾಖಲಿಸಿವೆ. ಹಣ ಮಾಡುವ ಹಪಹಪಿಯ ಖಾಸಗಿ ಕಂಪನಿಗಳು ಹಾಗೂ ಭ್ರಷ್ಟ ಸರ್ಕಾರಿ ವ್ಯವಸ್ಥೆ ಜೊತೆಯಾಗಿ ಮಾಡಿದ ಕೊಲೆಗಳು ಇವಾಗಿವೆಯೇ ಹೊರತು, ಮಕ್ಕಳದು ಆಕಸ್ಮಿಕ ಸಾವಲ್ಲ ಎನ್ನದೆ ವಿಧಿಯಿಲ್ಲ. ಏಕೆಂದರೆ, ಔಷಧ ಕಂಪನಿಯು ಸಿರಪ್‌ನಲ್ಲಿ ವಿಷಕಾರಿ ದ್ರಾವಣ ಕಲಬೆರಕೆ ಆಗದಂತೆ ನೋಡಿಕೊಂಡಿದ್ದರೆ, ಔಷಧ ನಿಯಂತ್ರಕರು ಸಿರಪ್ ಅನ್ನು ಸಮರ್ಪಕವಾಗಿ ಪರೀಕ್ಷೆಗೆ ಒಳಪಡಿಸಿದ್ದರೆ ಮಕ್ಕಳ ಸಾವುಗಳನ್ನು ತಡೆಯಲು ಸಾಧ್ಯವಿತ್ತು.



ಕೆಮ್ಮಿನ ಔಷಧಿ ಸೇವನೆಯಿಂದ ಹಲವು ಮಕ್ಕಳು ಸಾವಿಗೀಡಾಗಿದ್ದಾರೆ. ಜೀವರಕ್ಷಕ ಎಂದು ನಂಬಲಾದ ಔಷಧಗಳೇ ಜೀವ ತೆಗೆಯುವುದರ ಹಿಂದಿನ ಸಾಧ್ಯತೆಗಳು ಗಾಬರಿ ಹುಟ್ಟಿಸುವಂತಿವೆ.

ಭಾರತವು ಕೆಮ್ಮಿನ ಸಿರಪ್‌ನಿಂದಾದ ಅನಾಹುತಗಳಿಗೆ ಸುದ್ದಿಯಾಗುತ್ತಿರುವುದು ಇದೇ ಮೊದಲ ಸಲ ಏನಲ್ಲ. ಭಾರತದಿಂದ ಪೂರೈಸಲಾಗಿದ್ದ ಕೆಮ್ಮಿನ ಸಿರಪ್‌ನ ಸೇವನೆಯಿಂದಾಗಿ 2022ರಲ್ಲಿ ಗ್ಯಾಂಬಿಯಾ ಹಾಗೂ ಉಜ್ಬೇಕಿಸ್ತಾನದಲ್ಲಿ ಡಜನ್‌ಗಟ್ಟಲೆ ಮಕ್ಕಳು ಅಸುನೀಗಿದ್ದವು. ಹರಿಯಾಣ ಹಾಗೂ ದೆಹಲಿ ಮೂಲದ ಫಾರ್ಮಾ ಕಂಪನಿಗಳು ಈ ಸಿರಪ್ ಅನ್ನು ಪೂರೈಸಿದ್ದವು. ಪರೀಕ್ಷೆಗೆ ಒಳಪಡಿಸಿದಾಗ ಆ ಸಿರಪ್‌ಗಳಲ್ಲಿ ಡಿಇಜಿ ದ್ರಾವಣ ಭಾರಿ ಪ್ರಮಾಣದಲ್ಲಿರುವುದು ಪತ್ತೆಯಾಗಿತ್ತು. ವಿಶ್ವ ಆರೋಗ್ಯ ಸಂಸ್ಥೆಯು ಯಾವ ಯಾವ ದೇಶಗಳಲ್ಲಿ ಈ ಸಿರಪ್ ಅನ್ನು ಬಳಕೆ ಮಾಡಲಾಗುತ್ತಿದೆಯೋ ಆ ಎಲ್ಲ ಕಡೆಗಳಲ್ಲಿ ಕೂಡಲೇ ಮಾರುಕಟ್ಟೆಯಿಂದ ಅದನ್ನು ಹಿಂಪಡೆಯಬೇಕು ಎಂದು ಸೂಚಿಸಿತ್ತು. ಈ ಎರಡೂ ಕಂಪನಿಗಳಿಗೆ ನೀಡಿದ್ದ ಲೈಸೆನ್ಸ್ ಅನ್ನು ಭಾರತ ತಾತ್ಕಾಲಿಕವಾಗಿ ರದ್ದುಗೊಳಿಸಿತ್ತು. ದಿನಗಳು ಕಳೆದಂತೆ ಆ ಕಂಪನಿಗಳ ತಯಾರಿಕಾ ಘಟಕಗಳು ಮೊದಲಿನ ಸ್ಥಿತಿಗೆ ಬಂದವು. ಯಾವುದೇ ಶಿಕ್ಷೆಗೂ ಆ ಕಂಪನಿಗಳು ಗುರಿಯಾಗಲಿಲ್ಲ. ದೇಶದಲ್ಲಿ ಔಷಧಗಳ ಗುಣಮಟ್ಟದ ಮೇಲೆ ಹೇಗೆ ನಿಗಾ ವಹಿಸಲಾಗುತ್ತಿದೆ ಎಂಬುದರ ದ್ಯೋತಕ ಇದು. ಸದ್ಯ, ಕೇಂದ್ರ ಆರೋಗ್ಯ ಇಲಾಖೆಯು ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಸಂಭವಿಸಿದ ಮಕ್ಕಳ ಸಾವಿನ ಕುರಿತು ತನಿಖೆ ಆರಂಭಿಸಿದೆ. ತನಿಖೆಯು ಮುಗಿದು ವರದಿ ಹೊರಬರುವ ಹೊತ್ತಿಗೆ ಪ್ರಕರಣವೇ ತಣ್ಣಗಾಗಿರುತ್ತದೆ.

ಉತ್ತರ ಭಾರತದ ರಾಜ್ಯಗಳಲ್ಲಿ ಮಕ್ಕಳ ಸಾವಿಗೆ ಕಾರಣವಾಗಿರುವ ಸಿರಪ್ ಕುರಿತು ನಿಗಾ ವಹಿಸುವಂತೆ ರಾಜ್ಯದಲ್ಲಿ ಔಷಧ ನಿಯಂತ್ರಣ ಅಧಿಕಾರಿಗಳಿಗೆ ಸರ್ಕಾರವು ಸೂಚಿಸಿರುವ ಕ್ರಮ ಸಕಾಲಿಕವಾದುದು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಸಿರಪ್ ಬಳಕೆ ಆಗುತ್ತಿಲ್ಲ ಎಂದು ಆರೋಗ್ಯ ಸಚಿವರು ಸ್ಪಷ್ಟಪಡಿಸಿದ್ದಾರೆ. ಖಾಸಗಿಯಾಗಿ ಬಳಕೆಯಾಗುತ್ತಿರುವ ಕುರಿತು ತನಿಖೆ ನಡೆಸುವುದಾಗಿಯೂ ತಿಳಿಸಿದ್ದಾರೆ. ಹಾಗೆ ನೋಡಿದರೆ ಬೇರೆಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ಔಷಧಗಳ ಪರೀಕ್ಷೆ ಹೆಚ್ಚಾಗಿ ನಡೆಯುತ್ತಿಲ್ಲ. ಕರ್ನಾಟಕ ಮಾದರಿಯನ್ನು ಅನುಸರಿಸಲು ಕೇಂದ್ರವು ಇತರ ರಾಜ್ಯಗಳಿಗೆ ಸಲಹೆ ನೀಡಿದೆ ಕೂಡ. ಯಾವುದೇ ರಾಜ್ಯದಲ್ಲಿ ಯಾವುದೇ ಔಷಧಿ ಬಳಕೆಯಾಗುವ ಮುನ್ನ ಸೂಕ್ತ ಪರೀಕ್ಷೆಗೆ ಒಳಗಾಗುವ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ರಾಜ್ಯಗಳಲ್ಲಿ ನಡೆಯುವ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗುವ ಔಷಧಗಳ ಕುರಿತು ಆಯಾ ಕ್ಷಣವೇ ಇತರ ರಾಜ್ಯಗಳ ಗಮನಕ್ಕೆ ತರಬೇಕು. ಕಳಪೆ ಔಷಧಿ ತಯಾರಿಸುವ ಕಂಪನಿಗಳ ಮೇಲೆ ನಿಷೇಧ ಹೇರಿ, ಅವುಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಔಷಧ ಕಂಪನಿಗಳು ಹಾಗೂ ಔಷಧ ನಿಯಂತ್ರಕರ ನಡುವಿನ ಅಕ್ರಮವಾದ ನಂಟನ್ನು ತುಂಡರಿಸಬೇಕು. ಇಲ್ಲದಿದ್ದರೆ ಅಮಾಯಕ ಜೀವಗಳೊಂದಿಗೆ ಚೆಲ್ಲಾಟವಾಡುವ ಇಂತಹ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ.

ಚಾಲಡ

ಉನ್ಮಾದವೂ ಆತ್ಮವಂಚನೆಯೂ...



ಉನ್ಮಾದವನ್ನು ಎನ್‌ಕ್ಯಾಶ್ ಮಾಡಿಕೊಳ್ಳುವ ಯಾವ ರಾಜಕಾರಣಿಯೇ ಆಗಲಿ ಮತ್ತು ವಿಶೇಷವಾಗಿ ಒಬ್ಬ ಕಲಾವಿದ, ಒಬ್ಬ ಬರಹಗಾರ, ಆತ್ಮವಂಚಕ ಅಲ್ಲದೇ ಬೇರೇನೂ ಅಲ್ಲ.

ಕಲಾಧರ್ ಎಸ್., ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ದೇಶ ಹಾಗೂ ಹಿಂದೂ ಧರ್ಮದ ಪರವಾಗಿ ನಾನು ಮಾತನಾಡುತ್ತೇನೆ ಎಂದು ನ್ಯಾಯಾಲಯಗಳಿಗೂ ಗೊತ್ತು. ನ್ಯಾಯಾಲಯಗಳು ಇಲ್ಲದಿದ್ದಲ್ಲಿ ನಾನು ಜೈಲಿನಲ್ಲಿಯೇ ಕಾಯಂ ಇರಬೇಕಾಗಿತ್ತು.

ಬಸನಗೌಡ ಪಾಟೀಲ ಯತ್ನಾಳ, ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 6-10-2000

• ಕುಡಿಯುವ ನೀರಿಗೆ ರೂ 375 ಕೋಟಿ

ಮಂಗಳೂರು, ಅ. 5- ದಕ್ಷಿಣ ಕನ್ನಡ ಸೇರಿದಂತೆ ದೇಶದ 58 ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ 375 ಕೋಟಿ ರೂ. ವೆಚ್ಚದ ಯೋಜನೆ ಜಾರಿ ಮಾಡಲಾಗುತ್ತಿದೆ ಎಂದು ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ತಿಳಿಸಿದರು.

ಪ್ರಧಾನ ಮಂತ್ರಿಗಳ ಗ್ರಾಮೋದಯ ಅಭಿವೃದ್ಧಿ ಯೋಜನೆಯಡಿ ಒಟ್ಟು 375 ಕೋಟಿ ರೂ.ಗಳನ್ನು ಮೀಸಲಿರಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಗೆ 40 ಕೋಟಿ ಪೈಕಿ 11 ಕೋಟಿ ರೂ. ಬಿಡುಗಡೆಯಾಗಿದೆ ಎಂದರು.

• ಹಣ ದುರುಪಯೋಗ ತಡೆಗೆ ಸಹಕಾರ ಕಾಯ್ದೆ ತಿದ್ದುಪಡಿ

ಬೆಂಗಳೂರು, ಅ. 5- ಕರ್ನಾಟಕ ಸಹಕಾರ ಕಾಯ್ದೆ (30ಎ) ವಿಧಿಗೆ ತರಲಿರುವ ತಿದ್ದುಪಡಿಯನ್ನು ಸಹಕಾರ ಸಚಿವ ಡಿ.ಕೆ. ಶಿವಕುಮಾರ್ ಸಮರ್ಥಿಸಿ ಕೊಂಡರಲ್ಲದೆ, ಸಹಕಾರ ಸಂಸ್ಥೆಗಳು ಪಡೆದಿರುವ 1900 ಕೋಟಿ ರೂ.ಸಾಲಕ್ಕೆ ಸರ್ಕಾರ ಖಾತ್ರಿ ನೀಡಿದ್ದು, ದುರುಪಯೋಗ ತಡೆಗೆ ನಿಯಂತ್ರಣ ಅಧಿಕಾರ ಅಗತ್ಯ ಎಂದರು.

75 ವರ್ಷಗಳ ಹಿಂದೆ

ಶುಕ್ರವಾರ, 6-10-1950

• ಮುಂಬೈ ಮುಷ್ಕರಕ್ಕೆ 53 ದಿನ ತುಂಬಿತು

ಮುಂಬೈ, ಅ. 5- ಇಲ್ಲಿನ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಈ ದಿನ 53ನೆಯ ದಿನ ತುಂಬಿತು. 23 ಗಿರಣಿಗಳಲ್ಲಿ 26 ಸಾವಿರ ಕಾರ್ಮಿಕರು ಕಾರ್ಯಗತರಾಗಿರುವುದಾಗಿ ಸರ್ಕಾರಿ ಸುದ್ದಿ ತಿಳಿಸುತ್ತದೆ.

ಸೋಷಲಿಸ್ಟ್ ಪಕ್ಷದ ಹತೋಟಿಯಲ್ಲಿರುವ ಮಿಲ್ ಮಜ್ದೂರ್ ಸಭಾ ಸುದ್ದಿಯ ಪ್ರಕಾರ, ಎಂಟು ಸಾವಿರ ಕೆಲಸಗಾರರು ಏಳು ಗಿರಣಿಗಳಲ್ಲಿ ಹಾಜರಿದ್ದರೆಂದು ತಿಳಿದುಬಂದಿದೆ.

• ದಕ್ಷಿಣ ಮಲಕ್ಕ ಸರ್ಕಾರದ ಮೇಲೆ ಇಂಡೊನೇಷ್ಯಾ ಕ್ರಮ

ಜಕಾರ್ತಾ, ಅ. 5- ಅಂಬಾಯನ್ ದ್ವೀಪದಲ್ಲಿ ಸ್ಥಾಪಿತವಾಗಿರುವ ದಕ್ಷಿಣ ಮೊಲಕ್ಕಾಗಳ ದಂಗೆಕೋರ ಸರ್ಕಾರದ ವಿರುದ್ಧ ಕಾರ್ಯ ಚಟುವಟಿಕೆಯನ್ನು ಇಂಡೋನೇಷ್ಯಾ ಸರ್ಕಾರ ಕೈಗೊಂಡಿದೆ ಎಂಬ ಸುದ್ದಿಗೆ ಮನ್ನಣೆ ದೊರೆತಿದೆ.

ಹಾಲೆಂಡಿನ ಪ್ರಧಾನಿಗೆ ಕಳಿಸಿರುವ ತಂತಿಯೊಂದರಲ್ಲಿ ಇಂಡೊನೇಷ್ಯಾ ಪ್ರಧಾನಿ, ಇಚ್ಛೆ ಇಲ್ಲದಿದ್ದರೂ ಸರ್ಕಾರ ಈ ಕ್ರಮ ಕೈಗೊಳ್ಳಬೇಕಾಯಿತು ಎಂದಿದ್ದಾರೆ.

ಅರಿವೇ ಪ್ರಜಾಪ್ರಭುತ್ವದ ಜೀವಜಲ



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ವಿಶ್ವದೆಲ್ಲೆಡೆ ಪ್ರಜಾಪ್ರಭುತ್ವದ ತಳಹದಿ ಸಡಿಲವಾಗುತ್ತಿರುವ ವಿದ್ಯಮಾನ ಆತಂಕ ಹುಟ್ಟಿಸುವಂತಿದೆ. ಪ್ರಜಾಪ್ರಭುತ್ವ ದುರ್ಬಲಗೊಳ್ಳುವುದು ಎಂದರೆ, ನಿರಂಕುಶ ಪ್ರಭುತ್ವಕ್ಕೆ ದಾರಿ ಮಾಡಿಕೊಡುವುದು ಎಂದರ್ಥ. ಈ ಬದಲಾವಣೆಗೂ ಶಿಕ್ಷಣ ವ್ಯವಸ್ಥೆಯ ಜಡತೆಗೂ ಸಂಬಂಧ ಇಲ್ಲದಿಲ್ಲ. ಶಿಕ್ಷಣವೂ ಪ್ರಜಾಸತ್ತಾತ್ಮಕವಾಗದೆ ಹೋದರೆ, ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ.

'ಜಾಗತಿಕ ಪ್ರಜಾಪ್ರಭುತ್ವದ ಸ್ಥಿತಿ–2025'ರ ವರದಿಯ ಪ್ರಕಾರ, ಕಳೆದ ಒಂದೂವರೆ ದಶಕದಿಂದ ಜಾಗತಿಕ ಮಟ್ಟದಲ್ಲಿ ಪ್ರಜಾಪ್ರಭುತ್ವಕ್ಕೆ ತೀವ್ರ ಹಿನ್ನಡೆಯಾಗಿದೆ. ಅಂತರರಾಷ್ಟ್ರೀಯ ಪ್ರಜಾಸತ್ತೆ ಮತ್ತು ಚುನಾವಣಾ ಸಹಾಯ ಸಂಸ್ಥೆಯು (ಐಡಿಇಎ) ಕೆಲವು ಪ್ರಮುಖ ಮಾನದಂಡಗಳನ್ನು ಅನುಸರಿಸಿ ಪ್ರಜಾಪ್ರಭುತ್ವದ ಸ್ಥಿತಿಗತಿ ತಿಳಿಯಲು ಅಭಿವೃದ್ಧಿಪಡಿಸಿರುವ ಸೂಚ್ಯಂಕದ ಪ್ರಮುಖ ಅಂಶಗಳ ಮಾಪನದ ಅನ್ವಯ, ಜಗತ್ತಿನಾದ್ಯಂತ ಪ್ರಜಾಪ್ರಭುತ್ವದ ಗುಣಮಟ್ಟ ತೀವ್ರ ಕುಸಿತ ಕಂಡಿದೆ. ಈ ಸೂಚ್ಯಂಕವು ಪ್ರಜಾಸತ್ತೆಯ ಸ್ಥಿತಿಯನ್ನು ನಾಲ್ಕು ಮೂಲತತ್ತ್ವಗಳ ಆಧಾರದಲ್ಲಿ ಅಳೆಯುತ್ತದೆ. ಅವುಗಳೆಂದರೆ: ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ; ಮೂಲಭೂತ ಹಕ್ಕುಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನೆ, ಸಮಾನತೆ ಮತ್ತು ನ್ಯಾಯದ ಲಭ್ಯತೆ; ಸರ್ಕಾರಗಳ ನಿಯಂತ್ರಣ ಮತ್ತು ಹೊಣೆಗಾರಿಕೆಯ ಭಾಗವಾಗಿ ನ್ಯಾಯಾಂಗದ ಸ್ವಾತಂತ್ರ್ಯ, ಶಾಸಕಾಂಗದ ಕ್ರಿಯಾಶೀಲತೆ ಹಾಗೂ ಮಾಧ್ಯಮ ಸ್ವಾತಂತ್ರ್ಯ; ಸ್ಥಳೀಯ ಆಡಳಿತವನ್ನೂ ಸೇರಿದಂತೆ ವಿವಿಧ ಹಂತಗಳಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆ.

ಪ್ರಜಾಸತ್ತೆಯ ಕುಸಿತ ಎಷ್ಟು ಗಂಭೀರವಾಗಿದೆ ಎಂದರೆ, 2024ರಲ್ಲಿ ಮೌಲ್ಯಮಾಪನಕ್ಕೊಳಗಾದ ಒಟ್ಟು ದೇಶಗಳ ಪೈಕಿ ಶೇ 54ರಷ್ಟನ್ನು ಪ್ರತಿನಿಧಿಸುವ 94 ದೇಶಗಳಲ್ಲಿ, ಆ ದೇಶಗಳ ಹಿಂದಿನ ಐದು ವರ್ಷಗಳ ಕಾರ್ಯಕ್ಷಮತೆಗೆ ಹೋಲಿಸಿದರೆ, ಪ್ರಜಾಪ್ರಭುತ್ವದ ಕಾರ್ಯಕ್ಷಮತೆ ಗಣನೀಯವಾಗಿ ಕುಸಿದಿದೆ. 1975ರಿಂದ ಇಲ್ಲಿಯವರೆಗೆ ಇದು ಅತ್ಯಂತ ವ್ಯಾಪಕ ಹಾಗೂ ದೊಡ್ಡ ಕುಸಿತ. ಅದೇ ರೀತಿ, ಸ್ವತಂತ್ರ ನ್ಯಾಯಾಂಗಕ್ಕೆ ಧಕ್ಕೆ ಬಂದಿದ್ದು, ಮೂಲಭೂತ ಹಕ್ಕುಗಳಾದ ಸ್ವಾತಂತ್ರ್ಯ, ಅಭಿವ್ಯಕ್ತಿ ಹಾಗೂ ನ್ಯಾಯದ ಲಭ್ಯತೆ ದೊಡ್ಡ ಹಾನಿಗೆ ಒಳಗಾಗಿವೆ. ಜನರ ಪಾಲುಗೊಳ್ಳುವಿಕೆ ಕ್ಷೇತ್ರದಲ್ಲಿ ಒಂದು ಬಗೆಯ ಸ್ತಬ್ಧತೆ ಕಂಡುಬಂದಿದೆ.

ಭಾರತದ ಸ್ಥಿತಿಯೇನೂ ಭಿನ್ನವಾಗಿಲ್ಲ. ಮೇಲಿನ ಸೂಚ್ಯಂಕದ ನಾಲ್ಕು ಕ್ಷೇತ್ರಗಳಲ್ಲಿ ಭಾರತದಲ್ಲಿಯೂ ಕುಸಿತ ಕಾಣಿಸಿದೆ. 'ಭಾರತದ ಪ್ರಜಾಪ್ರಭುತ್ವ ಏಕೆ ಸಾಯುತ್ತಿದೆ?' ಶೀರ್ಷಿಕೆಯ ಒಂದು ಲೇಖನವು, ಜಾಗತಿಕವಾಗಿ ಪ್ರಜಾಸತ್ತೆಯ ಹಿಂಜರಿಕೆಗೆ ಭಾರತ ಉತ್ತಮ ಉದಾಹರಣೆ ಎಂದಿದೆ. ಇತ್ತೀಚೆಗೆ ಭಾರತವು ಪ್ರಜಾಸತ್ತೆಯ ಜೊತೆ ಜೊತೆಗೆ ನಿರಂಕುಶಾಧಿಕಾರಿ ಲಕ್ಷಣಗಳುಳ್ಳ ಹೈಬ್ರಿಡ್ ಆಡಳಿತವನ್ನು ಹೊಂದಿದ್ದು, ಒಂದೆಡೆ ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ದಮನ ಮಾಡುತ್ತಲೇ ಮತ್ತೊಂದೆಡೆ ನಿಯಮಿತ ಚುನಾವಣೆಗಳನ್ನು ನಡೆಸುತ್ತಿದೆ. ಭಾರತದ ಈ ಹೈಬ್ರಿಡ್ ಆಡಳಿತ, ಜಾಗತಿಕ ನಿರಂಕುಶೀಕರಣದ ಮೇಲೆ ಪ್ರಭಾವ ಬೀರಿದೆ. ಭಾರತದ ಪ್ರಜಾಸತ್ತೆಯ ಅವನತಿಯು ಜಗತ್ತಿನಾದ್ಯಂತ ಪ್ರಜಾಪ್ರಭುತ್ವಗಳು ಹೇಗೆ ಸಾಯುತ್ತಿವೆ ಎಂಬುದನ್ನು ಬಹಿರಂಗಪಡಿಸುತ್ತದೆ. ಆರೋಗ್ಯಕರ ಪ್ರಜಾಸತ್ತೆಯ ಬೆನ್ನೆಲುಬೆನಿಸುವ ರಚನಾತ್ಮಕ ಟೀಕೆ, ವಿಮರ್ಶೆ, ವಿರೋಧ ಇತ್ಯಾದಿಗಳನ್ನು ಹತ್ತಿಕ್ಕಿ, ಭಿನ್ನಾಭಿಪ್ರಾಯವನ್ನು ರಾಷ್ಟ್ರದ್ರೋಹಕ್ಕೆ ಸಮೀಕರಿಸಲಾಗುತ್ತಿದೆ. ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು, ವಿರೋಧ ಪಕ್ಷಗಳ ಭಿನ್ನಧ್ವನಿಯನ್ನು ಕಾನೂನಿನ ಕಿರುಕುಳ ಮತ್ತು ಮಾಧ್ಯಮದ ಮೂಲಕ ಅಡಗಿಸಲಾಗುತ್ತಿದೆ.

ಕಳೆದ ಮೂರ್ನಾಲ್ಕು ರಾಷ್ಟ್ರೀಯ ಚುನಾವಣೆ ಹಾಗೂ ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳನ್ನು ಗಮನಿಸಿದರೆ, ಸಾಂವಿಧಾನಿಕ ಮೌಲ್ಯಗಳ ಆಶಯಕ್ಕಿಂತ ಧರ್ಮ–ಜಾತಿ, ಜನಾಂಗೀಯ ಮತ್ತು ಭಾವನಾತ್ಮಕ ವಿಷಯಗಳು ಚುನಾವಣೆಗಳನ್ನು ಪ್ರಭಾವಿಸುತ್ತಿವೆ. ಅಭಿವೃದ್ಧಿಯ ಚರ್ಚೆ ಹಿಂದಕ್ಕೆ ಸರಿದಿದೆ. ಹಣ, ಆಮಿಷ, ಜಾತಿ ಮತ್ತು ಕುಟುಂಬ ರಾಜಕಾರಣ ಮೇಲುಗೈ ಸಾಧಿಸಿವೆ. ಮತಗಳ್ಳತನ ನಡೆಯುತ್ತಿರುವ ಬಗ್ಗೆ ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಇತ್ತೀಚೆಗೆ ಲೋಕಸಭೆಯಲ್ಲಿ ಮಂಡನೆಯಾದ ಸಂವಿಧಾನದ 130ನೇ ತಿದ್ದುಪಡಿ ಮಸೂದೆ–2025, ವಿಪಕ್ಷಗಳ ಟೀಕೆಗೆ ಗುರಿಯಾಗಿದೆ. ಸದ್ಯಕ್ಕೆ ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿರುವ ಈ ಮಸೂದೆ, ರಾಜಕೀಯ ಮುಖಂಡರನ್ನು ಗುರಿಯಾಗಿಸುವ ಮತ್ತು ವಿರೋಧ ಪಕ್ಷದ ಸದ್ದಡಗಿಸುವ ಮೂಲಕ ಪ್ರಜಾಸತ್ತೆಯನ್ನು ಹತ್ತಿಕ್ಕುವ ಮತ್ತು ಸಂವಿಧಾನವನ್ನು ದುರ್ಬಲಗೊಳಿಸುವ ಹುನ್ನಾರವೆಂದು ಹೇಳಲಾಗುತ್ತಿದೆ.

ಒಟ್ಟಾರೆ, ಭಾರತದಲ್ಲಿನ ಬೆಳವಣಿಗೆಗಳು ಆರೋಗ್ಯಕರ ಪ್ರಜಾಸತ್ತೆಯ ಮೂಲ ಲಕ್ಷಣಗಳಿಗೆ ಚ್ಯುತಿ ತರುವ ಮೂಲಕ, ನಿರಂಕುಶಪ್ರಭುತ್ವದತ್ತ ಸಾಗುತ್ತಿರುವ ಮುನ್ಸೂಚನೆಯಂತೆ ಕಾಣುತ್ತಿವೆ. ಒಮ್ಮೆ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎನಿಸಿಕೊಂಡಿದ್ದ ಭಾರತ ಇಂದು ಅದಕ್ಕೆ ಅಪವಾದವೆನಿಸಿದೆ.


ಪ್ರಜಾಪ್ರಭುತ್ವ ಇಷ್ಟೊಂದು ತೀವ್ರವಾಗಿ ದುರ್ಬಲ ಆಗಲು ಕಾರಣಗಳನ್ನು ಹುಡುಕಿದರೆ, ನಮಗೆ ಕಾಣುವ ಪ್ರಮುಖ ಸಂಗತಿ– ಅರಿವಿನ ಜಾಗೃತಿ ಮೂಡಿಸದ ಶಿಕ್ಷಣ ವ್ಯವಸ್ಥೆ. ನಮ್ಮ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆ ಮೂಲಭೂತವಾಗಿ ಅಧೀನತೆಯನ್ನು ಒಪ್ಪಿ, ವಿಧೇಯತೆಯನ್ನು ಮೈಗೂಡಿಸಿಕೊಂಡು ವ್ಯವಸ್ಥೆಯನ್ನು ಅನೂಚಾನವಾಗಿ ಮುನ್ನಡೆಸುವ ತರಬೇತಿಯಾಗಿದೆ. ಪ್ರಜಾಸತ್ತೆ ಎಂದರೆ 'ಅಂಧ ಅನುಸರಣೆ' ಅಲ್ಲ, ಅದು, ಪ್ರಶ್ನಿಸುವ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಬೇಕು. ಪ್ರಜಾಸತ್ತೆಯಲ್ಲಿ, ನಾಗರಿಕ ತಾನು ಮತ ಚಲಾಯಿಸುವ ಮೂಲಕ ಯಾವ ಬಗೆಯ ಬದಲಾವಣೆ ತರಬೇಕೆಂಬ ಸ್ಪಷ್ಟತೆಯನ್ನು ಹೊಂದಿರಬೇಕು. ಪ್ರಜಾಸತ್ತೆ ಬರೀ ರಾಜಕೀಯ ಆಡಳಿತ ವ್ಯವಸ್ಥೆ ಆಗಿರದೆ, ಜನರ ಪಾಲ್ಗೊಳ್ಳುವಿಕೆ, ವಿಚಾರ ಸ್ವಾತಂತ್ರ್ಯ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಾನ ಅವಕಾಶಗಳ ಸಮನ್ವಯವಾಗಿದೆ. ಐದು ವರ್ಷಕ್ಕೊಮ್ಮೆ ಮತ ಹಾಕುವುದು ಮಾತ್ರವಲ್ಲ; ನಾಗರಿಕರು ತಮ್ಮ ವಿವೇಕ, ಪರಸ್ಪರ ಗೌರವ ಮತ್ತು ಸಂವಾದ ಸಾಮರ್ಥ್ಯಗಳ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿ ಬಲವರ್ಧನೆಗೊಳಿಸಬೇಕಿದೆ.

ಪ್ರಸಿದ್ಧ ಶಿಕ್ಷಣ ತಜ್ಞ ಹಾಗು ತತ್ವಜ್ಞಾನಿ ಜಾನ್ ಡ್ಯೂಯಿ ಪ್ರಕಾರ, ಶಿಕ್ಷಣ ಮತ್ತು ಪ್ರಜಾಪ್ರಭುತ್ವದ ನಡುವೆ ಅವಿನಾಭಾವ ಸಂಬಂಧವಿದೆ. ಶಿಕ್ಷಣ ಬರೀ ಜ್ಞಾನವನ್ನು ನೀಡುವ ಪ್ರಕ್ರಿಯೆಯಲ್ಲ. ಬದಲಿಗೆ, ಅದು ಸಮಾಜದಲ್ಲಿ ಅರ್ಥಪೂರ್ಣ ಬದುಕನ್ನು ಕಟ್ಟಿಕೊಳ್ಳುವ ಹಾಗೂ ಪ್ರಜಾಸತ್ತೆಯನ್ನು ಜೀವಂತವಾಗಿಡುವ ಸಾಧನ. ಡ್ಯೂಯಿ ಅವರು ತಮ್ಮ 'ಪ್ರಜಾಸತ್ತೆ ಮತ್ತು ಶಿಕ್ಷಣ' ಕೃತಿಯಲ್ಲಿ, ಪ್ರಜಾಸತ್ತೆ ಮತ್ತು ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು, ಪ್ರಜಾಸತ್ತೆಯೆಂದರೆ ಜನರ ಸಹಭಾಗಿತ್ವದಿಂದ ಕೂಡಿದ ಸಂವಾದದ ಜೀವನಶೈಲಿ ಎಂದಿದ್ದಾರೆ. ಶಿಕ್ಷಣವು ಕೇವಲ ಜ್ಞಾನ ವರ್ಗಾವಣೆಯ ಯಾಂತ್ರಿಕ ಕ್ರಿಯೆಯಾಗದೆ, ವ್ಯಕ್ತಿಗೆ ಸಾಮಾಜಿಕ ಜವಾಬ್ದಾರಿ, ಸ್ವತಂತ್ರ ಚಿಂತನೆ, ಪ್ರಶ್ನಿಸುವ ಮನೋಭಾವ, ಸಂವಾದಿಸುವ ಸಾಮರ್ಥ್ಯ ಹಾಗೂ ಅಗತ್ಯವಿದ್ದಲ್ಲಿ ಬದಲಾಯಿಸುವ ಹೊಣೆಗಾರಿಕೆ ಬೆಳೆಸುವ ಪ್ರಬಲ ಸಾಧನವಾಗಬೇಕು.

ಡ್ಯೂಯಿಯವರ ಪ್ರಕಾರ, ಶಾಲೆ ಒಂದು ಸಣ್ಣ ಸಮಾಜ. ವಿದ್ಯಾರ್ಥಿಗಳು ಅಲ್ಲಿ ಪಠ್ಯಪುಸ್ತಕದ ಜ್ಞಾನ ಪಡೆಯುವುದು ಮಾತ್ರವಲ್ಲದೆ, ತಮ್ಮ ಸುತ್ತಲಿನ ಸಮಾಜವನ್ನು ಹೇಗೆ ನೋಡಬೇಕು, ಸಮಾಜದಲ್ಲಿ ಹೇಗೆ ಬದುಕಬೇಕು, ಇತರರೊಂದಿಗೆ ಹೇಗೆ ಸಹಕರಿಸಬೇಕು ಮತ್ತು ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕು ಎಂಬುದನ್ನೂ ಕಲಿಯಬೇಕು. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವುದರ ಜೊತೆಗೆ ಸಮುದಾಯಜೀವನಕ್ಕೆ ಸಜ್ಜುಗೊಳಿಸಬೇಕು. ಸರಳೀಕರಿಸಿ ಹೇಳುವುದಾದರೆ, ಶಿಕ್ಷಣ ಒಂದು ಸಾಮಾಜಿಕ ಪ್ರಕ್ರಿಯೆ. ಶಿಕ್ಷಣ ಜೀವನಕ್ಕೆ ಸಿದ್ಧತೆ ಮಾತ್ರವಲ್ಲ, ಜೀವನವೇ ಶಿಕ್ಷಣ.

ಬ್ರೆಜಿಲ್‌ನ ಖ್ಯಾತ ಶಿಕ್ಷಣ ತತ್ತ್ವಜ್ಞ ಪೌಲೋ ಫ್ರೈರೆ, ಶಿಕ್ಷಣವನ್ನು ಬರೀ ಜ್ಞಾನ ಹಂಚುವ ಪ್ರಕ್ರಿಯೆಯಾಗಿ ನೋಡದೆ, ಸಾಮಾಜಿಕ–ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಯ ರಾಜಕೀಯ ಸಾಧನವಾಗಿ ಪರಿಗಣಿಸಿದರು. ಅವರ ಅತ್ಯಂತ ಪ್ರಸಿದ್ಧ ಕೃತಿ 'ತುಳಿತಕ್ಕೊಳಗಾದವರ ಶಿಕ್ಷಣಶಾಸ್ತ್ರ' ಕೃತಿಯಲ್ಲಿ, ಶಿಕ್ಷಣ ಜನರ ಅರಿವು, ಹಕ್ಕು, ಮತ್ತು ವಿಮೋಚನೆಗಾಗಿ ನಡೆಯುವ ಕ್ರಿಯಾತ್ಮಕ ಸಂವಾದವಾಗಬೇಕು ಎಂದು ಪ್ರತಿಪಾದಿಸಿದರು. ಈ ತತ್ತ್ವವನ್ನು ಅವರು 'ಅರಿವಿನ ಜಾಗೃತಿ' ಎಂದು ಕರೆದರು. ನಮ್ಮ ಸಾಂಪ್ರದಾಯಿಕ ಸಾಮಾನ್ಯ ಶಿಕ್ಷಣಕ್ಕೂ ಮತ್ತು ಅರಿವಿನ ಜಾಗೃತಿಗೂ ಬಹಳ ದೊಡ್ಡ ವ್ಯತ್ಯಾಸವಿದೆ. ಅರಿವಿನ ಜಾಗೃತಿ ಎಂದರೆ, ತನ್ನ ಸುತ್ತಲಿನ ಘಟನೆಗಳನ್ನು ಜೀವನದ ಅನುಭವಗಳ ಮೂಲಕ ವಿಮರ್ಶಾತ್ಮಕವಾಗಿ ನೋಡುವುದು. ಸಮಾಜದಲ್ಲಿರುವ ಅನ್ಯಾಯ, ಅಸಮಾನತೆ ಮತ್ತು ಶೋಷಣೆಯ ಶ್ರೇಣೀಕೃತ ಸಂರಚನೆಗಳನ್ನು ಗುರುತಿಸಿ ಬದಲಾಯಿಸಲು ಸಾಮೂಹಿಕ ಹೋರಾಟಗಳಲ್ಲಿ ತೊಡಗುವುದು. ಅರಿವಿನ ಜಾಗೃತಿಯೆಂದರೆ, ಬರೀ ಓದು–ಬರಹ, ಲೆಕ್ಕಾಚಾರ ಕಲಿಯುವ ದಾರಿ ಮಾತ್ರವಲ್ಲ; ಸ್ವಾತಂತ್ರ್ಯ, ಸಮಾನತೆ ಮತ್ತು ಮಾನವೀಯತೆಗಾಗಿ ಹೋರಾಟ ನಡೆಸುವ ಒಂದು ಬೌದ್ಧಿಕ ಪ್ರಕ್ರಿಯೆ.

ಪ್ರಜಾಸತ್ತೆ ಮತ್ತು ಶಿಕ್ಷಣಕ್ಕಿರುವ ಸಂಬಂಧದ ನೆಲೆಯಲ್ಲಿ, ಇಂದಿನ ಪ್ರಜಾಸತ್ತೆಯನ್ನು ಗಮನಿಸಿದರೆ, ಶಿಕ್ಷಣ ಪಡೆದವರ ಮತ್ತು ಪಡೆಯುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದೇ ಸಂದರ್ಭದಲ್ಲಿ ನಮ್ಮ ಪ್ರಜಾಸತ್ತೆಯ ಗುಣಮಟ್ಟ ಜಾಗತಿಕ ಹಂತದಿಂದ ಸ್ಥಳೀಯ ಹಂತದವರೆಗೆ ದುರ್ಬಲಗೊಂಡು ಬಲಹೀನವಾಗುತ್ತಿದೆ. ಪ್ರಜಾಸತ್ತೆಯ ಮೂಲ ಸೂಚ್ಯಂಕಗಳು ಕುಸಿಯುತ್ತಿವೆ. ಜನರು ಪ್ರಜಾಸತ್ತೆಯ ಬಗ್ಗೆ ನಂಬಿಕೆ ಕಳೆದುಕೊಳ್ಳುವಂತಾಗಿದೆ. ಜನರಲ್ಲಿ ತಾರ್ಕಿಕ ಪ್ರಜ್ಞೆ, ವೈಚಾರಿಕ ಚಿಂತನೆ ಮತ್ತು ಅನ್ವೇಷಿಸುವ ಗುಣಗಳನ್ನು ಬೆಳೆಸುವುದು ಶಿಕ್ಷಣದ ಮುಖ್ಯ ಉದ್ದೇಶವಾಗಬೇಕು. ಪ್ರಜಾಸತ್ತೆಯ ಜೀವಾಳವೇ ಶಿಕ್ಷಣ ಎಂದಾದರೆ, ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು. ಆ ಮೂಲಕ, ತನ್ನ ನಾಗರಿಕರಿಗೆ ಆಲೋಚಿಸುವ, ವಿಮರ್ಶಾತ್ಮಕವಾಗಿ ಚಿಂತಿಸುವ ಮತ್ತು ಜನಪರವಾಗಿ ನಿರ್ಣಯಿಸುವ ಶಕ್ತಿಯನ್ನು ಬೆಳೆಸುವ ಪ್ರಜಾಸತ್ತಾತ್ಮಕ ಶಿಕ್ಷಣಕ್ಕೆ ಮುಂದಾಗಬೇಕಿದೆ.



ವಾಚಕರ ವಾಣಿ

ದೇವರು 'ದೇಹದೇಗುಲ'ದ ನಾಶಕ್ಕಾಗಿ ಇಲ್ಲ!

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ದೇವರಗಟ್ಟ ಗ್ರಾಮದಲ್ಲಿ, ದೇವರ ಉತ್ಸವದ ಅಂಗವಾಗಿ ನಡೆದ ದೊಣ್ಣೆಗಳಿಂದ ಹೊಡೆದಾಡುವ ಆಚರಣೆಯ ವೇಳೆ ಇಬ್ಬರು ಮೃತಪಟ್ಟಿದ್ದಾರೆ. ಮಾಧ್ಯಮಗಳಲ್ಲಿ ವರದಿಯಾದಾಗಲೇ ಜೀವಹಾನಿಗೆ ಕಾರಣ ಆಗಬಹುದಾದ ಆಚರಣೆಗಳು ಇರುವುದು ತಿಳಿಯುತ್ತದೆ. ಯಾವುದೇ ಜೀವವಿರೋಧಿ ಪದ್ಧತಿ ನಿಷೇಧಗೊಳ್ಳುವುದು ಅಗತ್ಯ. ಧರ್ಮ–ದೇವರು ಇರುವುದು ಮಾನವ ಕಲ್ಯಾಣಕ್ಕೇ ಹೊರತು 'ದೇಹ ದೇಗುಲ'ದ ನಾಶಕ್ಕಾಗಿ ಅಲ್ಲ!

ಶಿವಕುಮಾರ ಬಂಡೋಳಿ, ಹುಣಸಗಿ

ಬಡತನಕ್ಕೆ ಮಿಡಿದ ಕಥೆಗಾರ ಮೊಗಳ್ಳಿ

ಬಡಜನರ ನೋವು ನಲಿವುಗಳಿಗೆ ಅಕ್ಷರದ ಮೂಲಕ ಧ್ವನಿಯಾಗಿದ್ದ ಕಥೆಗಾರ ಮೊಗಳ್ಳಿ ಗಣೇಶ್ ಸಾವಿಗೀಡಾದುದನ್ನು ಕೇಳಿ ಎದೆ ಬಿರಿದಂತಾಯಿತು. ಬಡತನದ ನೋವುಂಡ ಕಾರಣಕ್ಕೋ ಏನೋ, ತಮ್ಮ ಅಕ್ಷರಗಳನ್ನು ಅದಕ್ಕಾಗಿಯೇ ಮೀಸಲಿಟ್ಟು ಬರೆದೇ ಬರೆದರು. ಮೊಗಳ್ಳಿ ದೂರವಾಗಿರಬಹುದು; ಅವರ ಜೀವನ್ಮುಖಿ ಬರವಣಿಗೆ ಕನ್ನಡ ಸಾಹಿತ್ಯದಲ್ಲಿ ಎಂದೆಂದೂ ನಿಲ್ಲುತ್ತದೆ.

ಹೊರೆಯಾಲ ದೊರೆಸ್ವಾಮಿ, ಮೈಸೂರು

ದೇವರೆಂದರೆ ಶ್ರೀಕೃಷ್ಣನಷ್ಟೇ ಅಲ್ಲ...

ಪ್ರಧಾನಿ ನರೇಂದ್ರ ಮೋದಿ ಅವರ 'ನಾಗರಿಕ ದೇವೋಭವ' ಪರಿಕಲ್ಪನೆಯನ್ನು ವಿಶ್ಲೇಷಿಸಿರುವ ಸಂದೀಪ್ ಶಾಸ್ತ್ರಿ ಅವರು ದೇವರನ್ನು ಭಗವದ್ಗೀತೆಯ ಶ್ರೀಕೃಷ್ಣನಿಗೆ ಸೀಮಿತಗೊಳಿಸಿದ್ದಾರೆ (ಪ್ರ.ವಾ., ಅ. 4). ಭಾರತದಂತಹ ಧಾರ್ಮಿಕ ಬಹುತ್ವದ ರಾಷ್ಟ್ರದಲ್ಲಿ ಹೀಗೆ ದೇವರನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಲ್ಲ. ಅನೇಕ ಧರ್ಮಗಳ, ಅನೇಕ ದೇವರುಗಳ, ಅನೇಕ ಧಾರ್ಮಿಕ ಗ್ರಂಥಗಳ ರಾಷ್ಟ್ರ ಭಾರತ. ಇಲ್ಲಿ 'ಗ್ರಂಥ ಸಾಹೇಬ್' ಇದೆ, ವಚನ ಸಂಪುಟಗಳಿವೆ, ತ್ರಿಪಿಟಕಗಳಿವೆ, ಬೈಬಲ್ ಇದೆ. ಹಾಗಾಗಿ, ದೇವರನ್ನು ಒಬ್ಬರಿಗೆ, ಒಂದು ಧರ್ಮಗ್ರಂಥಕ್ಕೆ ಕುಗ್ಗಿಸುವುದು ಸರಿಯಲ್ಲ.

ಟಿ.ಆರ್. ಚಂದ್ರಶೇಖರ, ಬೆಂಗಳೂರು

ಸಮೀಕ್ಷೆಗೆ ತಕರಾರು ಶೋಭೆ ತಾರದು

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ಪ್ರಶ್ನಾವಳಿಯನ್ನು ಅತಿಯಾಯಿತು ಎಂದಿದ್ದಾರೆ. ಹಾಗಾದರೆ, ಆಯೋಗ ಸಮೀಕ್ಷೆ ಕೈಗೊಳ್ಳುವ ಮೊದಲು ಈ ಪ್ರಶ್ನಾವಳಿಯನ್ನು ಉಪ ಮುಖ್ಯಮಂತ್ರಿಗಳು ಗಮನಿಸಿಲ್ಲವೆ? ಸರ್ಕಾರದಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಇರುವವರು ಗಣತಿದಾರರಿಗೆ ನಿಖರವಾದ ಮಾಹಿತಿ ಒದಗಿಸಿ ರಾಜ್ಯಕ್ಕೆ ಮಾದರಿಯಾಗಬೇಕು. ಅವರೇ ಜವಾಬ್ದಾರಿಯಿಂದ ನುಣುಚಿಕೊಂಡರೆ ಹೇಗೆ?

ವಿ.ಜಿ. ಇನಾಮದಾರ, ಸಾರವಾಡ

ಕೋಮು ಅಸಹನೆ ಉಲ್ಬಣ: ಮದ್ದೆಲ್ಲಿ?

'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ನಡೆಸಲು ಮುಸ್ಲಿಂ ಸಮುದಾಯದ ಶಿಕ್ಷಕಿ ಬಂದುದಕ್ಕೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವ ಸುದ್ದಿ (ಪ್ರ.ವಾ., ಅ. 4) ನಮ್ಮೊಳಗಿನ ಧಾರ್ಮಿಕ ಅಸಹನೆಯ ರೋಗ ಉಲ್ಬಣಗೊಂಡಿರುವುದನ್ನು ಎತ್ತಿ ತೋರಿಸುವಂತಿದೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರೇ ಸಮೀಕ್ಷೆಗೆ ಕೋಮು ಬಣ್ಣ ನೀಡುತ್ತಿರುವುದು ದುರದೃಷ್ಟಕರ. ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಜನಸಾಮಾನ್ಯರ ಮೇಲೆ ನಡೆಯುತ್ತಿರುವ ದಾಳಿ ಕಳವಳ ಹುಟ್ಟಿಸು ವಂತಹದ್ದು. ಶಿಕ್ಷಕಿಯನ್ನೇ ಅವಮಾನಿಸುವ ಸ್ಥಿತಿ ಇದೆಯೆಂದರೆ, ಮುಂದಿನ ದಿನಗಳಲ್ಲಿ ಏನೆಲ್ಲಾ ಆಗಬಹುದು? ಜನಸಾಮಾನ್ಯರು ಯೋಚಿಸಬೇಕು.

ತಿರುಪತಿ ನಾಯಕ್, ಕಲಬುರಗಿ

ಸಮೀಕ್ಷೆ: ಯಾರೂ ಹೊರ ಉಳಿಯದಿರಲಿ

ಸರ್ಕಾರ ನಡೆಸುತ್ತಿರುವ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸಲು ಊರಿಗೆ ಹೋಗಿದ್ದೆ. ಆಧಾರ್ ಲಿಂಕ್ ಆದ ಮೊಬೈಲ್ ಇಲ್ಲವೆಂಬ ಕಾರಣದಿಂದ ಒಬ್ಬ ವ್ಯಕ್ತಿಯನ್ನು ಸಮೀಕ್ಷೆಯಿಂದ ಹೊರಗುಳಿಸಿದ್ದರು. ಇದೇ ರೀತಿ, ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಯಿಂದ ಹೊರಗೆ ಉಳಿದಿರುವ ಕುಟುಂಬಗಳು ಸಾಕಷ್ಟು ಇರಬಹುದು. ಇಂತಹ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ದೊರಕಿಸಿಕೊಡಬೇಕು.

ಸೋಮಶೇಖರ್ ಕೆ.ಎನ್., ಕದಿರೇಹಳ್ಳಿ

ವೈದ್ಯಕೀಯ ವ್ಯವಸ್ಥೆಗೆ ಕಾಯಕಲ್ಪ ಬೇಕು

ಮಕ್ಕಳ ಸಾವಿಗೆ ಕೆಮ್ಮಿನ ಸಿರಪ್ ನಂಟಿರುವ ಸುದ್ದಿ ಓದಿ ದಿಗ್ಭ್ರಮೆಯಾಯಿತು (ಪ್ರ.ವಾ., ಅ. 5). ಸಮಾನತೆಯಿಲ್ಲದ ವೈದ್ಯಕೀಯ ವ್ಯವಸ್ಥೆ ದುರದೃಷ್ಟಕರ. ಆರೋಗ್ಯದ ವಿಷಯದಲ್ಲಿ ಮಕ್ಕಳು, ದೊಡ್ಡವರು ವ್ಯತ್ಯಾಸವಿಲ್ಲದೆ ಶೋಷಣೆಗೆ ಒಳಗಾಗಿದ್ದೇವೆ. ಹಾಸಿಗೆಯ ಮೇಲೆ ಮಲಗಿರುವ ರೋಗಿಗಳು ತಮಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲದೆ ವೈದ್ಯರ ಪ್ರಯೋಗಕ್ಕೆ ಬಲಿಯಾಗುತ್ತಿದ್ದಾರೆ. ಒಬ್ಬನೇ ರೋಗಿ, ಬೇರೆ ಬೇರೆ ಆಸ್ಪತ್ರೆಗಳ ವೈದ್ಯರ ಬಳಿ ಪರೀಕ್ಷೆಗೆ ಒಳಗಾದಾಗಲೂ, ಬೇರೆ ಬೇರೆ ಕಂಪನಿಯ ಔಷಧ ಚೀಟಿ ಬರೆಯುತ್ತಾರೆ. ಬೇರೆ ಬೇರೆ ಪರೀಕ್ಷೆಗೆ ಒಳಪಡಿಸಿ, ಪ್ರತ್ಯೇಕ ಶುಲ್ಕ ಪಡೆಯುತ್ತಾರೆ. ಸ್ಪಷ್ಟತೆ–ಪಾರದರ್ಶಕತೆ ಇಲ್ಲದೆ, ರೋಗಿಗಳನ್ನು ಬಲಿ ತೆಗೆದುಕೊಳ್ಳುತ್ತಿರುವ ಆರೋಗ್ಯ ವ್ಯವಸ್ಥೆಗೆ ಕಾಯಕಲ್ಪ ಆಗಬೇಕು.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಮಕ್ಕಳ ಸಾವು: ಸರ್ಕಾರಗಳ ವೈಫಲ್ಯ

ಮಧ್ಯಪ್ರದೇಶದಲ್ಲಿ ಕಳಪೆ ಗುಣಮಟ್ಟದ ಕೆಮ್ಮಿನ ಸಿರಪ್ ಸೇವನೆಯಿಂದ ಹತ್ತಾರು ಮಕ್ಕಳು ಪ್ರಾಣ ಕಳೆದುಕೊಂಡ ಘಟನೆ ನಡೆದಿದೆ. ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ಗುಣಮಟ್ಟದ ಔಷಧಿಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ. ಇಂತಹ ಘಟನೆಗಳು ಪುನರಾವರ್ತನೆ ಆಗಬಾರದು. ಮಕ್ಕಳ ಸಹಿತ ಯಾರದೇ ಪ್ರಾಣಹಾನಿ ಆಗಬಾರದು.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಚುರುಮುರಿ



ಕಪ್ ಟ್ರಂಪಣ್ಣಂದೇ!

• ಸುಮಂಗಲಾ

'ಈ ಸಲ ನೊಬೆಲ್ ಶಾಂತಿ ಪ್ರಶಸ್ತಿ ಟ್ರಂಪಣ್ಣಂಗೇ ಸಿಗತೈತಿ!' ಬೆಕ್ಕಣ್ಣ ಭಲೇ ಸಂಭ್ರಮದಿಂದ ವದರಿತು.

'ಅಂವಾ ಹುಟ್ಟಾ ಜಗಳಗಂಟ ಕಣಲೇ! ಅವಂಗೆ ಹೆಂಗೆ ಶಾಂತಿ ಪ್ರಶಸ್ತಿ ಕೊಡತಾರೆ?' ನಾನು ಕೇಳಿದೆ.

'ಅಂವಾ ಒಟ್ ಏಳು ಯುದ್ಧ ನಿಲ್ಲಿಸ್ಯಾನೆ. ಸಪ್ತಕದನ ನಿಲ್ಲಿಸೂದು ಅಂದರೆ ಅಷ್ಟ್ ಸುಲಭ ಅಲ್ಲ. ನೋಡ್ತಿರು... ಈ ಸಲ ನೊಬೆಲ್ ಶಾಂತಿ ಕಪ್ ಅಂವಂದೇ!' ಬೆಕ್ಕಣ್ಣ ಇನ್ನಷ್ಟು ಹುರುಪಿನಿಂದ ಘೋಷಿಸಿತು.

'ಆ ಏಳು ಯುದ್ಧಗಳು ಯಾವ್ಯಾವು ಹೇಳು ನೋಡಾಮು' ನಾನು ಬೆಕ್ಕಣ್ಣನಿಗೆ ಸವಾಲು ಎಸೆಯುವಂತೆ ಹೇಳಿದೆ.

'ಇಸ್ರೇಲ್–ಇರಾನ್ ಯುದ್ಧ, ಈಜಿಪ್ಟ್–ಇಥಿಯೋಪಿಯಾ ಯುದ್ಧ, ಥಾಯ್ಲೆಂಡ್–ಕಾಂಬೋಡಿಯಾ ಯುದ್ಧ, ಭಾರತ–ಪಾಕಿಸ್ತಾನ ಯುದ್ಧ' ಬೆಕ್ಕಣ್ಣ ಬೆರಳು ಮಡಚಿ ಎಣಿಸತೊಡಗಿತು.

'ಹಂಗಾರೆ ಭಾರತ–ಪಾಕಿಸ್ತಾನ ಯುದ್ಧವನ್ನು ನಿಲ್ಲಿಸಿದ್ದು ಟ್ರಂಪಣ್ಣನೇ ಅಂತ ಮೋದಿಮಾಮಾರು ಎದಕ್ಕೆ ಘೋಷಣೆ ಮಾಡಂಗಿಲ್ಲ?' ನಾನು ಪ್ರಶ್ನಿಸಿದೆ.

'ಅವೆಲ್ಲ ರಾಜತಾಂತ್ರಿಕ ವಿಚಾರಗಳು, ನಿನ್ನಂಥ ಶ್ರೀಸಾಮಾನ್ಯರಿಗೆ ಅರ್ಥ ಆಗಂಗಿಲ್ಲ! ಈಗ ಇಸ್ರೇಲ್–ಪ್ಯಾಲೆಸ್ತೀನ್ ಯುದ್ಧ ನಿಲ್ಲಿಸಾಕೆ ಟ್ರಂಪಣ್ಣ 20 ಅಂಶದ ಪ್ರಸ್ತಾಪ ಮಾಡ್ಯಾನೆ. ಜಗತ್ತಿನ ಶಾಂತಿಗೆ ಎಷ್ಟ್ ಕೊಡುಗೆ ಕೊಟ್ಟಾನೆ!' ಎಂದು ಬೆಕ್ಕಣ್ಣ ಪಾಠ ಮಾಡಿತು.

'ಎರಡು ದೇಶಗಳ ನಡುವೆ ಕಿತಾಪತಿ ಹುಟ್ಟುಹಾಕಿ, ಯುದ್ಧೋನ್ಮಾದ ಹೆಚ್ಚಿಸಿ, ಆಮೇಲೆ ತಾನೇ ಜಗಳ ನಿಲ್ಲಿಸಿದೆ ಅನ್ನದು ಯಾವ ಸೀಮೆಯ ಶಾಂತಿಸ್ಥಾಪನೆ?'

'ಅದೇ ನಿಜವಾದ ಶಾಂತಿಸ್ಥಾಪನೆ! ಹಂಗಾಗಿ ಈ ಸಲ ನೊಬೆಲ್ ಶಾಂತಿ ಕಪ್ ಅಂವಗೇ ಕೊಡಬಕು'.

'ಅಂವಾ ನಮ್ಮಂತ ದೇಶಗಳ ಮೇಲೆ ಸುಂಕಸಮರ ಸಾರಿದಾನಲ್ಲ, ಮೊದಲು ಅದನ್ನು ನಿಲ್ಲಿಸಲು ಹೇಳು' ಎಂದೆ.

'ಸುಂಕಸಮರ ಅನ್ನೂದು ಕ್ಷಿಪಣಿ ಯುದ್ಧವಲ್ಲ. ಅದನ್ನು ನಿಲ್ಲಿಸೂದು ಶಾಂತಿ ಸ್ಥಾಪನೆ ಅಡಿಯಲ್ಲಿ ಬರಂಗಿಲ್ಲ. ಇಷ್ಟಾಗಿ ಅಂವಾ ಸುಂಕಸಮರ ಮಾಡೂದು ಅಮೆರಿಕದ ಜನರ ಶಾಂತಿಯುತ ಬದುಕಿಗಾಗಿ' ಎಂದು ಬೆಕ್ಕಣ್ಣ ಭಲೇ ಲಾಯರಿನಂತೆ ವಾದಿಸಿತು.

ಸಂಗತ

ಸಂಚಾರ ನಿಯಮ: ಜಾಗೃತಿ ಯಾಕಾಗುತ್ತಿಲ್ಲ?


ರಸ್ತೆ ಅಪಘಾತಗಳಿಂದ ಸಾವು–ನೋವು ಉಂಟಾಗುವುದು ಸಹಜ ಎನ್ನುವಂತಾಗಿದೆ. ಆದರೆ, ದುರಂತಗಳಿಂದ ಯುವಜನ ಸಂಚಾರ ನಿಯಮಗಳ ಪಾಠ ಕಲಿಯುತ್ತಿಲ್ಲ.

• ಸಿದ್ದಯ್ಯ ಹಿರೇಮಠ

ದ್ವಿಚಕ್ರ ವಾಹನಗಳು ಬಹುತೇಕ ಪ್ರತಿಯೊಬ್ಬರ ಮನೆಗಳನ್ನೂ ಅಲಂಕರಿಸಿರುವ ಕಾಲಘಟ್ಟವಿದು. ಎರಡು ಮೂರು ದಶಕಗಳ ಹಿಂದಿನ ದಿನಗಳಿಗೆ ಹೋಲಿಸಿದರೆ ಕಾರು ಮತ್ತು ಜೀಪು ಈಗ ಲಕ್ಸುರಿ ಆಗಿ ಉಳಿದಿಲ್ಲ. ಬದಲಿಗೆ ಸ್ವಂತ ವಾಹನ ಅವಶ್ಯಕತೆಯಾಗಿ ಬದಲಾಗಿದೆ. ಆದರೆ, ನಿತ್ಯವೂ ಅಡ್ಡಾದಿಡ್ಡಿ ವಾಹನ ಚಾಲನೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ಸಣ್ಣಪುಟ್ಟ ಅಥವಾ ದೊಡ್ಡಮಟ್ಟದ ಜಗಳಗಳು ನಡೆಯುವುದೂ ಹೆಚ್ಚಾಗಿದೆ.

ಬೆಂಗಳೂರು ಮಾತ್ರವಲ್ಲ, ರಾಜ್ಯದ ಯಾವುದೇ ನಗರ, ಪಟ್ಟಣಗಳಲ್ಲಿ ಪಾರ್ಕಿಂಗ್ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ಮಾರುಕಟ್ಟೆಯಂಥ ಜನನಿಬಿಡ ಪ್ರದೇಶಗಳಲ್ಲಿ ಕಂಡುಬರುತ್ತಿದ್ದ ಪಾರ್ಕಿಂಗ್ ಸಮಸ್ಯೆ ಪ್ರಸ್ತುತ ಗಲ್ಲಿಗಳಲ್ಲಿನ ಮನೆಗಳೆದುರೂ ಉದ್ಭವಿಸಿದೆ. ರಸ್ತೆ ಅಪಘಾತಗಳೂ ಜನಜೀವನದ ಭಾಗ ಎಂಬಂತಾಗಿವೆ.

ಹೆದ್ದಾರಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದ ಪ್ರಾಣಹಾನಿ ಉಂಟುಮಾಡುವ ಭೀಕರ ಅಪಘಾತಗಳು ಈಗ ಪ್ರತಿ ರಸ್ತೆಗೂ ವ್ಯಾಪಿಸಿವೆ. ಬೈಕ್ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಅವರಲ್ಲಿ ಯುವಕರ ಪ್ರಮಾಣವೇ ಅಧಿಕ. ತ್ರಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳ ಪರಸ್ಪರ ಡಿಕ್ಕಿ ಪ್ರಕರಣಗಳು ದಾಖಲಾಗುತ್ತಲೇ ಇವೆ. ಸಂಚಾರ ನಿಯಮಗಳನ್ನು ಪಾಲಿಸದಿರುವುದೂ, ವಿಪರೀತ ವೇಗ ಮತ್ತೂ ಅತಿಯಾದ ಧಾವಂತ ದುರಂತಕ್ಕೆ ಕಾರಣವಾಗುತ್ತಿದೆ.



ಅಪಘಾತವಾದಾಗಿನ ಪ್ರಾಣಹಾನಿಯ ಪ್ರಕರಣಗಳಲ್ಲಿ ಆಪ್ತರನ್ನು ಕಳೆದುಕೊಂಡವರು ಮಾತ್ರ ನೋವನುಭವಿಸುತ್ತಿಲ್ಲ. ಅಪಘಾತಗಳಲ್ಲಿ ಶಾಶ್ವತ ಅಂಗವೈಕಲ್ಯಕ್ಕೆ ಈಡಾಗುವವರ ಕುಟುಂಬ ಸದಸ್ಯರೂ ಹೆಚ್ಚು ನೋವು ಎದುರಿಸುತ್ತಿದ್ದಾರೆ. ಬಹುತೇಕ ಯುವಜನರೇ ಅಂಗ ಊನಕ್ಕೆ ಒಳಗಾಗಿ, ಜೀವನವಿಡೀ ಪರಿತಪಿಸುವಂತಾಗಿದೆ.

ಯುವಜನರು ಸಂಚಾರ ನಿಯಮಗಳನ್ನು ಪಾಲಿಸದಿರುವುದೇ ಅವಘಡಗಳಿಗೆ ಕಾರಣವಾಗಿದೆ. ರಸ್ತೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಗುವ ವಾಹನಗಳ ಸವಾರರು ನಿಯಮ ಪಾಲಿಸುತ್ತಿದ್ದಾರೋ ಇಲ್ಲವೋ ಎಂಬುದನ್ನು ಅವಲೋಕಿಸುವಷ್ಟು ಸಂಖ್ಯೆಯ ಪೊಲೀಸರೂ ಇಲ್ಲ. ಅನೇಕ ನಗರಗಳಲ್ಲಿ ಸಿ.ಸಿ. ಕ್ಯಾಮೆರಾಗಳ ಕಣ್ಗಾವಲನ್ನು ಇರಿಸಿ ಸಂಚಾರ ನಿಯಮ ಉಲ್ಲಂಘನೆಯಂಥ ಪ್ರಕರಣಗಳನ್ನು ಪತ್ತೆ ಮಾಡಿ, ದಂಡ ವಿಧಿಸಿ, ಅವರವರ ವಿಳಾಸಕ್ಕೇ ನೋಟಿಸ್ ಕಳಿಸಲಾಗುತ್ತಿದೆ. ಆದರೆ, ದಂಡ ಪಾವತಿಸುವವರ ಸಂಖ್ಯೆ ಶೇ 10ರಷ್ಟೂ ಇಲ್ಲ. ಶೇ 50ರಷ್ಟು ರಿಯಾಯಿತಿ ನೀಡಿ ದಂಡ ಪಾವತಿಸುವಂತೆ ಕೋರಿದರೂ ದಾವಣಗೆರೆ ಜಿಲ್ಲೆಯೊಂದರಲ್ಲೇ ಅರ್ಧದಷ್ಟು ಜನ ಮಾತ್ರ ದಂಡದ ಹಣ ಕಟ್ಟಿದ್ದು, ಮಿಕ್ಕವರು ತಲೆ ಕೆಡಿಸಿಕೊಂಡಿಲ್ಲ. 'ದಂಡ ಕಟ್ಟದಿದ್ದರೂ ಶಿಕ್ಷೆ ಇಲ್ಲ' ಎಂಬ ಕಾರಣಕ್ಕೆ ನಿಯಮ ಉಲ್ಲಂಘಿಸುವವರಲ್ಲಿ ಅಸಡ್ಡೆ ಮನೆಮಾಡಿದೆ.

ಹದಿನೆಂಟು ವರ್ಷ ಮೀರದ ಅನೇಕರು ದ್ವಿಚಕ್ರ ವಾಹನ ಸವಾರಿ ಮಾಡುವುದು ಈಗೀಗ ಮಾಮೂಲಿ ಎಂಬಂತಾಗಿದೆ. ಚಾಲನಾ ಪರವಾನಗಿ ಪಡೆಯಲು ನಿಗದಿಪಡಿಸಿದ ವಯಸ್ಸನ್ನು ಮೀರದ ಮಕ್ಕಳಿಗೆ ವಾಹನವನ್ನು ಚಲಾಯಿಸಲು ನೀಡಿದ ಪಾಲಕರಿಗೆ ನ್ಯಾಯಾಲಯಗಳೇ ₹ 25 ಸಾವಿರದವರೆಗೆ ದಂಡ ವಿಧಿಸಿದ ಪ್ರಕರಣಗಳು ಅಲ್ಲೊಂದು ಇಲ್ಲೊಂದು ಕಂಡುಬಂದರೂ ಬಹುತೇಕ ಪಾಲಕರು ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಅಂತೆಯೇ ಹದಿಹರೆಯದವರು ಅಪಘಾತಗಳಲ್ಲಿ ಗಾಯಗೊಳ್ಳುವುದೂ, ಪ್ರಾಣ ಕಳೆದುಕೊಳ್ಳುವುದೂ, ಇತರರ ಪ್ರಾಣಕ್ಕೋ ಅವಯವಕ್ಕೋ ಕುತ್ತು ತರುವುದು ಮುಂದುವರಿದೇ ಇದೆ.

ಮಗನನ್ನು ಬೈಕ್‌ನಲ್ಲಿ ಕರೆದೊಯ್ಯುವಾಗ ಸಂಚಾರ ನಿಯಮ ಪಾಲಿಸದಿರುವ ಬಗ್ಗೆ ಪಶ್ಚಾತ್ತಾಪ ಪಟ್ಟು, ದಂಡ ಕಟ್ಟುವ ಪಾಲಕನಾಗಿ 'ಥ್ರೀ ಈಡಿಯೆಟ್ಸ್' ಚಿತ್ರದ ನಾಯಕರಲ್ಲೊಬ್ಬರಾದ ಶರ್ಮನ್ ಜೋಶಿ ಈಚೆಗೆ ನಟಿಸಿರುವ ಜಾಹೀರಾತು ಸಾಕಷ್ಟು ಗಮನ ಸೆಳೆದಿದೆ. ಅದನ್ನು ನೋಡಿ ಮೆಚ್ಚಿದ ಪಾಲಕರು ಅವರಂತೆ ನಿಯಮ ಪಾಲಿಸುವ ಗೋಜಿಗೆ ಹೋಗಿರುವುದು ವಿರಳ. ಇಂಥ ಅನುಕರಣೀಯ ನಡೆಯ ಜಾಹೀರಾತುಗಳನ್ನು ಅನುಸರಿಸಬೇಕಿರುವುದು ಇಂದಿನ ಅಗತ್ಯಗಳಲ್ಲೊಂದಾಗಿದೆ.

ಈಗ ಪ್ರತಿ ಮಗು ಎಳವೆಯಲ್ಲೇ ವಾಹನದೊಂದಿಗೆ ಒಡನಾಟ ಇಟ್ಟುಕೊಳ್ಳುತ್ತಿದೆ. ಮನೆಯಿಂದ ಶಾಲೆಗೆ ಹೋಗಲು, ಮರಳಲು ವಾಹನಗಳನ್ನೇ ಅವಲಂಬಿಸಿದೆ. ನಿತ್ಯದ ಉದ್ಯೋಗಕ್ಕೆ ವಾಹನವನ್ನು ಅವಲಂಬಿಸಿರುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಾಹನಗಳು ಈಗ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಆದರೂ, ವಾಹನ ಚಲಾಯಿಸಲು ಅಗತ್ಯವಾಗಿರುವ ಸಂಚಾರ ನಿಯಮಗಳ ಅರಿವು, ನಿಯಮ ಉಲ್ಲಂಘನೆಯ ಸಾಧಕ–ಬಾಧಕಗಳ ಪರಿಚಯ ಅನೇಕರಿಗಿಲ್ಲ.

ಜಪಾನ್, ಚೀನಾ ಹಾಗೂ ಯೂರೋಪ್‌ನ ಕೆಲವು ರಾಷ್ಟ್ರಗಳಲ್ಲಿ ಚಿಕ್ಕಮಕ್ಕಳಿಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಟ್ಟದಲ್ಲೇ ಸಂಚಾರ ನಿಯಮಗಳ ಕುರಿತು ಪಠ್ಯದ ಮೂಲಕವೇ ಅರಿವು ಮೂಡಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಕೆಲವು ದೇಶಗಳಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಭಾರೀ ಮೊತ್ತದ ದಂಡ ವಿಧಿಸುವುದಲ್ಲದೆ ವಾಹನ ಚಾಲನಾ ಪರವಾನಗಿಯನ್ನೇ ನಿಯಮಿತ ಅವಧಿಗೆ ಅಥವಾ ಶಾಶ್ವತವಾಗಿ ರದ್ದುಪಡಿಸಲಾಗುತ್ತದೆ. ಭಾರತದಲ್ಲೂ ಸಂಚಾರ ನಿಯಮ ಕುರಿತು ತಾತ್ಸಾರ ತೋರುವವರ ವಿರುದ್ಧ ಕಠಿಣ ಕಾನೂನುಗಳಿವೆಯಾದರೂ ಅವುಗಳ ಜಾರಿ ಸಮರ್ಪಕವಾಗಿ ಆಗುತ್ತಿಲ್ಲ. ಚಾಲನಾ ಪರವಾನಗಿ ನೀಡುವಾಗ ಅನುಸರಿಸುವ ಪರೀಕ್ಷೆಗಳನ್ನೂ, ಮಾನದಂಡಗಳನ್ನೂ ಬಿಗಿಗೊಳಿಸುವ ಮೂಲಕವೂ ಸಂಚಾರ ನಿಯಮದ ಮಹತ್ವವನ್ನು ತಿಳಿಸುವತ್ತ ಸರ್ಕಾರ ಚಿಂತನೆ ನಡೆಸಲು ಇದು ಸಕಾಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕೆಮ್ಮಿನ ಸಿರಪ್ ಗುಣಮಟ್ಟದ ಸುತ್ತ



ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ 14 ಮಕ್ಕಳು ಸಾವಿಗೀಡಾಗಿದ್ದು, ಅದಕ್ಕೆ ಕೋಲ್ಡ್ರಿಫ್ (ಕೆಮ್ಮಿನ ಔಷಧ) ಸೇವಿಸಿದ್ದೇ ಕಾರಣ ಎನ್ನಲಾಗುತ್ತಿದೆ. ಕೆಮ್ಮಿನ ಸಿರಪ್‌ನಿಂದ ಸಾವುಗಳು ಸಂಭವಿಸುತ್ತಿರುವುದು ಇದು ಮೊದಲನೇನಲ್ಲ. ಇದೇ ರೀತಿ 2019ರಿಂದ 2020ರ ನಡುವೆ ಜಮ್ಮುವಿನಲ್ಲಿ ಕನಿಷ್ಠ 11 ಮಕ್ಕಳು ಸಾವಿಗೀಡಾಗಿದ್ದರು. ಭಾರತದಲ್ಲಿ ತಯಾರಾದ ಕೆಮ್ಮಿನ ಸಿರಪ್ ಸೇವಿಸಿ ಗ್ಯಾಂಬಿಯಾದಲ್ಲಿ 66 ಮಂದಿ ಮತ್ತು ಉಜ್ಬೇಕಿಸ್ತಾನದಲ್ಲಿ 12 ಮಂದಿ ಮಕ್ಕಳು ಸಾವಿಗೀಡಾಗಿದ್ದರು. ಕಡಿಮೆ ದರ ಎನ್ನುವ ಕಾರಣಕ್ಕೆ ಕಳಪೆ ಕಚ್ಚಾವಸ್ತುಗಳನ್ನು ಬಳಸುವುದು ಮತ್ತು ದೇಶದಲ್ಲಿ ಔಷಧ ಗುಣಮಟ್ಟ ಪರೀಕ್ಷೆ ಸಮರ್ಪಕವಾಗಿ ನಡೆಯದಿರುವುದೇ ಇಂಥ ಘಟನೆಗಳು ಮರುಕಳಿಸಲು ಕಾರಣ ಎನ್ನಲಾಗುತ್ತಿದೆ

ಪ್ರಜಾವಾಣಿ ವಾರ್ತೆ

2019ರ ಮಳೆಗಾಲದಲ್ಲಿ ಜಮ್ಮು ಪ್ರಾಂತ್ಯದಲ್ಲಿ ಕೆಮ್ಮು, ನೆಗಡಿಯಿಂದ ಬಳಲುತ್ತಿದ್ದ ಕೆಲವು ಮಕ್ಕಳಿಗೆ ವೈದ್ಯರು ಕೆಮ್ಮಿನ ಸಿರಪ್ ನೀಡಿದ್ದರು. ಕೆಲವೇ ದಿನಗಳಲ್ಲಿ ಅವರ ಕಿಡ್ನಿಗಳು ವಿಫಲವಾಗಿ 11 ಮಕ್ಕಳು ಸತ್ತುಹೋದರು. ಸತ್ತವರು ಆರು ತಿಂಗಳಿನಿಂದ ಹಿಡಿದು 6 ವರ್ಷದ ಒಳಗಿನವರಾಗಿದ್ದರು. ಕೆಮ್ಮಿನ ಸಿರಪ್‌ನ ಮಾದರಿಗಳನ್ನು ಪರೀಕ್ಷಿಸಿದಾಗ, ಅದರಲ್ಲಿ ಡೈಎಥಿಲೀನ್ ಗ್ಲೈಕಾಲ್ (ಡಿಇಜಿ) ಎನ್ನುವ ಅಪಾಯಕಾರಿ ರಾಸಾಯನಿಕ ಇದ್ದುದು ದೃಢಪಟ್ಟಿತ್ತು.

ಅಂದಿನಿಂದಲೂ ಭಾರತದಲ್ಲಿ ತಯಾರಾಗುವ ಕೆಲವು ಕೆಮ್ಮಿನ ಸಿರಪ್‌ಗಳ ಗುಣಮಟ್ಟದ ಬಗ್ಗೆ ಪ್ರಶ್ನೆಗಳು ಏಳುತ್ತಲೇ ಇವೆ. ಅದನ್ನು ಪುಷ್ಟೀಕರಿಸುವಂತೆ, ದೇಶದ ಒಳಗೆ ಮತ್ತು ಹೊರದೇಶಗಳಲ್ಲಿ ಕೆಮ್ಮಿನ ಸಿರಪ್ ಕುಡಿದ ಮಕ್ಕಳು ಸಾವಿಗೀಡಾಗುವ ಪ್ರಕರಣಗಳು ಆಗಿಂದಾಗ್ಗೆ ವರದಿಯಾಗುತ್ತಲೇ ಇವೆ.

ಕೆಮ್ಮಿನ ಸಿರಪ್‌ಗಳಿಂದ ಸಾವುಗಳು ಸಂಭವಿಸುತ್ತಿರುವುದಕ್ಕೆ ಎರಡು ಮುಖ್ಯ ಕಾರಣಗಳನ್ನು ಗುರುತಿಸಲಾಗುತ್ತದೆ. ಮೊದಲನೆಯದು, ಆ ಸಿರಪ್‌ಗಳ ಕಳಪೆ ಗುಣಮಟ್ಟ. ಎರಡನೆಯದು, ಭಾರತದಲ್ಲಿ ಔಷಧಗಳ ಗುಣಮಟ್ಟ ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪಗಳು.

ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಔಷಧಗಳು ತಯಾರಾಗುತ್ತಿದ್ದರೂ ಅವುಗಳ ಗುಣಮಟ್ಟ ಪರೀಕ್ಷೆಗೆ ಸೂಕ್ತ ವ್ಯವಸ್ಥೆ ಇಲ್ಲ ಎನ್ನುವ ದೂರು ಇದೆ. ಹೊಸ ಔಷಧಗಳಿಗೆ ಅನುಮತಿ ನೀಡುವುದು, ಅವುಗಳ ಕ್ಲಿನಿಕಲ್ ಟ್ರಯಲ್ಸ್, ಆಮದು, ರಫ್ತು ಇತ್ಯಾದಿ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದೆ. ಔಷಧಗಳ ಗುಣಮಟ್ಟ ನಿಯಂತ್ರಣದ ಉಸ್ತುವಾರಿಯನ್ನು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘ (ಸಿಡಿಎಸ್‌ಎಸ್‌ಒ) ವಹಿಸುತ್ತದೆ. ಗುಣಮಟ್ಟ ಪರೀಕ್ಷೆಗಾಗಿ ಏಳು ಕೇಂದ್ರೀಯ ಔಷಧ ಪರೀಕ್ಷಾ ಪ್ರಯೋಗಾಲಯಗಳಿವೆ. ಆದರೆ, ಇವುಗಳಲ್ಲಿ ಮೂಲಸೌಕರ್ಯಗಳು ಮತ್ತು ಸಿಬ್ಬಂದಿಯ ಕೊರತೆ ಇದ್ದು, ನಿರೀಕ್ಷೆಯಂತೆ ಗುಣಮಟ್ಟ ಪರೀಕ್ಷೆ ನಡೆಯುತ್ತಿಲ್ಲ ಎನ್ನುವ ಆರೋಪಗಳಿವೆ.

2007 ಮತ್ತು 2020ರ ನಡುವೆ ದೇಶದ ಆರು ರಾಜ್ಯ ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಗ್ರಹಿಸಲಾಗಿದ್ದ 7,500 ಔಷಧ ಮಾದರಿಗಳು ಅಗತ್ಯ ಗುಣಮಟ್ಟ ಹೊಂದಿಲ್ಲ ಎಂದು ವರದಿಯಾಗಿತ್ತು. ಆದರೆ, ಹೀಗೆ ಕಳಪೆ ಗುಣಮಟ್ಟ ಎಂದು ಕಂಡುಬಂದ ನಂತರ ಅವುಗಳನ್ನು ಮಾರುಕಟ್ಟೆಯಿಂದ ವಾಪಸ್ ಪಡೆಯುವ ವ್ಯವಸ್ಥೆ ಇಲ್ಲ ಎನ್ನಲಾಗುತ್ತಿದೆ. ಇಂಥ ಕಳಪೆ ಔಷಧಗಳು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಾರಾಟವಾಗುತ್ತವೆ ಎಂದೂ ಕೆಲವು ವರದಿಗಳು ಹೇಳುತ್ತವೆ.

ಕೇಂದ್ರದ ನಿರಾಕರಣೆ: ಆದರೆ, ಈಗಿನ ಪ್ರಕರಣ ಮತ್ತು ಈ ಹಿಂದಿನ ಪ್ರಕರಣಗಳಲ್ಲಿಯೂ ಕೆಮ್ಮಿನ ಸಿರಪ್‌ಗಳು ಕಳಪೆ ಗುಣಮಟ್ಟದಿಂದ ಕೂಡಿದ್ದುದೇ ಮಕ್ಕಳ ಸಾವಿಗೆ ಕಾರಣ ಎನ್ನುವ ವಾದವನ್ನು ಕೇಂದ್ರ ಸರ್ಕಾರವು ನಿರಾಕರಿಸುತ್ತಲೇ ಬಂದಿದೆ.

ಭಾರತವು 'ಜಗತ್ತಿನ ಗುಣಮಟ್ಟದ ಔಷಧಾಲಯ' ಆಗಿದೆ ಎಂದು ಪ್ರತಿಪಾದಿಸಿದ್ದ ಕೇಂದ್ರ ಸರ್ಕಾರವು ಗುಣಮಟ್ಟ ಕಾಯ್ದುಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿರುವುದಾಗಿಯೂ ಹೇಳಿದೆ. ಸಾವುಗಳಿಗೆ ವೈದ್ಯರ ತಪ್ಪುಗಳು ಕಾರಣವಾಗಿರಬಹುದು ಎನ್ನುವುದು ಅದರ ವಾದ.

ಭಾರತದ ಔಷಧಗಳು ಕಳಪೆ ಎನ್ನುವುದರ ಬಗ್ಗೆ ಹೆಚ್ಚಿನ ವಿವರ ನೀಡುವಂತೆ ಡಬ್ಲ್ಯುಎಚ್‌ಒ ಅನ್ನು ಕೇಳಿದ್ದೇವೆ. ಆದರೆ, ನಮಗೆ ಇದುವರೆಗೂ ಅದರ ವಿವರಗಳು ಸಿಕ್ಕಿಲ್ಲ ಎಂದು 2023ರಲ್ಲಿ ಆಗಿನ ಕೇಂದ್ರ ಆರೋಗ್ಯ ಸಚಿವರಾಗಿದ್ದ ಮನ್ಸುಖ್ ಮಾಂಡವೀಯ ಹೇಳಿದ್ದರು.

ಮಕ್ಕಳಿಗೆ ಸಿರಪ್ ಬೇಡ

ಐದು ವರ್ಷದ ಒಳಗಿನ ಮಕ್ಕಳಿಗೆ ಕೆಮ್ಮಿನ ಸಿರಪ್‌ಗಳನ್ನು ಕೊಡಬಾರದು ಎಂದು ವಿಶ್ವ ಆರೋಗ್ಯ ಸಂಸ್ಥೆ 2001ರಿಂದಲೂ ಹೇಳುತ್ತಾ ಬಂದಿದೆ. ಸಣ್ಣ ಮಕ್ಕಳಲ್ಲಿ ಇವುಗಳ ಪರಿಣಾಮಕಾರಿತ್ವ ಸಾಬೀತುಪಡಿಸುವಂತಹ ಮತ್ತು ಅವುಗಳು ಬೀರುವ ಅಡ್ಡಪರಿಣಾಮಗಳ ಬಗೆಗಿನ ಸಾಕ್ಷ್ಯಗಳು ಸೀಮಿತವಾಗಿವೆ ಎಂಬುದು ಅದರ ವಾದ.

50 ವರ್ಷಗಳಲ್ಲಿ ಕಲಬೆರಕೆಯಾಗಿರುವ ಕೆಮ್ಮಿನ ಸಿರಪ್‌ಗಳ ಸೇವನೆಯಿಂದ ಮಕ್ಕಳು ಮೃತಪಟ್ಟಂತಹ ಕನಿಷ್ಠ ಐದು ಪ್ರಕರಣಗಳು ಜಗತ್ತಿನಲ್ಲಿ ವರದಿಯಾಗಿವೆ. 2006ರಲ್ಲಿ ಪನಾಮಾದಲ್ಲಿ ವಿಷಕಾರಿ ರಾಸಾಯನಿಕ ಡೈಎಥಿಲೀನ್ ಗ್ಲೈಕಾಲ್ ಬೆರೆಸಿದ ಕೆಮ್ಮಿನ ಸಿರಪ್ ಸೇವಿಸಿ 400ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು.



ಕಳಪೆ, ಕಲಬೆರಕೆ

ಜಗತ್ತಿನ ಅತಿದೊಡ್ಡ ಔಷಧ ಉತ್ಪಾದಕ ರಾಷ್ಟ್ರಗಳಲ್ಲಿ ಭಾರತವು ಮೂರನೇ ಸ್ಥಾನ ಪಡೆದಿದೆ. ದೇಶದಲ್ಲಿ ಸುಮಾರು ಮೂರು ಸಾವಿರ ಕಂಪನಿಗಳು 10 ಸಾವಿರಕ್ಕೂ ಹೆಚ್ಚು ತಯಾರಿಕಾ ಘಟಕಗಳನ್ನು ಹೊಂದಿದ್ದು, ಜೆನರಿಕ್ ಔಷಧ ತಯಾರಿಕೆಯಲ್ಲಿ ತೊಡಗಿವೆ. ಹೀಗೆ ಬೃಹತ್ ಪ್ರಮಾಣದಲ್ಲಿ ತಯಾರಾಗುತ್ತಿರುವ ಔಷಧಗಳನ್ನು ಕಡಿಮೆ ಬೆಲೆಗೆ ವಿದೇಶಗಳಿಗೆ ರಫ್ತು ಮಾಡುತ್ತಿದೆ. 2024–25ರಲ್ಲಿ ಭಾರತವು ರಫ್ತು ಮಾಡಿರುವ ಔಷಧಗಳ ಮೌಲ್ಯ ₹2.66 ಲಕ್ಷ ಕೋಟಿ (3,000 ಕೋಟಿ ಡಾಲರ್). ಜಾಗತಿಕ ಲಸಿಕೆಗಳ ಬೇಡಿಕೆಯಲ್ಲಿ ಶೇ 50, ಅಮೆರಿಕದ ಜೆನರಿಕ್ ಔಷಧಗಳ ಪೈಕಿ ಶೇ 40ರಷ್ಟು ಮತ್ತು ಇಂಗ್ಲೆಂಡ್‌ನ ಎಲ್ಲ ರೀತಿಯ ಔಷಧಗಳ ಪೈಕಿ ಶೇ 25ರಷ್ಟನ್ನು ಭಾರತವೇ ಪೂರೈಸುತ್ತಿದೆ. ಕಡಿಮೆ ಆದಾಯ ಮತ್ತು ಮಧ್ಯಮ ಆದಾಯದ ಅನೇಕ ದೇಶಗಳಿಗೆ, ವೈದ್ಯರ ಚೀಟಿ ಇಲ್ಲದೇ ಮಾರಾಟವಾಗುವ (ಓವರ್ ದ ಕೌಂಟರ್) ಔಷಧಗಳಲ್ಲಿ ಗಣನೀಯ ಪಾಲನ್ನು ಭಾರತವೇ ಪೂರೈಸುತ್ತದೆ. 200ರಷ್ಟು ದೇಶಗಳಿಗೆ ಭಾರತವು ಔಷಧ ಮತ್ತು ಲಸಿಕೆಗಳನ್ನು ರಫ್ತು ಮಾಡುತ್ತದೆ. ಎಚ್‌ಐವಿ ಚಿಕಿತ್ಸೆಯಲ್ಲಿ ಬಳಸಲಾಗುವ ಔಷಧಗಳ ಪೈಕಿ ಮೂರನೇ ಎರಡರಷ್ಟು ಪಾಲನ್ನು ಭಾರತವೇ ಪೂರೈಸುತ್ತದೆ.

ಆದರೆ, ಭಾರತದಲ್ಲಿ ತಯಾರಾಗುವ ಔಷಧಗಳ ಗುಣಮಟ್ಟದ ಕುರಿತು ಜಾಗತಿಕ ಮಟ್ಟದಲ್ಲಿ ಆಗಾಗ ಆಕ್ಷೇಪಗಳು ಕೇಳಿ ಬಂದಿವೆ. ಹಲವು ದೇಶಗಳು ಭಾರತದಿಂದ ಆಮದು ಮಾಡಲಾಗುವ ಕೆಲವು ಔಷಧಗಳಿಗೆ ನಿಷೇಧ ಹೇರಿದ ಉದಾಹರಣೆಗಳೂ ಇವೆ. ಐರೋಪ್ಯ ಒಕ್ಕೂಟವು ಭಾರತದ 700 ಜೆನರಿಕ್ ಔಷಧಗಳನ್ನು ನಿಷೇಧಿಸಿದ್ದು ತೀರಾ ಇತ್ತೀಚಿನ ಉದಾಹರಣೆ. ವೈಜ್ಞಾನಿಕ ಕಾರಣಗಳಿಗಾಗಿ ಔಷಧಗಳನ್ನು ನಿರ್ಬಂಧಿಸಲಾಗಿದೆ ಎಂದು ಒಕ್ಕೂಟ ಹೇಳಿದೆ.

ಭಾರತದ ಕಂಪನಿಗಳು ತಯಾರಿಸಿದ ಕೆಮ್ಮಿನ ಸಿರಪ್‌ಗಳನ್ನು ಕುಡಿದು ಗ್ಯಾಂಬಿಯಾ ಮತ್ತು ಉಜ್ಬೇಕಿಸ್ತಾನದಲ್ಲಿ ಮಕ್ಕಳು ಮೃತಪಟ್ಟಾಗ ಈ ಸಿರಪ್‌ಗಳನ್ನು ಬಳಸುವುದರ ವಿರುದ್ಧ ಜಗತ್ತಿನ ಇತರ ದೇಶಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯೇ (ಡಬ್ಲ್ಯುಎಚ್‌ಒ) ಎಚ್ಚರಿಕೆ ನೀಡಿತ್ತು. ಈ ಎರಡು ದೇಶಗಳಲ್ಲಿ ನಡೆದ ಘಟನೆಯ ಬಳಿಕ ಹಲವು ರಾಷ್ಟ್ರಗಳು ಭಾರತದ ಔಷಧಗಳಿಗೆ ನಿಷೇಧ ಹೇರಿದ್ದವು.

ಔಷಧಗಳ ತಯಾರಿಕಾ ಹಂತದಲ್ಲಿನ ಕೊರತೆಗಳ ಕಾರಣಕ್ಕೆ ಅಮೆರಿಕ ಕೂಡ ಈ ಹಿಂದೆ ಭಾರತ ಪೂರೈಸುತ್ತಿದ್ದ ಕೆಲವು ಜೆನರಿಕ್ ಔಷಧಗಳಿಗೆ (ರ್‍ಯಾನ್‌ಬಾಕ್ಸಿ ಕಂಪನಿಯ ಕೆಲವು ಔಷಧಗಳು) ನಿರ್ಬಂಧ ಹೇರಿತ್ತು. ಅಲ್ಲದೇ ಈ ಕಂಪನಿಗೆ ದೊಡ್ಡ ಮೊತ್ತದ ದಂಡವನ್ನೂ ವಿಧಿಸಿತ್ತು.

2023ರಲ್ಲಿ ಮಾರ್ಷಲ್ ದ್ವೀಪಗಳು ಮತ್ತು ಮೈಕ್ರೊನೇಸಿಯಾಗೆ ಭಾರತದಿಂದ ಪೂರೈಕೆಯಾಗಿದ್ದ ಔಷಧಗಳು ಕಲಬೆರಕೆಗೊಂಡಿವೆ ಎಂಬ ಸಂಗತಿ ಆಸ್ಟ್ರೇಲಿಯಾದ ಪ್ರಯೋಗಾಲಯದ ವರದಿಯಲ್ಲಿ ದೃಢಪಟ್ಟಿದ್ದರಿಂದ, ಆ ಔಷಧಗಳನ್ನು ಭಾರತ ವಾಪಸ್ ತರಿಸಿಕೊಂಡಿತ್ತು.

2023ರ ಆರಂಭದಲ್ಲಿ ಲೈಬೇರಿಯಾ ದೇಶವು ಭಾರತದಿಂದ ಆಮದು ಮಾಡಿಕೊಂಡಿದ್ದ ಕೆಮ್ಮಿನ ಸಿರಪ್ ಕೂಡ ಕಲಬೆರಕೆಗೊಂಡಿದ್ದು ದೃಢಪಟ್ಟಿತ್ತು. ಅದೃಷ್ಟವಶಾತ್ ಅಲ್ಲಿ ಯಾವುದೇ ಸಾವು ಸಂಭವಿಸಿರಲಿಲ್ಲ.

ಮಾರಕವಾದ ಕೆಮ್ಮಿನ ಸಿರಪ್

- 2019–20ರಲ್ಲಿ ಜಮ್ಮು ಪ್ರದೇಶದಲ್ಲಿ ಕೆಮ್ಮಿನ ಸಿರಪ್ ಸೇವಿಸಿದ್ದ 11 ಮಕ್ಕಳು ಸಾವು. ಡಿಜಿಟಲ್ ವಿಷನ್ ಎಂಬ ಕಂಪನಿ ಈ ಸಿರಪ್ ತಯಾರಿಸಿತ್ತು. ಬಣ್ಣ, ಶಾಯಿ, ಬ್ರೇಕ್ ಆಯಿಲ್ ತಯಾರಿಕೆಗೆ ಬಳಸುವ ಡೈಎಥಿಲೀನ್ ಗ್ಲೈಕಾಲ್ (ಡಿಇಜಿ) ಎಂಬ ರಾಸಾಯನಿಕ ಈ ಸಿರಪ್‌ನಲ್ಲಿ ಇರುವುದು ಪತ್ತೆಯಾಗಿತ್ತು
- 2022ರಲ್ಲಿ ಪಶ್ಚಿಮ ಆಫ್ರಿಕಾದ ದೇಶವಾದ ಗ್ಯಾಂಬಿಯಾದಲ್ಲಿ ಭಾರತದಿಂದ ಆಮದು ಮಾಡಿಕೊಂಡಿದ್ದ ನಾಲ್ಕು ಕೆಮ್ಮಿನ ಸಿರಪ್‌ಗಳನ್ನು ಸೇವಿಸಿ 66 ಮಕ್ಕಳು ಮೃತಪಟ್ಟಿದ್ದರು. ಮೈಡೆನ್ ಫಾರ್ಮಾಸ್ಯುಟಿಕಲ್ಸ್ ಕಂಪನಿ ತಯಾರಿಸಿದ್ದ ಸಿರಪ್‌ನಲ್ಲಿ ಡೈಎಥಿಲೀನ್ ಗ್ಲೈಕಾಲ್ ಮಿತಿ ಮೀರಿದ ಪ್ರಮಾಣದಲ್ಲಿತ್ತು
- 2022ರ ಡಿಸೆಂಬರ್‌ನಲ್ಲಿ ಉಜ್ಬೇಕಿಸ್ತಾನದಲ್ಲಿ ಭಾರತದ ಕಂಪನಿಯೊಂದು ತಯಾರಿಸಿದ ಎರಡು ಕೆಮ್ಮಿನ ಸಿರಪ್‌ಗಳನ್ನು ಸೇವಿಸಿ 22 ಮಕ್ಕಳು ಕೊನೆಯುಸಿರೆಳೆದಿದ್ದರು. ಮ್ಯಾರಿಯನ್ ಬಯೊಟೆಕ್ ಕಂಪನಿ ತಯಾರಿಸಿದ್ದ ಈ ಸಿರಪ್‌ಗಳಲ್ಲಿ ಡಿಇಜಿ ಪ್ರಮಾಣ ಹೆಚ್ಚಿದ್ದುದು ಕಂಡು ಬಂದಿತ್ತು

ಅಗ್ಗದ ವಿಷಕಾರಿ ರಾಸಾಯನಿಕ ಬಳಕೆ

ಔಷಧಗಳ ಕಚ್ಚಾ ವಸ್ತುಗಳು ದುಬಾರಿ ಎಂಬ ಕಾರಣಕ್ಕೆ ಕೆಲವು ಕಂಪನಿಗಳು ಅವುಗಳಿಗೆ ನಕಲಿ ರಾಸಾಯನಿಕ ವಸ್ತುಗಳನ್ನು ಬಳಸುತ್ತವೆ ಎಂಬುದು ತಜ್ಞರ ವಿವರಣೆ.

ಉದಾಹರಣೆಗೆ ಕೆಮ್ಮಿನ ಸಿರಪ್‌ನಲ್ಲಿ ಸಾಮಾನ್ಯವಾಗಿ ಪ್ರೊಪಿಲೀನ್ ಗ್ಲೈಕಾಲ್ ಅನ್ನು ಬಳಸಲಾಗುತ್ತದೆ. ಆದರೆ, ಇದು ಕೊಂಚ ದುಬಾರಿ. ಹೀಗಾಗಿ, ಅಗ್ಗದ ಎಥಿಲೀನ್ ಗ್ಲೈಕಾಲ್ ಮತ್ತು ಡೈಎಥಿಲೀನ್ ಗ್ಲೈಕಾಲ್ ಅನ್ನು ಪರ್ಯಾಯವಾಗಿ ಬಳಸಲಾಗುತ್ತಿದೆ.

ವಿಷಕಾರಿ ರಾಸಾಯನಿಕಗಳಾಗಿರುವ ಬ್ರೇಕ್ ಆಯಿಲ್ ಹಾಗೂ ಇನ್ನಿತರ ವಸ್ತುಗಳ ತಯಾರಿಕೆಯಲ್ಲಿ ಬಳಸುವ ಇವುಗಳು ಮನುಷ್ಯರ ಸೇವನೆಗೆ ಯೋಗ್ಯವಲ್ಲ ಎಂದು ವಿವರಿಸುತ್ತಾರೆ ಅವರು.



ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ಇಂಡಿಯನ್ ಟ್ರೇಡ್‌ಪೋರ್ಟಲ್.ಇನ್

ರಾಷ್ಟ್ರೀಯ

ಉಗ್ರರಿಗೆ ನೆರವು ನೀಡಿದ್ದ ಶಿಕ್ಷಕ!

ಪ್ರಜಾವಾಣಿ ವಾರ್ತೆ

ಶ್ರೀನಗರ: ಏ.22ರಂದು ನಡೆದ ಪಹಲ್ಗಾಮ್ ದಾಳಿಗೆ ಭಯೋತ್ಪಾದಕರಿಗೆ ಸರಕು ಸರಬರಾಜು ಮಾಡಿದ್ದು ಕುಲ್ಗಾಮ್‌ನ ಶಾಲಾ ಶಿಕ್ಷಕ ಎಂದು ತನಿಖೆ ವೇಳೆ ದೃಢಪಟ್ಟಿದೆ.

ಭಯೋತ್ಪಾದಕರಿಗೆ ನೆರವು ನೀಡಿದ್ದ ಆರೋಪದ ಮೇಲೆ ಕುಲ್ಗಾಮ್‌ನ ಶಾಲಾ ಶಿಕ್ಷಕ ಮೊಹಮ್ಮದ್ ಯೂಸೂಫ್ ಕಟಾರಿ ಅವರನ್ನು (26) ಸೆಪ್ಟೆಂಬರ್‌ನಲ್ಲಿ ಬಂಧಿಸಲಾಗಿತ್ತು. ಇವರು ಪಾಕಿಸ್ತಾನದ ಲಷ್ಕರ್–ಎ–ತಯಬಾ ಜತೆ ನಿರಂತರ ಸಂಪರ್ಕದಲ್ಲಿದ್ದು, ರಹಸ್ಯವಾಗಿ ಕೆಲಸ ಮಾಡುತ್ತಿದ್ದರು. ಪಹಲ್ಗಾಮ್‌ನಲ್ಲಿ ನಡೆದ ದಾಳಿಗೂ ಮುನ್ನ ಉಗ್ರರಿಗೆ ಸರಕು ಸಾಗಾಣಿಕೆಗೂ ನೆರವಾಗಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಉಗ್ರರನ್ನು ಮಟ್ಟಹಾಕಲು ಭಾರತೀಯ ಸೇನೆಯು ಮೇ 22ರಿಂದ 'ಆಪರೇಷನ್ ಮಹದೇವ್' ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿತ್ತು. ಜುಲೈ 28ರಂದು ದಾಚಿಗಾಮ್ ಅರಣ್ಯ ಪ್ರದೇಶದಲ್ಲಿ ಲಷ್ಕರ್–ಎ–ತಯಬಾದ ಮೂವರು ಉಗ್ರರನ್ನು ಭದ್ರತಾ ಪಡೆಗಳು ಹತ್ಯೆಗೈದಿದ್ದವು. ಮೃತರನ್ನು ಪಹಲ್ಗಾಮ್ ದಾಳಿ ನಡೆಸಿದ್ದ ಸುಲೈಮಾನ್ ಅಲಿಯಾಸ್ ಆಸೀಫ್, ಜಿಬ್ರಾನ್ ಹಾಗೂ ಹಮ್ಜಾ ಅಫ್ಗಾನಿ ಎಂದು ಗುರುತಿಸಲಾಗಿತ್ತು. ಉಗ್ರರು ಅವಿತಿದ್ದ ಝಬರ್ವಾನ್ ಅರಣ್ಯದ ಅಡಗುತಾಣದಿಂದ ಎ.ಕೆ.–47, ಎಂ.9 ರೈಫಲ್‌ಗಳನ್ನು ವಶ ಪಡಿಸಿಕೊಳ್ಳಲಾಗಿತ್ತು. ಅವುಗಳನ್ನು ಚಂಡೀಗಢದಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪರೀಕ್ಷೆ ವೇಳೆ ಅಡಗುತಾಣದಲ್ಲಿ ಪತ್ತೆಯಾದ ಬಂದೂಕಿನಿಂದಲೇ ಪ್ರವಾಸಿಗರನ್ನು ಹತ್ಯೆಗೈದಿರುವುದು ದೃಢಪಟ್ಟಿತ್ತು.

ಚಾರ್ಜರ್ ನೀಡಿದ ಸುಳಿವು

ಎನ್‌ಕೌಂಟರ್ ಜಾಗದ ಅವಶೇಷಗಳಲ್ಲಿ ಹಾನಿಯಾಗಿದ್ದ ಆ್ಯಂಡ್ರಾಯ್ಡ್ ಚಾರ್ಜರ್ ಅನ್ನು ಕೂಡ ಸೈನಿಕರು ವಶಕ್ಕೆ ಪಡೆದಿದ್ದರು. ಅದರಲ್ಲಿದ್ದ ನೋಂದಣಿ ಸಂಖ್ಯೆ, ಖರೀದಿ ದಿನಾಂಕ ಆಧರಿಸಿ ಮಾಹಿತಿ ಕಲೆಹಾಕಿದ ವೇಳೆ ಶ್ರೀನಗರದಲ್ಲಿಯೇ ಅದನ್ನು ಖರೀದಿಸಿರುವುದು ಕಂಡುಬಂದಿತ್ತು.

ಈ ಮಾಹಿತಿ ಬೆನ್ನುಹತ್ತಿ ಹೋದ ಪೊಲೀಸರು ಅದನ್ನು ಖರೀದಿಸಿದ್ದು ಕಟಾರಿ ಎಂಬುದು ಗೊತ್ತಾಗಿದೆ. ಅವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ ವೇಳೆ, ತಾನೇ ಚಾರ್ಜರ್ ಖರೀದಿಸಿ ಭಯೋತ್ಪಾದಕರಿಗೆ ನೀಡಿದ್ದನ್ನು ಒಪ್ಪಿಕೊಂಡಿದ್ದಾರೆ. ಪಹಲ್ಗಾಮ್ ದಾಳಿಗೂ ಮುನ್ನ ಝಬರ್ವಾನ್ ಅರಣ್ಯದಲ್ಲಿ ನಾಲ್ಕು ಬಾರಿ ಭೇಟಿಯಾಗಿದ್ದೆನು ಎಂದು ಮಾಹಿತಿ ನೀಡಿದ್ದಾರೆ.

ತಮಿಳುನಾಡು ಯಾರ ವಿರುದ್ಧ ಹೋರಾಡಬೇಕು: ರಾಜ್ಯಪಾಲ

ಚೆನ್ನೈ (ಪಿಟಿಐ): 'ರಾಜ್ಯದಲ್ಲಿ ಪ್ರಯಾಣಿಸುವಾಗೆಲ್ಲ 'ತಮಿಳುನಾಡು ಹೋರಾಡಲಿದೆ' ಎಂಬ ಪೋಸ್ಟರ್ ಕಾಣಿಸುತ್ತದೆ. ಯಾರೊಂದಿಗೆ ಹೋರಾಡುತ್ತದೆ ಎಂಬುದೇ ತಿಳಿಯುತ್ತಿಲ್ಲ' ಎಂದು ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಭಾನುವಾರ ಹೇಳಿದರು.

ಸ್ವಾಮಿ ತಿರುವರುತ್‌ಪ್ರಕಾಶ ವಲ್ಲಾರ್ ಅವರ 202ನೇ ಅವತಾರ ದಿನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇಂಥ ಮನೋಭಾವ ನಮ್ಮಿಂದ ದೂರಾಗಬೇಕು. ನಾವೆಲ್ಲ ಸಹೋದರ–ಸಹೋದರಿಯರು. ನಮ್ಮ ಮಧ್ಯೆ ಯಾವುದೇ ಸಂಘರ್ಷ ಅಥವಾ ಹೋರಾಟ ಬೇಡ. ನಾವೆಲ್ಲ ಪರಸ್ಪರ ಒಟ್ಟಿಗೆ ಜೀವಿಸಬೇಕು, ಒಟ್ಟಿಗೆ ಸಮೃದ್ಧಿ ಸಾಧಿಸಬೇಕು' ಎಂದರು.

ರಾಜ್ಯಪಾಲರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, 'ರಾಜ್ಯದಲ್ಲಿ ಹಿಂದಿ ಸ್ವೀಕರಿಸಿದರೆ ಮಾತ್ರ ಶೈಕ್ಷಣಿಕ ಅನುದಾನ ನೀಡುವುದಾಗಿ ಹೇಳುವ ಕೇಂದ್ರ ಸರ್ಕಾರದ ಧಾರ್ಷ್ಟ್ಯದ ವಿರುದ್ಧ ತಮಿಳುನಾಡು ಹೋರಾಡಲಿದೆ. ಚುನಾಯಿತ ಸರ್ಕಾರವನ್ನು ಹತ್ತಿಕ್ಕುವ, ಜನರ ಇಚ್ಛಾಶಕ್ತಿಯ ವಿರುದ್ಧ ಹೋಗುವ ಪ್ರಜಾಪ್ರಭುತ್ವ ವಿರೋಧಿಗಳ ವಿರುದ್ಧ ಹೋರಾಡಲಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ರಾಜ್ಯಪಾಲರ ವಿರುದ್ಧ 'ಸುಪ್ರೀಂ'ಗೆ

ನವದೆಹಲಿ (ಪಿಟಿಐ): ಕಲೈನಾರ್ ವಿಶ್ವವಿದ್ಯಾಲಯ ಮಸೂದೆ–2025ಕ್ಕೆ ಅನುಮೋದನೆ ನೀಡದೆ ವಿಳಂಬ ಮಾಡುತ್ತಿರುವ ರಾಜ್ಯಪಾಲರ ವಿರುದ್ಧ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಮಸೂದೆ ಕುರಿತ ನಿರ್ಧಾರವನ್ನು ಪ್ರಕಟಿಸಲು ನಿರ್ದೇಶನ ನೀಡುವಂತೆ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿದೆ. ಜೊತೆಗೆ, ಸಚಿವ ಸಂಪುಟದ ಸಲಹೆಯ ಅನುಸಾರ ಮತ್ತು ಸಂವಿಧಾನದ 200ನೇ ವಿಧಿಯ ಪ್ರಕಾರ ನಡೆದುಕೊಳ್ಳುವಂತೆ ರಾಜ್ಯಪಾಲರಿಗೆ ಸೂಚಿಸುವಂತೆಯೂ ತಿಳಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹಿಮಾಲಯದ ತಪ್ಪಲಿನ ಲಡಾಕ್‌ಗೆ ರಾಜ್ಯದ ಸ್ಥಾನ ನೀಡುವಂತೆ ಆಗ್ರಹಿಸಿ ಪ್ರತಿಭಟನೆಗಳು ನಡೆದಿದ್ದು, ಹಿಂಸಾಚಾರ ಕೂಡ ವರದಿ ಆಗಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿದೆ. 2025ರ ಸೆ.24ರಂದು ಪ್ರತಿಭಟನಕಾರರು ಸಾರ್ವಜನಿಕ ಸ್ವತ್ತಿಗೆ ಹಾನಿ ಮಾಡುತ್ತಿರುವುದು, ಸರ್ಕಾರಿ ಕಟ್ಟಡವೊಂದನ್ನು ಆಕ್ರಮಿಸಿಕೊಳ್ಳುತ್ತಿರುವುದು ವಿಡಿಯೊದಲ್ಲಿದೆ. ಇದು ಲಡಾಕ್‌ನಲ್ಲಿ ನಡೆದಿರುವ ಪ್ರಕರಣವಾಗಿದೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊದ ಕೀಫ್ರೇಮ್‌ಗಳನ್ನು ವಿಂಗಡಿಸಿ, ಒಂದು ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇದೇ ವಿಡಿಯೊ ಅನ್ನು 2025ರ ಸೆ.13ರಂದು (ಲಡಾಕ್‌ನಲ್ಲಿ ಪ್ರತಿಭಟನೆಗಳು ನಡೆಯುವುದಕ್ಕೂ ಮುಂಚೆ) ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿರುವುದು ಕಂಡಿತು. ಅದೇ ಸ್ಥಳದಲ್ಲಿ ನಡೆದಿರುವ ಪ್ರತಿಭಟನೆಯ ಚಿತ್ರ, ವಿಡಿಯೊಗಳನ್ನು ಹಲವರು ಹಂಚಿಕೊಂಡಿರುವುದು ಕಂಡಿತು. ಒಂದು ಪೋಸ್ಟ್‌ನಲ್ಲಿರುವ ಚಿತ್ರದಲ್ಲಿ 'ನೇಪಾಳ ಸರ್ಕಾರ, ಗೃಹ ಸಚಿವಾಲಯ, ಜಿಲ್ಲಾಡಳಿತ ಭವನ, ಭರತ್‌ಪುರ, ಚಿತ್ವಾನ್' ಎಂದು ಕಟ್ಟಡದ ಮೇಲೆ ಬರೆದಿರುವುದು ಕಂಡಿತು. ನೇಪಾಳದ ಚಿತ್ವಾನದಲ್ಲಿರುವ ಜಿಲ್ಲಾಡಳಿತ ಭವನದ ಚಿತ್ರವನ್ನು ಗೂಗಲ್‌ನಲ್ಲಿ ಹುಡುಕಿದಾಗ, ಆ ಕಟ್ಟಡ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ಪೋಸ್ಟ್‌ನಲ್ಲಿರುವ ಕಟ್ಟಡ ಎರಡೂ ಒಂದೇ ಆಗಿರುವುದು ಕಂಡುಬಂತು. 2025ರ ಸೆ.9ರಂದು ನೇಪಾಳದಲ್ಲಿ ನಡೆದಿದ್ದ ಜೆನ್ ಜಿ ಪ್ರತಿಭಟನೆಯ ವಿಡಿಯೊ ಅನ್ನು ಲಡಾಕ್‌ಗೆ ಸೇರಿದ್ದು ಎಂದು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂಬುದಾಗಿ ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಸತ್ಯದ ಸಂಬಂಧ, ಸಂಪತ್ತಿನ ಬಾಂಧವ್ಯ



ದಾದಾಪೀರ್ ನವಿಲೇಹಾಳ್

ವ್ಯವಸಾಯದ ಜೊತೆಗೆ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದ ಕುಟುಂಬವೊಂದು ಮತ್ತೊಬ್ಬರಲ್ಲಿ ಕೈಚಾಚಿ ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಸಂಸಾರದಲ್ಲಿ ಅದು ನಡೆಯಬಾರದು ಎಂದು ಎಚ್ಚರ ವಹಿಸಿದ ತಂದೆ ಏಳು ಜನ ಗಂಡುಮಕ್ಕಳ ನಡುವೆ ಹುಟ್ಟಿದ ಒಬ್ಬಳೇ ಒಬ್ಬ ಮಗಳಿಗೆ ಮದುವೆ ಮಾಡಿ ಒಂದೆಕರೆ ಜಮೀನನ್ನು ದಾನ ಮಾಡಿ ಸ್ವಾಧೀನಕ್ಕೆ ಕೊಟ್ಟು ಕಣ್ಮುಚ್ಚಿದ. ಹೆತ್ತ ತಾಯಿ ಗಂಡು ಮಕ್ಕಳೊಂದಿಗೆ ಸೇರಿಕೊಂಡು ತನ್ನ ಗಂಡ ಬಾಯಿಮಾತಿನಲ್ಲಿ ದಾನ ಕೊಟ್ಟ ಜಮೀನಿನ ಸ್ವಾಧೀನವನ್ನು ಮಗಳಿಂದ ಬಿಡಿಸಲು ಮಸಲತ್ತು ನಡೆಸಿದಳು. ಜಗಳ ಪೊಲೀಸು ಎಲ್ಲಾ ಮುಗಿದು ಕೇಸು ಕೋರ್ಟಿನ ಕಟಕಟೆಗೆ ಬಂದು ನಿಂತಿತು.

ವಿಚಾರಣೆಯ ಹಂತದಲ್ಲಿ ಮಗನೊಬ್ಬ ತಾಯಿಗೆ ವಿಷವುಣಿಸಿ ಕೊಂದ ಸುದ್ದಿ ಹಬ್ಬಿತು. ಏಳು ಜನ ಸಹೋದರರಲ್ಲಿ ಒಬ್ಬನು ಸಾಕ್ಷ್ಯ ಹೇಳಲು ಕೋರ್ಟಿಗೆ ಗೈರುಹಾಜರಾದ. ಉಳಿದ ಆರು ಜನರಲ್ಲಿ ಐವರು, 'ಅವಳು ಒಡಹುಟ್ಟಿದವಳೇ ಅಲ್ಲ, ನಮ್ಮ ಮನೆಯಲ್ಲಿ ಕಸ ಮುಸುರೆ ಮಾಡಿಕೊಂಡಿದ್ದವಳು. ನಮ್ಮಪ್ಪನಿಗೆ ಪುಸಲಾಯಿಸಿ ಹೊಲ ಹೊಡೆದುಕೊಂಡಿದ್ದಾಳೆ' ಅಂತ ಸಾಕ್ಷ್ಯ ನುಡಿದರು. ಉಳಿದ ಒಬ್ಬನು ಮಾತ್ರ 'ಹೌದು, ಆಕೆ ನಮ್ಮೆಲ್ಲರ ಸೋದರಿ' ಅಂತ ನಿಜ ಹೇಳಿದ. ಆಕೆಯೂ ಅಷ್ಟೇ, ಸೋದರಿ ಅಂತ ಒಪ್ಪಿಕೊಳ್ಳಿ, ಜಮೀನು ಕೊಡದಿದ್ದರೆ ಬೇಡ ಅಂತ ಗೋಗರೆಯಲಿಲ್ಲ. ಸಾಯುವವರೆಗೂ ನಿಮ್ಮನೆಗೆ ಎಡಗಾಲಿಡುವುದಿಲ್ಲ ಅಂದು ಹಾಗೇ ಬದುಕಿದಳು. ನ್ಯಾಯಾಧೀಶರು ಊರಿಗೇ ಬಂದು ಜನರ ವಿಚಾರಣೆ ನಡೆಸಿದರು. ಒಂದೆಕರೆ ಜಮೀನಿನ ಆಸೆಗಾಗಿ ಸೋದರಿಯನ್ನು ಒಡಹುಟ್ಟಿದವಳೇ ಅಲ್ಲ ಅಂತ ಸುಳ್ಳು ಹೇಳಿರುವುದು ಸಾಬೀತಾಯಿತು. ಜನರ ಮುಂದೆ ತೀರ್ಪು ಪ್ರಕಟಿಸಿದ ನ್ಯಾಯಾಧೀಶರು, 'ಸುಳ್ಳು ಹೇಳಿದ ಐವರಿಗಿಂತ ನಿಜ ಹೇಳದೇ ದೂರ ಉಳಿದುಕೊಂಡವನು ಹೆಚ್ಚು ಅಪಾಯಕಾರಿ' ಎಂದು ಹೇಳಿ ಹೋದರು.

ಹೌದು. ಇಂದಿನ ಡಿಜಿಟಲ್ ಕಾಲದಲ್ಲಿ ಕುಟುಂಬದ ಬಾಂಧವ್ಯ ಮತ್ತು ಸತ್ಯದ ನಡುವಿನ ಸಂಘರ್ಷ ತಾರಕಕ್ಕೇರಿದಂತಿದೆ. ಸಮಾಜದಲ್ಲಿ ಪಿತ್ರಾರ್ಜಿತ ಸಂಪತ್ತಿಗಾಗಿ ಸೋದರ ಸಂಬಂಧವನ್ನು ತೊರೆಯುವವರೇ ತುಂಬಿಕೊಂಡಿದ್ದಾರೆ. ಕೊಟ್ಟ ಮಾತಿಗೆ ತಪ್ಪಲಾರೆನು, ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬಂತಹ ವಚನ ಪ್ರಾಮಾಣಿಕತೆಯ ಸಂಕೇತವಾದ ನಾಲಗೆನಿಷ್ಠೆ ನಾಶವಾಗಿದೆ. ಎಲುಬಿಲ್ಲದ ನಾಲಗೆ ಹೇಗೆ ಬೇಕಾದರೂ ಹೊರಳಬಹುದೆಂದು ಕಾಗದಪತ್ರ, ಬರವಣಿಗೆ, ಸೀಲು ಸಹಿಗಳನ್ನು, ಎಷ್ಟೇ ಮೋಸ ನಡೆದರೂ ನಂಬುವುದು ಸಾಮಾನ್ಯವಾಗಿದೆ. ಮಾನ ಮರ್ಯಾದೆಗೂ ಸರ್ಟಿಫಿಕೇಟ್ ಬೇಕಾಗಿದೆ. ದುರಂತವೆಂದರೆ ಹೆಚ್ಚು ಜನರಿಗೆ ಹೆಚ್ಚು ವಂಚಿಸಿ ಹೆಚ್ಚು ಶ್ರೀಮಂತನಾದವನಿಗೆ ಈ ಸರ್ಟಿಫಿಕೇಟ್‌ಗಳು ಸಲೀಸಾಗಿ ಸಿಗುತ್ತವೆ. ನಿಜಕ್ಕೂ ನಮಗೆ ಬೇಕಾಗಿರುವುದು ಇಂಥ ತೋರಿಕೆಯ ಸದ್ಗುಣಗಳಲ್ಲ. ಕುಟುಂಬವನ್ನೂ ಸಮಾಜವನ್ನೂ ನಿರ್ವಂಚನೆಯಿಂದ ಆತುಕೊಳ್ಳುವ ಅಂತಃಕರಣ ನಮ್ಮ ಗುರುತಾಗಬೇಕು.

ಸತ್ಯದ ಕಡುಕಷ್ಟದ ಹಾದಿಯಲ್ಲಿ ನಡೆವವರು ವಿರಳ. ಅಂತಹವರಿಂದಲೇ ಸಮಾಜಕ್ಕೊಂದು ಬೆಳಕು, ಭರವಸೆ. ಒಂದೊಮ್ಮೆ ನೈತಿಕ ಅಪರಾಧವಾಗಿ ಕಾಣುತ್ತಿದ್ದ ಸುಳ್ಳು ಈಗ ಬಹುಜನರ ನಾಲಗೆಯ ನರ್ತನವಾಗಿದೆ. ಆದರೆ ಸುಳ್ಳು ಹೇಳುವವರಿಗಿಂತಲೂ ಸತ್ಯ ಹೇಳಲಾರದೇ ದೂರ ಉಳಿದವರಿಂದಲೇ ಮನುಷ್ಯ ಸಮಾಜಕ್ಕೆ ಹೆಚ್ಚು ಹಾನಿಯಾಗಿದೆ. ನಿಜವನ್ನು ಹೇಳಲೇಬೇಕಾದಾಗ ಸುಮ್ಮನಿರುವುದು ಆತ್ಮಘಾತುಕತನ. ಸತ್ಯದ ಸಾಕ್ಷಿಗೆ ಗೈರಾಗುವುದು ಸತ್ಯದ ವಿರುದ್ಧದ ಪಿತೂರಿಗೆ ಸಮಾನ. ಕನಿಷ್ಠ ಪಾಪಪ್ರಜ್ಞೆಯೂ ಇಲ್ಲದ ನಡವಳಿಕೆಯಿದು. ಅದರಿಂದ ಸಂಸಾರಕ್ಕೂ ಸಮಾಜಕ್ಕೂ ಕೇಡು. ವರ್ತಮಾನದ ಸಮಾಜಕ್ಕೆ ಸತ್ಯಸಂಜೀವಿನಿಯ ತುರ್ತು ಅವಶ್ಯಕತೆ ಇದೆ. ಸತ್ಯದ ಜೊತೆಗಿನ ಸಂಬಂಧ ಮಾತ್ರ ಉಳಿಯುತ್ತದೆ. ಸಂಪತ್ತಿನೊಂದಿಗಿನ ಬಾಂಧವ್ಯ ಮನುಷ್ಯನನ್ನು ಒಂಟಿಯಾಗಿಸುತ್ತದೆ.

ಪದಬಂಧ 6185


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ನೇರವಲ್ಲದ ನುಡಿ (5)
4.ಕಾಯಕವೇ ಕೈಲಾಸ ಎಂದು ನುಡಿದ ಶರಣರು (4)
6.ದೇಹದ ಒಂದು ಭಾಗ (2)
7.ಒಂದನೊಂದು ಅಗಲದೇ ಇರುವ ಸಂಬಂಧ (8)
10.ಬಸವಣ್ಣನವರ ವಚನಾಂಕಿತ (8)
13.ಕನಸು ಕಾಣುತ್ತಾ ತೋರಿದ ಬಲ (2)
14.ರುಚಿಕಟ್ಟಾದ ಅಡುಗೆಯನ್ನು ಹೀಗೆನ್ನಿ (4)
16.ನೀರಿನ ಅಲೆ ನೋಡಿದಾಗ ಈ ವಾದ್ಯ ನೆನಪಾದೀತೇ? (5)

ಮೇಲಿಂದ ಕೆಳಕ್ಕೆ

1.ನೆನಪಿನಿಂದ ಮಾಸದ ತಿಂಗಳು! (2)
2.ಬಣ್ಣನೆಯಲ್ಲಿರುವ ರಂಗು! (2)
3.ಆತುರದಿಂದ ಓಡುತ್ತಿರುವ ಕುದುರೆ (3)
4.ಈಕೆ ದುಡ್ಡಿಲ್ಲದವಳು (3)
5.ಎಲೆ ಅಡಿಕೆ ಚೀಲವಿಲ್ಲಿ ತಿರುವುಮುರುವಾಗಿದೆ (2)
6.ಕುರುಡ ಇಲ್ಲಿದ್ದಾನೆ (2)
7.ಈಕೆ ಹಿರಿಯ ಸಹೋದರಿ (2)
8.ಹುಟ್ಟು ಇಲ್ಲಿ ಉಲ್ಟಾಪಲ್ಟಾ ಆಗಿದೆ (3)
9.ಅಭಾವ ಕಾಲದಲ್ಲಿ ಬಂದಿರುವ ಅಕ್ಕನ ಗಂಡ (3)
10.ಗಂಡ ಹೆಂಡಿರ ಜಗಳದಲ್ಲಿ ಬಡವಾದ ಮಗು! (2)
11.ನೂರು ಸಾವಿರ (2)
12.ಅನಾಥ ಇಲ್ಲಿದ್ದಾನೆ (3)
13.ಧಾನ್ಯ ಸಂಗ್ರಹಿಸುವ ಸ್ಥಳ (3)
14.ನಗರದಲ್ಲಿ ಖರೀದಿಸಿದ ಆಭರಣ (2)
15.ಪಕ್ಷದ ಮೊದಲ ನೇ ದಿನ (2)



6184ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸ್ವಾವಲಂಬನೆ 3.ಪುಲ್ಲಿಂಗ 5.ತಗಡು 7.ಪುಳಕ 9.ಮನೆ 10.ಸಂದೂಕ 11.ಅತ್ತೆ 13.ಕಲಹ 15.ಸರಕು 17.ಗುಜರಿ 18.ವಿಕಟಕವಿ

ಮೇಲಿಂದ ಕೆಳಕ್ಕೆ: 1.ಸ್ವಾಗತ 2.ನೆನಪು 3.ಪುಸ್ತಕ 4.ಗದ್ಗದ 6.ಗರ್ಜನೆ 8.ಳವಕ 10.ಸಂಕುಲ 11.ಅಧರ 12.ಗುಡುಗು 13.ಕಸ್ತೂರಿ 14.ಹರವಿ 16.ಕುಲಾವಿ

ಸುಡೊಕು 6569

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2	1		5		8	4	
8			3		9			1
	4	3		1				7
	3	2				7		6
				7			9	
7	9							5
3	1		9				7	
	7			8		1	6	9
	6	9			1		3	

6568 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

6 ಅಕ್ಟೋಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಚತುರ್ದಶಿ ಗಂ. 12-24 ನಕ್ಷತ್ರ: ಪೂರ್ವಾಭಾದ್ರ ಗಂ. 6-16, ಉತ್ತರಾಭಾದ್ರ ಗಂ 28-02 ಯೋಗ: ವೃದ್ಧಿ ಗಂ. 13-14 ಕನ್ಯಾ ಮಾಸದ 19 ನೇ ದಿನ. ಮಳೆ ನಕ್ಷತ್ರ : ಹಸ್ತಾ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 09-00 ಸೂರ್ಯೋದಯ : 06-24 ಸೂರ್ಯಾಸ್ತ : 06-14 ಮುಸ್ಲಿಂ ದಿನಾಂಕ : 13 ರಬಿಯುಸ್ಸಾನಿ ಅದೃಷ್ಟ ಸಂಖ್ಯೆ : 2, 7

ಮೇಷ: ನೀವು ಆಡಿದ ಮಾತುಗಳು ನಿಮಗೆ ಮುಳ್ಳಾಗಲಿವೆ, ಆದ್ದರಿಂದ ಮಾತಿನಲ್ಲಿ ಹಿಡಿತವಿರಲಿ. ದಾಖಲೆ ಪತ್ರಗಳನ್ನು ಬರೆಸುವಾಗ ಸಂಖ್ಯೆ ಅಥವಾ ವಾಕ್ಯಗಳ ಬಗ್ಗೆ ಹೆಚ್ಚಿನ ಗಮನವಹಿಸಿ ಮತ್ತು ಪರಿಣತರ ಸಲಹೆಯನ್ನು ಕೇಳಿ.

ವೃಷಭ: ವೈದ್ಯರು ಅದರಲ್ಲೂ ನರ ರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ಬೇಜವಾಬ್ದಾರಿತನದಿಂದ ಪಾಪ ಸಂಗ್ರಹಣೆಯಾಗುವುದು. ಪ್ರತಿ ವರ್ಷ ಮಾಡುತ್ತಿದ್ದ ಧಾರ್ಮಿಕ ಕೆಲಸವನ್ನು ಮುಂದುವರಿಸುವ ಬಗ್ಗೆ ತೀರ್ಮಾನಿಸಿ.

ಮಿಥುನ: ಉದ್ವೇಗ ಹಾಗೂ ಕೆಲ ವೈಮನಸ್ಸುಗಳು ದೂರಾವಾಗುವುದು. ಹಣಕಾಸಿನ ಕೊರತೆ ಅಷ್ಟಾಗಿ ಕಾಡದು. ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆಯನ್ನು ಪೂರ್ಣಗೊಳಿಸುವ ಬಗ್ಗೆ ಮಗನಲ್ಲಿ ಪ್ರಸ್ತಾಪಿಸಿ.

ಕರ್ಕಾಟಕ: ಕುಟುಂಬದ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವಿರಿ. ಸ್ಥಾನ ಬದಲಾವಣೆಯಿಂದ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು. ವಿವಾಹದ ಭಾವನೆಗಳನ್ನು ತಂದೆ ತಾಯಿಯ ಬಳಿ ವ್ಯಕ್ತಪಡಿಸಲು ಸುಸಮಯವಾಗಿದೆ.

ಸಿಂಹ: ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ಪಡೆಯುವ ಕಾಲವಿದು. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಂತೆ ಆಗುತ್ತದೆ. ಹಿರಿಯರ ಆರೋಗ್ಯದ ಬಗ್ಗೆ ಜಾಗ್ರತೆವಹಿಸಿ.

ಕನ್ಯಾ: ಸೋಮಾರಿತನವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸ ಕಾರ್ಯಗಳಿಗೆ ಕೈಹಾಕಿದರೂ ಸಮಸ್ಯೆ ಆಗುವುದಿಲ್ಲ. ವೈಯಕ್ತಿಕ ವಿಚಾರಗಳತ್ತ ಗಮನ ಹರಿಸುವಿರಿ. ಭೂ ವ್ಯವಹಾರದಲ್ಲಿ ವಂಚನೆಯಾಗುವ ಸಾಧ್ಯತೆಗಳಿದೆ.

ತುಲಾ: ಉದ್ಯೋಗದಲ್ಲಿ ತೊಂದರೆಗಳಿರುವುದಿಲ್ಲ. ವ್ಯವಹಾರ ನಿಮಿತ್ತದ ಪ್ರಯಾಣದಲ್ಲಿ ನಯವಂಚಕರ ಬಗ್ಗೆ ಎಚ್ಚರವಹಿಸಿ. ಪಿತ್ತ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು. ಜಗನ್ಮಾತೆಯನ್ನು ಆರಾಧಿಸಿ.

ವೃಶ್ಚಿಕ: ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ಕೆಲಸಗಳು ಸರಾಗವಾಗಿ ನೆರವೇರುವುದು. ನಿಮ್ಮ ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ.


ಧನು: ಮನೆಯಲ್ಲಿ ಶಾಂತಿ ಹೋಮ ನಡೆಸಲು ಖರ್ಚಿನ ವಿಷಯ ಚರ್ಚೆಗೆ ಬರುವುದು. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಮನಸ್ಸಿನ ಚಂಚಲತೆಯಿಂದಾಗಿ ಕೆಲಸದಲ್ಲಿ ವಿಫಲರಾಗುವ ಸನ್ನಿವೇಶಗಳಿರುವುದು.

ಮಕರ: ದುರ್ಜನರ ಸಹವಾಸದಿಂದ ಅಪವಾದಗಳಿಗೆ ಒಳಗಾಗುವಿರಿ, ಆದ್ದರಿಂದ ಸಜ್ಜನರ ಸಹವಾಸವನ್ನು ಮಾಡಿರಿ. ಉದ್ಯೋಗಿಗಳಿಗೆ ವೃತ್ತಿಯು ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ.

ಕುಂಭ: ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳಲಿವೆ. ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜೊತೆಯಲ್ಲಿ ಅಧಿಕ ಲಾಭವೂ ದೊರಕಲಿದೆ. ನವಗ್ರಹ ಪೂಜೆಯಿಂದ ಶುಭ ವಾರ್ತೆ ಪಡೆಯುವಿರಿ.

ಮೀನ: ಸಾಲ ಮರುಪಾವತಿ ಬಗ್ಗೆ ಚಿಂತೆ ಉಂಟಾಗುತ್ತದೆ. ಪತ್ರಿಕೋದ್ಯಮದವರಿಗೆ ವೃತ್ತಿಯಲ್ಲಿ ನಾಯಕತ್ವದ ಅವಕಾಶ ಲಭ್ಯವಾಗುವುದು. ಸಂಜೆಯ ಸಮಯದಲ್ಲಿ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ, ಜಾಗ್ರತೆವಹಿಸಿ.

ಗುಂಡಣ್ಣ



ರಾಜ್ಯದಲ್ಲಿ ಮತ್ತಷ್ಟು ಹೂಡಿಕೆಗೆ ಚರ್ಚೆ

ಸಿ.ಎಂ ಭೇಟಿಯಾದ ಫಾಕ್ಸ್‌ಕಾನ್‌ನ ಭಾರತದ ಮುಖ್ಯಸ್ಥ

ಪ್ರಜಾವಾಣಿ ವಾರ್ತೆ



ಫಾಕ್ಸ್‌ಕಾನ್ ಕಂಪನಿಯ ಭಾರತದ ಮುಖ್ಯಸ್ಥ ರಾಬರ್ಟ್ ವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿದರು

ಬೆಂಗಳೂರು: ಐಫೋನ್ ಮತ್ತು ಅದರ ಬಿಡಿಭಾಗಗಳ ತಯಾರಿಕೆಗೆ ಹೆಸರಾಗಿರುವ ಫಾಕ್ಸ್‌ಕಾನ್ ಕಂಪನಿಯ ಭಾರತದ ಮುಖ್ಯಸ್ಥ ರಾಬರ್ಟ್ ವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಭಾನುವಾರ ಚರ್ಚೆ ನಡೆಸಿದರು.

ಭೇಟಿಯ ನಂತರ ಈ ಕುರಿತು ಮಾಹಿತಿ ನೀಡಿದ ಮುಖ್ಯಮಂತ್ರಿ, 'ಫಾಕ್ಸ್‌ಕಾನ್ ಕಂಪನಿ ದೇವನಹಳ್ಳಿ ಘಟಕದಲ್ಲಿ ಉತ್ಪಾದನಾ ಚಟುವಟಿಕೆ ಆರಂಭಿಸಿದೆ. ಘಟಕ ವಿಸ್ತರಣೆ, ಮತ್ತಷ್ಟು ಬಂಡವಾಳ ಹೂಡಿಕೆ ಕುರಿತು ಮಾತುಕತೆ ನಡೆಸಿದ್ದೇವೆ. ಕಂಪನಿಗೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ನೀಡಲಾಗುವುದು' ಎಂದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, 'ದೇವನಹಳ್ಳಿಯಲ್ಲಿರುವ ಘಟಕವು ಫಾಕ್ಸ್‌ಕಾನ್ ಕಂಪನಿಯ ಎರಡನೇ ಅತಿದೊಡ್ಡ ಘಟಕ. ₹22 ಸಾವಿರ ಕೋಟಿ ಹೂಡಿಕೆ ಮಾಡಲಾಗಿದೆ. ಆ್ಯಪಲ್ ಕಂಪನಿಗೆ ಐಫೋನ್ ಬಿಡಿಭಾಗಗಳನ್ನು ಜಾಗತಿಕ ಮಟ್ಟದಲ್ಲಿ ಪೂರೈಸುತ್ತದೆ. ದೇವನಹಳ್ಳಿಯಲ್ಲಿ ತಯಾರಾಗುವ ಉತ್ಪನ್ನಗಳನ್ನು ಹಲವು ದೇಶಗಳಿಗೆ ರಫ್ತು ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜು ಉಪಸ್ಥಿತರಿದ್ದರು.

ಗೃಹ ಸಾಲ: ಅವಧಿ ವಿಮೆ ಕಡ್ಡಾಯವೇ?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಗೃಹ ಸಾಲಕ್ಕೆ ಅರ್ಜಿ ಸಲ್ಲಿಸಿದಾಗ ಕೆಲವು ಬ್ಯಾಂಕ್‌ನವರು ಅವರಿಂದಲೇ ಕಡ್ಡಾಯವಾಗಿ ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್) ಖರೀದಿಸುವಂತೆ ಹೇಳುತ್ತಾರೆ. ಆದರೆ ಗೃಹಸಾಲ ಪಡೆಯಬೇಕಾದರೆ ಅವಧಿ ವಿಮೆ ಇರಲೇಬೇಕೇ? ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ನಿಯಮ ಈ ಬಗ್ಗೆ ಹೇಳುವುದೇನು? ಗೃಹಸಾಲ ಪಡೆಯುವಾಗ ಅವಧಿ ವಿಮೆ ಇಲ್ಲದಿದ್ದರೆ ಸಾಲದ ಅರ್ಜಿಯನ್ನು ತಿರಸ್ಕರಿಸುವ ಹಕ್ಕು ಬ್ಯಾಂಕ್‌ಗಳಿಗೆ ಇದೆಯೇ? ಈ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ.

ಆರ್‌ಬಿಐ ನಿಯಮ ಏನು?: ಗೃಹಸಾಲ ತೆಗೆದುಕೊಳ್ಳುವವರು ಅವಧಿ ವಿಮೆಯನ್ನು ಖರೀದಿಸಲೇಬೇಕು ಎಂದು ಆರ್‌ಬಿಐ ಎಲ್ಲೂ ಹೇಳುವುದಿಲ್ಲ ಅಥವಾ ಅಂತಹ ನಿಯಮ ಇಲ್ಲ. ವಾಸ್ತವದಲ್ಲಿ ಗೃಹಸಾಲಕ್ಕಾಗಿ ಅರ್ಜಿ ಸಲ್ಲಿಸುವವರಿಗೆ ವಿಮೆಯನ್ನೂ ಒಟ್ಟುಗೂಡಿಸಿ ಸಾಲ ಕೊಡುವ ಬ್ಯಾಂಕ್‌ಗಳ ಧೋರಣೆ ಸರಿಯಲ್ಲ ಎಂದು ಆರ್‌ಬಿಐ ಹೇಳಿದೆ. ಆ ಪ್ರಕಾರ ಬ್ಯಾಂಕ್‌ಗಳು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಗ್ರಾಹಕರಿಗೆ ನಿರ್ದಿಷ್ಟ ಕಂಪನಿಯ ವಿಮೆ ಅಥವಾ ಇನ್ಯಾವುದೇ ಹೂಡಿಕೆ ಉತ್ಪನ್ನ ಖರೀದಿಸುವಂತೆ ಒತ್ತಾಯಿಸುವಂತಿಲ್ಲ.

ಬ್ಯಾಂಕ್‌ಗಳ ಆಂತರಿಕ ನಿಯಮವೇ?: ಗೃಹಸಾಲ ಪಡೆಯುವವರು ಕಡ್ಡಾಯವಾಗಿ ಅವಧಿ ವಿಮೆ ಖರೀದಿಸಬೇಕು ಎಂದು ಯಾವುದೇ ಬ್ಯಾಂಕ್ ಆಂತರಿಕ ನಿಯಮ ಮಾಡುವಂತಿಲ್ಲ. ಒಂದೊಮ್ಮೆ ಯಾವುದಾದರೂ ಬ್ಯಾಂಕ್ ಪ್ರತಿನಿಧಿ ಇಂಥದ್ದೊಂದು ಆಂತರಿಕ ನಿಯಮವಿದೆ ಎಂದು ಹೇಳಿದರೆ ಅದು ಕಾನೂನು ಬಾಹಿರ. ಉದಾಹರಣೆಗೆ ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಸಾಲಕ್ಕೆ ಸಂಬಂಧಿಸಿದ ನಿಯಮಗಳಲ್ಲೂ ಈ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ಗೃಹಸಾಲ ಪಡೆಯುವ ವ್ಯಕ್ತಿ ಅವಧಿ ವಿಮೆ ಖರೀದಿಸುವುದು ಅವರ ಆಯ್ಕೆಗೆ ಬಿಟ್ಟದ್ದು, ಅದು ಕಡ್ಡಾಯವಲ್ಲ ಎಂಬ ಮಾಹಿತಿ ಅದರಲ್ಲಿದೆ. ಅಂದರೆ ಅವಧಿ ವಿಮೆ ಕೊಳ್ಳದಿದ್ದರೆ ಸಾಲ ಕೊಡುವುದಿಲ್ಲ ಎಂದು ಬ್ಯಾಂಕ್‌ಗಳು ಗ್ರಾಹಕನಿಗೆ ಒತ್ತಡ ಹೇರುವಂತಿಲ್ಲ.

ಏಕೆ ಒತ್ತಾಯ?: ಗೃಹಸಾಲದ ಜೊತೆ ತೆಗೆದುಕೊಳ್ಳುವ ಅವಧಿ ವಿಮೆ ಪಾಲಿಸಿಗಳಿಂದ ಬ್ಯಾಂಕ್‌ಗಳಿಗೆ ಲಾಭವಿದೆ. ಅವಧಿ ವಿಮೆ ಪಡೆದಾಗ ಪ್ರತಿ ವರ್ಷ ಕಂತು (ಪ್ರೀಮಿಯಂ) ಪಾವತಿಸುತ್ತಾ ಹೋಗುತ್ತೇವೆ. ಆದರೆ ಗೃಹ ಸಾಲದ ಜೊತೆಗೆ ಅವಧಿ ವಿಮೆ ಪಡೆಯುವಾಗ ಒಂದೇ ಬಾರಿಗೆ ದೊಡ್ಡ ಕಂತಿನ ಮೊತ್ತವನ್ನು ಬ್ಯಾಂಕ್‌ಗಳು ಪಡೆದುಕೊಳ್ಳುತ್ತವೆ. ಉದಾಹರಣೆಗೆ 35 ವರ್ಷ ವಯಸ್ಸಿನ ವ್ಯಕ್ತಿ ₹50 ಲಕ್ಷ ಮೊತ್ತದ ಗೃಹ ಸಾಲವನ್ನು 10 ವರ್ಷಗಳ ಅವಧಿಗೆ ಪಡೆದರೆ ಅದಕ್ಕೆ ಸುಮಾರು ₹1.5 ಲಕ್ಷದಿಂದ ₹2.5 ಲಕ್ಷದವರೆಗೆ ಅವಧಿ ವಿಮೆ ಕಂತನ್ನು ನಿಗದಿಪಡಿಸಲಾಗುತ್ತದೆ. ಬ್ಯಾಂಕ್‌ಗಳು ಇಂತಹ ಅವಧಿ ವಿಮೆಯನ್ನು ಮಾರಾಟ ಮಾಡುವುದರಿಂದ ಕಮಿಷನ್ ಪಡೆಯುವ ಕಾರಣ ಅವಧಿ ವಿಮೆ ಕಡ್ಡಾಯವಲ್ಲದಿದ್ದರೂ ಅದನ್ನು ಕೊಳ್ಳುವಂತೆ ಗ್ರಾಹಕರ ಮೇಲೆ ಒತ್ತಡ ಹೇರುತ್ತವೆ.

ಇದು ಅಗತ್ಯವಿಲ್ಲವೇ?: ಖಂಡಿತವಾಗಿಯೂ ಗೃಹ ಸಾಲ ಪಡೆಯುವವರಿಗೆ ಅವಧಿ ವಿಮೆ ಒಂದು ರೀತಿಯ ಆಪ್ತರಕ್ಷಕ. ಸಾಲ ಪಡೆದ ವ್ಯಕ್ತಿಯ ಜೀವಕ್ಕೆ ಏನಾದರೂ ತೊಂದರೆ ಆದರೆ ಅವಧಿ ವಿಮೆಯಿಂದ ಸಿಗುವ ದೊಡ್ಡ ಮೊತ್ತ ಬಳಸಿ ಗೃಹ ಸಾಲದ ಬಾಕಿ ಬಾಬ್ತನ್ನು ತೀರಿಸಬಹುದು. ಆದರೆ ಬ್ಯಾಂಕ್‌ಗಳು ಗೃಹ ಸಾಲದ ಜೊತೆಗೆ ಕೊಡುವ ಅವಧಿ ವಿಮೆ ಪಾಲಿಸಿಗಳು ಗ್ರಾಹಕನ ಅನುಕೂಲಕ್ಕೆ ತಕ್ಕಂತೆ ಇರುವುದಿಲ್ಲ. ಬ್ಯಾಂಕ್‌ಗಳು ಸಾಲದ ಜೊತೆಗೂಡಿಸಿ ಕೊಡುವ ಪಾಲಿಸಿಗಳಿಗೆ ಒಂದೇ ಬಾರಿಗೆ ದೊಡ್ಡ ಕಂತು ಕಟ್ಟಬೇಕಾಗುತ್ತದೆ. ಜೊತೆಗೆ ಕವರೇಜ್ ಮೊತ್ತ, ಕವರೇಜ್ ಅವಧಿ, ಅಥವಾ ಹೆಚ್ಚುವರಿ ಕವರೇಜ್‌ಗಳನ್ನು ನಿಗದಿ ಮಾಡಿಕೊಳ್ಳಲು ಗ್ರಾಹಕರಿಗೆ ಅವಕಾಶ ಇರುವುದಿಲ್ಲ. ಗ್ರಾಹಕರ ಒಟ್ಟು ಹಣಕಾಸಿನ ಸ್ಥಿತಿ ಅವಲೋಕಿಸಿ ಬ್ಯಾಂಕ್‌ಗಳು ಈ ಪಾಲಿಸಿ ನೀಡಿರುವುದಿಲ್ಲ. ಗೃಹ ಸಾಲದ ಜೊತೆಗೆ ಬ್ಯಾಂಕ್‌ಗಳು ನೀಡುವ ಪಾಲಿಸಿ ಪಡೆಯುವ ಬದಲು ಗ್ರಾಹಕರು ತಮ್ಮ ಆದಾಯ, ಆರ್ಥಿಕ ಸ್ಥಿತಿ ಲೆಕ್ಕಾಚಾರ ಮಾಡಿ ಪ್ರತ್ಯೇಕ ಅವಧಿ ವಿಮೆ ಖರೀದಿಸಬಹುದು.

ಹೀಗೆ ಮಾಡಿದಾಗ ಗೃಹ ಸಾಲ ಮರುಪಾವತಿಯ ನಂತರವೂ ವಿಮೆಯ ರಕ್ಷೆ ಉಳಿಸಿಕೊಳ್ಳಲು ಆಗುತ್ತದೆ. ಪ್ರತ್ಯೇಕವಾಗಿ ಪಡೆಯುವ ಅವಧಿ ವಿಮೆ ಪಾಲಿಸಿಗಳಲ್ಲಿ ಕಂತು ಕಡಿಮೆ ಇರುವ ಜೊತೆಗೆ ಅನುಕೂಲಗಳು ಸಹ ಹೆಚ್ಚಿಗೆ ಇರುತ್ತವೆ.

ಅವಧಿ ವಿಮೆ ಖರೀದಿಸಲೇಬೇಕು ಅಂದರೆ?

ಗೃಹ ಸಾಲದ ಜೊತೆಗೆ ಕಡ್ಡಾಯವಾಗಿ ಅವಧಿ ವಿಮೆ ಪಾಲಿಸಿ ಖರೀದಿಸಬೇಕು ಎಂದು ಬ್ಯಾಂಕ್‌ನ ಪ್ರತಿನಿಧಿ ಹೇಳಿದರೆ ಅದಕ್ಕೆ ಆರ್‌ಬಿಐನ ಸೂಕ್ತ ದಾಖಲೆ ನೀಡುವಂತೆ ಕೇಳಿ. ಬ್ಯಾಂಕ್‌ನ ಲೆಟರ್ ಹೆಡ್‌ನಲ್ಲಿ 'ಅವಧಿ ವಿಮೆ ಕೊಳ್ಳದಿದ್ದರೆ ನಿಮ್ಮ ಗೃಹಸಾಲವನ್ನು ತಡೆಹಿಡಿಯುತ್ತೇವೆ' ಎಂದು ವಿವರಿಸಿ ಬರೆದುಕೊಡುವಂತೆ ತಿಳಿಸಿ. ಈ ವಿಚಾರವನ್ನು ಬ್ಯಾಂಕ್‌ನ ವ್ಯವಸ್ಥಾಪಕರು ಮತ್ತು ನೋಡಲ್ ಅಧಿಕಾರಿಗೆ ಹೇಳಿ. ಬ್ಯಾಂಕ್‌ನ ಅಧಿಕಾರಿಗಳು ಸರಿಯಾಗಿ ಸ್ಪಂದಿಸದಿದ್ದರೆ ಆರ್‌ಬಿಐ ಒಂಬುಡ್ಸ್‌ಮನ್‌ಗೆ ದೂರು ನೀಡಿ. ಆರ್‌ಬಿಐ ಸಿಎಂಎಸ್ ಪೋರ್ಟಲ್‌ನಲ್ಲಿ ನಿಯಮ 8(1)(m)ರ ಅಡಿಯಲ್ಲಿ 'sale of third-party products in violation of guidelines' ಎಂದು ದೂರು ನೀಡಿ. ಇದಕ್ಕೆಲ್ಲಾ ಒಂದಷ್ಟು ಸಮಯ ಬೇಕಾಗುತ್ತದೆ ಎನ್ನುವುದು ಗೊತ್ತಿರಲಿ.

ಚಿಲಿ, ಪೆರು ಜೊತೆ ಶೀಘ್ರ ವ್ಯಾಪಾರ ಮಾತುಕತೆ



ನವದೆಹಲಿ (ಪಿಟಿಐ): ಭಾರತ ಹಾಗೂ ಚಿಲಿ, ಪೆರು ದೇಶಗಳ ನಡುವಿನ ಮುಂದಿನ ಸುತ್ತಿನ ಪ್ರಸ್ತಾವಿತ ವ್ಯಾಪಾರ ಒಪ್ಪಂದ ಮಾತುಕತೆಯು ಕ್ರಮವಾಗಿ ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಿನಲ್ಲಿ ನಡೆಯಲಿದೆ.

ಅಕ್ಟೋಬರ್ 27ರಿಂದ ಚಿಲಿ ದೇಶದೊಂದಿಗಿನ 5 ದಿನದ ಮಾತುಕತೆಯು ಸ್ಯಾಂಟಿಯಾಗೊದಲ್ಲಿ ಆರಂಭವಾಗಲಿದೆ. ನವೆಂಬರ್ 3ರಿಂದ ಪೆರು ಜೊತೆ ಮೂರು ದಿನಗಳ ಮಾತುಕತೆ ಲಿಮಾದಲ್ಲಿ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿಲಿ ಜೊತೆ ನಡೆಯಲಿರುವ ಮಾತುಕತೆಯು ಎರಡನೇ ಸುತ್ತಿನದ್ದು, ಪೆರು ಜೊತೆಗಿನ ಮಾತುಕತೆ ಎಂಟನೇ ಸುತ್ತಿನದ್ದಾಗಿದೆ. 2006ರಲ್ಲಿ ಭಾರತ ಮತ್ತು ಚಿಲಿ ಆದ್ಯತಾ ವ್ಯಾಪಾರ ಒಪ್ಪಂದವನ್ನು (ಪಿಟಿಎ) ಮಾಡಿಕೊಂಡಿದ್ದವು. ಇದೀಗ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ (ಸಿಇಪಿಎ) ಮುಂದಾಗಿವೆ.

2024–25ರ ಆರ್ಥಿಕ ವರ್ಷದಲ್ಲಿ ಭಾರತವು ಚಿಲಿಗೆ ₹10,200 ಕೋಟಿಯಷ್ಟು ಮೌಲ್ಯದ ಸರಕುಗಳನ್ನು ರಫ್ತು ಮಾಡಿತ್ತು. ಇದು 2023–24ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 2.46ರಷ್ಟು ಕಡಿಮೆ. ಕಳೆದ ಆರ್ಥಿಕ ವರ್ಷದಲ್ಲಿ ಆಮದು ಪ್ರಮಾಣ ಶೇ 72ರಷ್ಟು ಏರಿಕೆಯಾಗಿ, ₹23 ಸಾವಿರ ಕೋಟಿಯಷ್ಟಾಗಿತ್ತು.

ಪೆರುಗೆ ದೇಶದ ರಫ್ತು ಶೇ 9ರಷ್ಟು ಹೆಚ್ಚಳವಾಗಿದ್ದು, ₹8,870 ಕೋಟಿಯಷ್ಟಾಗಿತ್ತು. ಆಮದು ಪ್ರಮಾಣ ಶೇ 60ರಷ್ಟು ಏರಿಕೆಯಾಗಿ, ₹44,200 ಕೋಟಿಯಾಗಿದೆ.

ಚಟಾಕಿ ಸುದ್ದಿ

'ಚಿನ್ನ ವಿನಿಮಯ ಉತ್ಸವ'

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಕಂಪನಿ ಪ್ರಿನ್ಸ್ ಜುವೆಲ್ಲರಿ, 'ಚಿನ್ನ ವಿನಿಮಯ ಉತ್ಸವ' ಆರಂಭಿಸಿದೆ.

ಈ ಉತ್ಸವದಲ್ಲಿ ಗ್ರಾಹಕರು, ತಮ್ಮಲ್ಲಿರುವ ಹಳೆಯ ಮತ್ತು ಬಳಸದೆ ಇರುವ ಚಿನ್ನವನ್ನು ಹೊಸ ವಿನ್ಯಾಸದ ಚಿನ್ನದ ಆಭರಣದೊಂದಿಗೆ ಬದಲಾಯಿಸಿಕೊಳ್ಳಬಹುದು. ಈ ಯೋಜನೆ ಸೀಮಿತ ಅವಧಿಗೆ ಇರುತ್ತದೆ ಎಂದು ಕಂಪನಿ ತಿಳಿಸಿದೆ.

ಈ ಯೋಜನೆಯ ಅಡಿ ಹಳೆಯ ಚಿನ್ನಾಭರಣ ಬದಲಾಯಿಸಿಕೊಂಡರೆ ಪ್ರತಿ ಗ್ರಾಂ ಗೆ ₹300ಕ್ಕೂ ಹೆಚ್ಚು ಪ್ರಯೋಜನ ಸಿಗಲಿದೆ. ಪ್ರತಿ 8 ಗ್ರಾಂ ಚಿನ್ನ ಬದಲಾಯಿಸಿಕೊಂಡರೆ ₹4,800ವರೆಗೆ ಉಳಿತಾಯ ಮಾಡಬಹುದಾಗಿದೆ ಎಂದು ತಿಳಿಸಿದೆ.

ಅರಟ್ಟೈ: 75 ಲಕ್ಷ ಡೌನ್‌ಲೋಡ್

ನವದೆಹಲಿ (ಪಿಟಿಐ): ಜೋಹೊ ಕಂಪನಿಯು ಅಭಿವೃದ್ಧಿಪಡಿಸಿದ ಅರಟ್ಟೈ ಆ್ಯಪ್‌ಅನ್ನು ಶುಕ್ರವಾರದಿಂದ ಈಚೆಗೆ ಒಟ್ಟು 75 ಲಕ್ಷ ಮಂದಿ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಜನರು ಈಚಿನ ದಿನಗಳಲ್ಲಿ ಸ್ಥಳೀಯ ಆ್ಯಪ್ ಒಂದನ್ನು ಬಹಳ ದೊಡ್ಡ ಸಂಖ್ಯೆಯಲ್ಲಿ ಡೌನ್‌ಲೋಡ್ ಮಾಡಿಕೊಂಡ ನಿದರ್ಶನಗಳಲ್ಲಿ ಇದೂ ಒಂದಾಗಿದೆ.

ಭಾರತದಲ್ಲೇ ಅಭಿವೃದ್ಧಿ ಆಗಿರುವ ಸಂದೇಶ ರವಾನೆ ಆ್ಯಪ್ ಬಳಸುವಂತೆ ಕೆಲವು ಸಚಿವರು ಕರೆ ನೀಡಿರುವ ಸಂದರ್ಭದಲ್ಲಿ ಇಷ್ಟು ಸಂಖ್ಯೆಯಲ್ಲಿ ಈ ಆ್ಯಪ್ ಡೌನ್‌ಲೋಡ್ ಆಗಿದೆ.

ಗೂಗಲ್‌ನ ಪ್ಲೇಸ್ಟೋರ್ ಹಾಗೂ ಆ್ಯಪಲ್‌ನ ಆ್ಯಪ್ ಸ್ಟೋರ್ ಮೂಲಕ ಅಕ್ಟೋಬರ್ 3ರವರೆಗೆ ಒಟ್ಟು 75 ಲಕ್ಷ ಮಂದಿ ಇದನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಎಂದು ಕಂಪನಿಯು ತಿಳಿಸಿದೆ.

ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಪೀಯೂಷ್ ಗೋಯಲ್ ಮತ್ತು ಧರ್ಮೇಂದ್ರ ಪ್ರಧಾನ್ ಅವರು ಈ ಆ್ಯಪ್‌ಅನ್ನು ಬಹಿರಂಗವಾಗಿ ಬೆಂಬಲಿಸಿ ಮಾತನಾಡಿದ್ದಾರೆ. ಇದಾದ ನಂತರದಲ್ಲಿ ಈ ಆ್ಯಪ್‌ನ ಬಳಕೆ ಹೆಚ್ಚಾಗಿದೆ. ಈ 'ಸ್ವದೇಶಿ' ಆ್ಯಪ್‌ಅನ್ನು ವಾಟ್ಸ್‌ಆ್ಯಪ್‌ಗೆ ಪರ್ಯಾಯ ಎಂದು ಕಾಣಲಾಗಿದೆ.

ಬೆಂಗಳೂರು: ಮನೆ ಬೆಲೆ ಶೇ 10ರಷ್ಟು ಏರಿಕೆ

ಅನರಾಕ್ ನೀಡಿರುವ ಅಂಕಿ–ಅಂಶ, ದೆಹಲಿಯಲ್ಲಿ ಬೆಲೆ ಏರಿಕೆ ಹೆಚ್ಚು



ನವದೆಹಲಿ (ಪಿಟಿಐ): ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಬೆಂಗಳೂರಿನಲ್ಲಿ ವಸತಿ ಆಸ್ತಿಗಳ ಬೆಲೆಯು ವಾರ್ಷಿಕ ಶೇಕಡ 10ರಷ್ಟು ಹೆಚ್ಚಳ ಕಂಡಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಸಿದ್ಧಪಡಿಸಿರುವ ಅಂಕಿ–ಅಂಶಗಳು ಹೇಳಿವೆ.

ಈ ಅವಧಿಯಲ್ಲಿ ಡೆವಲಪರ್‌ಗಳಿಂದ ನೇರವಾಗಿ ಆಗುವ ಖರೀದಿಗಳಲ್ಲಿ (ಪ್ರಾಥಮಿಕ ಮಾರುಕಟ್ಟೆ) ಬೆಲೆಯು ಈ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಚದರ ಅಡಿ ಬೆಲೆಯು ₹8,100 ಇದ್ದಿದ್ದು ಈ ಬಾರಿ ₹8,870ಕ್ಕೆ ಹೆಚ್ಚಳ ಆಗಿದೆ ಎಂದು ಅದು ಹೇಳಿದೆ.

ದೆಹಲಿ – ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ದೆಹಲಿ–ಎನ್‌ಸಿಆರ್) ವಸತಿ ಆಸ್ತಿಗಳ ಬೆಲೆಯು ಇದೇ ಅವಧಿಯಲ್ಲಿ ಶೇ 24ರಷ್ಟು ಏರಿಕೆ ಆಗಿದೆ. ಬೇಡಿಕೆಯಲ್ಲಿ ಹೆಚ್ಚಳ, ಅದರಲ್ಲೂ ಮುಖ್ಯವಾಗಿ ಐಷಾರಾಮಿ ವರ್ಗದ ಮನೆಗಳಿಗೆ ಬೇಡಿಕೆ ಜಾಸ್ತಿ ಆಗಿದ್ದುದು ಈ ಏರಿಕೆಗೆ ಕಾರಣ ಎಂದು ಅನರಾಕ್ ಹೇಳಿದೆ.

ಹಿಂದಿನ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ವಸತಿ ಆಸ್ತಿಗಳ ಸರಾಸರಿ ಬೆಲೆಯು ಚದರ ಅಡಿಗೆ ₹7,200ರಷ್ಟು ಇತ್ತು. ಇದು ಈ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ₹8,900ಕ್ಕೆ ತಲುಪಿದೆ. ಗುರುಗ್ರಾಮ, ನೊಯಿಡಾ, ಗ್ರೇಟರ್ ನೊಯಿಡಾ, ದೆಹಲಿ ಮತ್ತು ಗಾಜಿಯಾಬಾದ್ ಪ್ರದೇಶಗಳು ದೆಹಲಿ–ಎನ್‌ಸಿಆರ್‌ನಲ್ಲಿ ಪ್ರಮುಖ ವಸತಿ ಮಾರುಕಟ್ಟೆಗಳಾಗಿವೆ.

ದೇಶದ ಏಳು ಪ್ರಮುಖ ನಗರಗಳನ್ನು ಒಟ್ಟಾರೆಯಾಗಿ ಪರಿಗಣಿಸಿದಾಗ ವಸತಿ ಆಸ್ತಿಗಳ ಬೆಲೆಯು ಶೇ 9ರಷ್ಟು ಹೆಚ್ಚಳ ಕಂಡಿದೆ ಎಂದು ಅನರಾಕ್ ಹೇಳಿದೆ. ಏಳು ನಗರಗಳ ಪೈಕಿ ಅತಿಹೆಚ್ಚಿನ (ಶೇ 24ರಷ್ಟು) ಪ್ರಮಾಣದ ಬೆಲೆ ಏರಿಕೆ ಆಗಿರುವುದು ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ.

'ಗುಣಮಟ್ಟದ ವಸತಿ ಆಸ್ತಿಗಳಿಗೆ ಬೇಡಿಕೆಯು ಸ್ಥಿರವಾಗಿ ಇರುವುದನ್ನು ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿನ ಬೆಲೆ ಏರಿಕೆಯು ಹೇಳುತ್ತಿದೆ' ಎಂದು ಕ್ರಿಸುಮಿ ಕಾರ್ಪೊರೇಷನ್‌ನ ಅಧ್ಯಕ್ಷ ಅಶೋಕ್ ಕಪೂರ್ ಹೇಳಿದ್ದಾರೆ.

ಅನರಾಕ್ ನೀಡಿರುವ ಅಂಕಿ–ಅಂಶಗಳ ಪ್ರಕಾರ, ಏಪ್ರಿಲ್–ಜೂನ್ ಅವಧಿಗೆ ಹೋಲಿಸಿದರೆ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಬೆಲೆಯು ಏಳು ನಗರಗಳಲ್ಲಿ ಶೇ 1ರಿಂದ ಶೇ 3ರವರೆಗೆ ಏರಿಕೆ ಆಗಿದೆ.

ಬೆಲೆ ಹೆಚ್ಚಳದ ವಿವರ

ಎಲ್ಲಿ	ಎಷ್ಟು ಹೆಚ್ಚಳ?
ಮುಂಬೈ	6%
ಪುಣೆ	4%
ಹೈದರಾಬಾದ್	8%
ಚೆನ್ನೈ	5%
ಕೋಲ್ಕತ್ತ	6%

(ಹಿಂದಿನ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಿಂದ ಈ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯವರೆಗೆ ಆಗಿರುವ ಬೆಲೆ ಏರಿಕೆ)

ಕೆಮ್ಮಿನ ಸಿರಪ್; ಕೆಎಂಸಿ-ಆರ್‌ಐ ಆಸ್ಪತ್ರೆಯಲ್ಲಿ ನಿರ್ಬಂಧ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳು ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ, ಮುಂಜಾಗ್ರತೆಯಾಗಿ ಇಲ್ಲಿನ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆಯಲ್ಲಿ ಮಕ್ಕಳಿಗೆ ಸಿರಪ್ ನೀಡುವುದನ್ನು ನಿಲ್ಲಿಸಲಾಗಿದೆ.

ಈ ಕುರಿತು ಆಸ್ಪತ್ರೆಯ ಆಡಳಿತ ಮಂಡಳಿ ಮಕ್ಕಳ ವಿಭಾಗದ ವೈದ್ಯರಿಗೆ ಸೂಚನೆ ನೀಡಿದೆ. ಯಾವುದೇ ಕಂಪನಿಯ ಸಿರಪ್ ಅನ್ನು ಎರಡು ವರ್ಷದ ಒಳಗಿನ ಮಕ್ಕಳಿಗೆ ನೀಡಬಾರದು ಎಂದು ತಿಳಿಸಿದೆ.

'ಸಿರಪ್ ಸೇವನೆಯಿಂದ ಮಕ್ಕಳಿಗೆ ವ್ಯತಿರಿಕ್ತ ಪರಿಣಾಮ ಉಂಟಾದ ಬಗ್ಗೆ ಪ್ರಕರಣ ದಾಖಲಾಗಿಲ್ಲ. ಮುಂಜಾಗ್ರತೆಯಾಗಿ ನಾವು ಸಿರಪ್ ನೀಡುತ್ತಿಲ್ಲ. ಸದ್ಯ ಮಾತ್ರೆಗಳನ್ನಷ್ಟೇ ನೀಡುವಂತೆ ಮಕ್ಕಳ ತಜ್ಞರಿಗೆ ತಿಳಿಸಲಾಗಿದೆ' ಎಂದು ಕೆಎಂಸಿ–ಆರ್‌ಐ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಈಶ್ವರ ಹಸಬಿ ತಿಳಿಸಿದರು.

'ಮಕ್ಕಳ ಸಾವಿಗೆ ಕಾರಣವಾಗಿದೆ ಎನ್ನಲಾದ ಕೋಲ್ಡ್ರಿಫ್ ಸಿರಪ್ ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಕೆ ಆಗುತ್ತಿಲ್ಲ. ಖಾಸಗಿ ಔಷಧ ಅಂಗಡಿಗಳಲ್ಲಿ ಮಾರಾಟ ಮಾಡಲಾಗುತ್ತಿದೆಯೇ ಎಂದೂ ಪರಿಶೀಲನೆ ನಡೆಸಲಾಗಿದ್ದು, ಅಲ್ಲಿಯೂ ಆ ಸಿರಪ್ ಮಾರಾಟವಾಗುತ್ತಿಲ್ಲ' ಎಂದು ಧಾರವಾಡ ಜಿಲ್ಲಾ ಔಷಧ ನಿಯಂತ್ರಣಾಧಿಕಾರಿ ಸಂಜಯ್ ಮುದಗಲ್ ಹೇಳಿದರು.

'ಶೀತ, ಜ್ವರ, ಕೆಮ್ಮಿನಿಂದ ಬಳಲುತ್ತಿರುವ ಮಕ್ಕಳನ್ನು ನಗರದ ಕ್ಲಿನಿಕ್, ಖಾಸಗಿ, ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುವ ಪಾಲಕರು, ಸಿರಪ್ ಬದಲು ಮಾತ್ರೆ ನೀಡುವಂತೆ ವಿನಂತಿಸುತ್ತಿದ್ದಾರೆ. ವಯಸ್ಕರು ಸಹ ಸಿರಪ್ ಸೇವಿಸಲು ಭಯ ಪಡುತ್ತಿದ್ದಾರೆ' ಎಂದು ವೈದ್ಯರೊಬ್ಬರು ಹೇಳಿದರು.



ಮಕ್ಕಳಿಗೆ ನೀಡುವ ಕೆಮ್ಮಿನ ಸಿರಪ್ ಕುರಿತು ಆರೋಗ್ಯ ಇಲಾಖೆಯಿಂದ ಆದೇಶ ಬಂದಿಲ್ಲ. ಕೆಲ ಆಸ್ಪತ್ರೆಗಳು ಸ್ವಯಂಪ್ರೇರಿತವಾಗಿ ಮಕ್ಕಳಿಗೆ ಸಿರಪ್ ಕೊಡುವುದನ್ನು ನಿಲ್ಲಿಸಿವೆ

ಡಾ.ಎಸ್.ಎಂ. ಹೊನಕೇರಿ, ಜಿಲ್ಲಾ ಆರೋಗ್ಯಾಧಿಕಾರಿ, ಧಾರವಾಡ

ಸರ್ಕಾರಿ ವೈದ್ಯ ಸೆರೆ: ಕಂಪನಿ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'ಅನುಮತಿಸಿದ ಮಿತಿಗಿಂತ ಅಧಿಕ ಪ್ರಮಾಣದಲ್ಲಿ ಅಪಾಯಕಾರಿ ದ್ರಾವಣ ಇರುವ ಕೆಮ್ಮಿನ ಸಿರಪ್ ಅನ್ನು ಶಿಫಾರಸು ಮಾಡಿದ್ದರು ಎಂಬ ಆರೋಪಗಳಿಗೆ ಸಂಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಡಾ.ಪ್ರವೀಣ ವಿರುದ್ಧ ಎಫ್‌ಐಆರ್ ದಾಖಲಾದ ಬಳಿಕ, ಅವರನ್ನು ಛಿಂದ್ವಾರದ ರಾಜಪಾಲ್ ಚೌಕ್‌ನಲ್ಲಿ ಶನಿವಾರ ತಡರಾತ್ರಿ ಬಂಧಿಸಲಾಯಿತು' ಎಂದೂ ತಿಳಿಸಿದ್ದಾರೆ. ಇದರ ಬೆನ್ನಲ್ಲೇ, ಡಾ.ಪ್ರವೀಣ ಅವರನ್ನು ಅಮಾನತುಗೊಳಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಡಾ.ಪ್ರವೀಣ ಹಾಗೂ ಸ್ರೇಸನ್ ಫಾರ್ಮಾಸ್ಯುಟಿಕಲ್ ವಿರುದ್ಧ ಬಿಎನ್‌ಎಸ್ ಸೆಕ್ಷನ್ 278 (ಔಷಧಗಳ ಕಲಬೆರಕೆ), ಸೆಕ್ಷನ್ 105 (ಉದ್ದೇಶಿತವಲ್ಲದ ಹತ್ಯೆ) ಅಡಿ ಪ್ರಕರಣ ದಾಖಲಿಸಲಾಗಿದ್ದು, ಆರೋಪಗಳು ಸಾಬೀತಾದಲ್ಲಿ ಕ್ರಮವಾಗಿ ಒಂದು ವರ್ಷ ಹಾಗೂ ಗರಿಷ್ಠ 10 ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹266-625
ದ್ವಿತಳಿ (ಬಿ.ವಿ)	₹533-771

ಭಾರತಕ್ಕೆ ಕಚ್ಚಾ ತೈಲ ಪೂರೈಕೆ: ರಷ್ಯಾ ನಂ.1

ನವದೆಹಲಿ (ಪಿಟಿಐ): ಭಾರತಕ್ಕೆ ಕಚ್ಚಾ ತೈಲ ಪೂರೈಸುವ ರಾಷ್ಟ್ರಗಳ ಸಾಲಿನಲ್ಲಿ ರಷ್ಯಾ ಮುಂದಿನ ದಿನಗಳಲ್ಲಿಯೂ ಮೊದಲ ಸ್ಥಾನದಲ್ಲಿ ಇರಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ರಷ್ಯಾದಿಂದ ಕಚ್ಚಾ ತೈಲ ಆಮದು ಪ್ರಮಾಣ ಸ್ವಲ್ಪ ಕಡಿಮೆ ಆಗಿದೆ. ರಷ್ಯಾದಿಂದ ತೈಲ ಖರೀದಿಸುವುದರ ವಿಚಾರವಾಗಿ ಅಮೆರಿಕ ಹೇರಿರುವ ಒತ್ತಡದ ನಡುವೆಯೂ ದೇಶದ ಒಟ್ಟು ತೈಲ ಖರೀದಿಯಲ್ಲಿ ರಷ್ಯಾದ ಪಾಲು ಮೂರನೇ ಒಂದು ಭಾಗದಷ್ಟಿದೆ.

ಜಾಗತಿಕ ವ್ಯಾಪಾರ ವಿಶ್ಲೇಷಣಾ ಸಂಸ್ಥೆ ಕೆಪ್ಲರ್ ಪ್ರಕಾರ, ಸೆಪ್ಟೆಂಬರ್‌ನಲ್ಲಿ ಪ್ರತಿ ದಿನ ಅಂದಾಜು 47 ಲಕ್ಷ ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ಭಾರತ ಖರೀದಿಸಿದೆ. ರಷ್ಯಾದಿಂದ 16 ಲಕ್ಷ ಬ್ಯಾರೆಲ್ ಖರೀದಿಸಿದೆ. ಇದು ಒಟ್ಟು ಖರೀದಿಯಲ್ಲಿ ಶೇ 34ರಷ್ಟಾಗಿದೆ. ಇರಾಕ್‌ನಿಂದ 8.81 ಲಕ್ಷ ಬ್ಯಾರೆಲ್, ಸೌದಿ ಅರೇಬಿಯಾ 6.03 ಲಕ್ಷ ಬ್ಯಾರೆಲ್, ಯುಎಇಯಿಂದ 5.94 ಲಕ್ಷ ಬ್ಯಾರೆಲ್ ಮತ್ತು ಅಮೆರಿಕದಿಂದ ನಿತ್ಯ 2.06 ಲಕ್ಷ ಬ್ಯಾರೆಲ್ ಖರೀದಿಸುತ್ತಿದೆ.

2022ರಲ್ಲಿ ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ಬಳಿಕ ಭಾರತವು ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುತ್ತಿದೆ. ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸುವ ಮೊದಲು ಭಾರತವು ರಷ್ಯಾದಿಂದ ಖರೀದಿಸುವ ತೈಲದ ಪ್ರಮಾಣವು ಒಟ್ಟು ಖರೀದಿಯ ಶೇ 1ರಷ್ಟು ಮಾತ್ರ ಆಗಿತ್ತು. ಅದು ಈಗ ಶೇ 40ಕ್ಕೆ ಹೆಚ್ಚಿದೆ.

ಕಚ್ಚಾ ತೈಲ ಉತ್ಪಾದನೆ ಹೆಚ್ಚಳಕ್ಕೆ ನಿರ್ಧಾರ



ವಿಯೆನ್ನಾ (ಎಎಫ್‌ಪಿ): ಕಚ್ಚಾ ತೈಲ ಉತ್ಪಾದನೆಯನ್ನು ಪ್ರತಿನಿತ್ಯ 1.37 ಲಕ್ಷ ಬ್ಯಾರೆಲ್‌ನಷ್ಟು ಹೆಚ್ಚಿಸಲು ಒಪೆಕ್ + ಒಕ್ಕೂಟದ ಎಂಟು ರಾಷ್ಟ್ರಗಳು ಭಾನುವಾರ ನಡೆದ ಸಭೆಯಲ್ಲಿ ನಿರ್ಧರಿಸಿವೆ. ನವೆಂಬರ್‌ನಲ್ಲಿ ಈ ಹೆಚ್ಚಳ ಆಗಲಿದೆ.

ಒಪೆಕ್ + ಒಕ್ಕೂಟದ ಸದಸ್ಯ ರಾಷ್ಟ್ರಗಳಾದ ಸೌದಿ ಅರೇಬಿಯಾ, ರಷ್ಯಾ ಸೇರಿ ಆರು ರಾಷ್ಟ್ರಗಳು ಉತ್ಪಾದನೆ ಹೆಚ್ಚು ಮಾಡಲು ತೀರ್ಮಾನಿಸಿವೆ. ಮಾರುಕಟ್ಟೆಯಲ್ಲಿ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳುವ ಗುರಿಯೊಂದಿಗೆ ಉತ್ಪಾದನೆ ಹೆಚ್ಚಿಸುವ ತೀರ್ಮಾನ ತೆಗೆದುಕೊಂಡಿವೆ.

ಮಧ್ಯ ಪ್ರದೇಶ: ಮೂತ್ರಪಿಂಡ ಸಮಸ್ಯೆಯಿಂದ ಇಬ್ಬರು ಮಕ್ಕಳು ಸಾವು

ಬೆತುಲ್, ಮಧ್ಯಪ್ರದೇಶ (ಪಿಟಿಐ): ಇಲ್ಲಿನ ಬೆತುಲ್ ಜಿಲ್ಲೆಯ ಅಮ್ಲಾ ಬ್ಲಾಕ್‌ನಲ್ಲಿ ಇಬ್ಬರು ಮಕ್ಕಳು ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನಿಂದ ಸೇವಿಸಿದ ಬಳಿಕ ಮೃತಪಟ್ಟಿದ್ದಾರೆ.

ಪರೀಕ್ಷೆ ವೇಳೆ ಡೈಇಥಿಲೀನ್ ಗ್ಲೈಕೋಲ್ (ಡಿಇಜಿ) ಮಕ್ಕಳ ದೇಹದಲ್ಲಿರುವುದು ಕಂಡುಬಂದಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮೃತರನ್ನು ಜಿಲ್ಲೆಯ ಕಲ್ಮೇಶ್ವರ ಗ್ರಾಮದ ಕಮಲೇಶ್ ಅವರ ಮಗ ಕಬೀರ್ (4) ಜಮುನ್ ಬಿಛುನಾ ಗ್ರಾಮದ ಎರಡೂವರೆ ವರ್ಷದ ಗರ್ಮಿತ್ ಸಿಂಗ್ ಎಂದು ಗುರುತಿಸಲಾಗಿದೆ ಎಂದು ಆಮ್ಲಾ ಬ್ಲಾಕ್‌ನ ವೈದ್ಯಕೀಯ ಅಧಿಕಾರಿ ಡಾ. ಅಶೋಕ್ ನರ್ವಾರೆ ತಿಳಿಸಿದ್ದಾರೆ.

'ಮಕ್ಕಳ ಸ್ಥಿತಿ ಗಂಭೀರವಾದ ಬಳಿಕ ಛಿಂದ್ವಾರಾ ಜಿಲ್ಲೆ ಸಮೀಪದಲ್ಲಿರುವ ಪರಾಸಿಯಾದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಕ್ಕಳು ಸಿರಪ್ ಸೇವನೆಯಿಂದಲೇ ಮೃತಪಟ್ಟಿದ್ದಾರೆ ಎಂಬುದು ಖಚಿತಪಟ್ಟಿಲ್ಲ. ಈ ಕುರಿತು ವಿಸ್ತೃತ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ' ಎಂದು ಡಾ. ನರ್ವಾರೆ ಹೇಳಿದ್ದಾರೆ.

ಇಬ್ಬರು ಮಕ್ಕಳ ಮಕ್ಕಳ ಮೂತ್ರಪಿಂಡದಲ್ಲಿ ಸಮಸ್ಯೆ, ಕಿಬ್ಬೊಟ್ಟೆಯಲ್ಲಿ ಊತ ಕಾಣಿಸಿಕೊಂಡಿತು. ತಕ್ಷಣವೇ ಆ ಮಕ್ಕಳನ್ನು ಬೆತುಲ್‌ನಿಂದ ಭೋಪಾಲ್‌ಗೆ ಕರೆದೊಯ್ಯಲಾಗಿತ್ತು. ಮರಣೋತ್ತರ ಪರೀಕ್ಷೆ ನಡೆಸಿಲ್ಲ. ಆದರೆ, ಮೂತ್ರಪಿಂಡದಲ್ಲಿ ಸಮಸ್ಯೆಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಮುಖ್ಯ ಆರೋಗ್ಯಾಧಿಕಾರಿಗೆ ವರದಿ ಸಲ್ಲಿಸಲಾಗಿದೆ' ಎಂದು ತಿಳಿಸಿದ್ದಾರೆ.

ನೇಪಾಳದಲ್ಲಿ ಪ್ರವಾಹ: 51 ಜನ ಸಾವು

ಕಠ್ಮಂಡು / ನವದೆಹಲಿ (ಪಿಟಿಐ): ಭಾರಿ ಮಳೆಯಿಂದ ನೇಪಾಳದಲ್ಲಿ ಸಂಭವಿಸಿದ ಭೂಕುಸಿತ ಮತ್ತು ಪ್ರವಾಹದ ಪರಿಣಾಮ 51 ಮಂದಿ ಮೃತಪಟ್ಟಿದ್ದಾರೆ.


ಶುಕ್ರವಾರ ರಾತ್ರಿಯಿಂದ ಪೂರ್ವ ನೇಪಾಳದ ಹಲವೆಡೆ ನಿರಂತರವಾಗಿ ಮಳೆ ಸುರಿಯುತ್ತಿದೆ. ಶನಿವಾರ ರಾತ್ರಿ ಸಂಭವಿಸಿದ ಅವಘಡಗಳಲ್ಲಿ ಕೋಶಿ ಪ್ರಾಂತ್ಯದ ಇಲಾಮ್ ಜಿಲ್ಲೆಯೊಂದರಲ್ಲೇ 37 ಮಂದಿ ಮೃತಪಟ್ಟಿದ್ದಾರೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಪಂಚತಾರ ಜಿಲ್ಲೆಯಲ್ಲಿ ಭೂಕುಸಿತದಿಂದಾಗಿ ಒಬ್ಬರು ಮೃತಪಟ್ಟಿದ್ದಾರೆ. ಖೋಟಂಗ್‌ನಲ್ಲಿ ಒಬ್ಬರು ಮತ್ತು ಉದಯಪುರದಲ್ಲಿ ಇಬ್ಬರು ಪ್ರವಾಹದಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸುವಾ ಜಿಲ್ಲೆಯಲ್ಲಿ ನದಿಯಲ್ಲಿ ಕೊಚ್ಚಿಹೋಗಿ ನಾಲ್ಕು ಮಂದಿ ನಾಪತ್ತೆಯಾಗಿದ್ದಾರೆ. ಪಂಚತಾರಾ ಜಿಲ್ಲೆಯಲ್ಲೂ ವ್ಯಕ್ತಿಯೊಬ್ಬರು ಅವಶೇಷಗಳಡಿ ಸಿಲುಕಿದ್ದಾರೆ. ಇಲಾಮ್, ಬಾರಾ ಮತ್ತು ಕಠ್ಮಂಡುವಿನಲ್ಲಿಯೂ ತಲಾ ಒಬ್ಬರು ನಾಪತ್ತೆಯಾಗಿದ್ದಾರೆ. ಗರ್ಭಿಣಿ ಸೇರಿದಂತೆ ನಾಲ್ವರನ್ನು ಭದ್ರತಾ ಸಿಬ್ಬಂದಿ ಹೆಲಿಕಾಪ್ಟರ್ ಮೂಲಕ ರಕ್ಷಣೆ ಮಾಡಿ, ಆಸ್ಪತ್ರೆಗೆ ದಾಖಲಿಸಿದ್ದಾರೆ. ಕೋಶಿ, ಮಧೆಸ್, ಬಾಗಮತಿ, ಗಂಡಕಿ ಮತ್ತು ಲುಂಬಿನಿ ಪ್ರಾಂತ್ಯಗಳಲ್ಲಿ ಮುಂಗಾರು ಚುರುಕಾಗಿದೆ. ಬಾಗಮತಿ ಮತ್ತು ಪೂರ್ವ ರಾಪ್ತಿ ನದಿಭಾಗದ ಪ್ರದೇಶಗಳಿಗೆ 'ರೆಡ್ ಅಲರ್ಟ್' ಘೋಷಣೆಯಾಗಿದೆ.

ಮುಂದಿನ ಮೂರು ದಿನ ಭಾರಿ ಮಳೆ ಮತ್ತು ಭೂಕುಸಿತ ಸಾಧ್ಯತೆಯಿರುವ ಕಾರಣ ಕಠ್ಮಂಡುವಿಗೆ ವಾಹನ ಪ್ರವೇಶ ಮತ್ತು ನಿರ್ಗಮನವನ್ನು ಶನಿವಾರದಿಂದ ಸೋಮವಾರದವರೆಗೆ ನಿರ್ಬಂಧಿಸಲಾಗಿದೆ. ನೇಪಾಳದೊಳಗಿನ ಪ್ರಾದೇಶಿಕ ವಿಮಾನ ಸಂಚಾರದಲ್ಲಿಯೂ ವ್ಯತ್ಯಯವಾಗಿದೆ.

ರೌತಹಟ್ ಜಿಲ್ಲೆಯಲ್ಲಿ ಮೂವರು ಮತ್ತು ಖೋಟಂಗ್ ಜಿಲ್ಲೆಯಲ್ಲಿ ಇಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ. ನೇಪಾಳದ ವಿವಿಧೆಡೆ 9 ಮಂದಿ ಸಿಡಿಲು ಬಡಿದು ಗಾಯಗೊಂಡಿದ್ದಾರೆ. ಪಂಚತಾರ ಜಿಲ್ಲೆಯಲ್ಲಿ ಮಳೆಯಿಂದಾಗಿ ರಸ್ತೆ ಅಪಘಾತ ಸಂಭವಿಸಿ ಆರು ಮಂದಿ ಮೃತಪಟ್ಟಿದ್ದಾರೆ.



ನೇಪಾಳದ ಕೋಶಿ ನದಿಯ ನೀರಿನಮಟ್ಟದಲ್ಲಿ ಭಾರಿ ಏರಿಕೆಯಾಗಿದೆ – ಎಎಫ್‌ಪಿ ಚಿತ್ರ

'ನೇಪಾಳಕ್ಕೆ ನೆರವು ನೀಡಲು ಬದ್ಧ'

ಪ್ರವಾಹದಿಂದ ತತ್ತರಿಸಿರುವ ನೇಪಾಳಕ್ಕೆ ಯಾವುದೇ ರೀತಿಯ ನೆರವು ನೀಡಲು ಭಾರತ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ. 'ಸಂಕಷ್ಟದ ಸಮಯದಲ್ಲಿ ನೇಪಾಳ ಸರ್ಕಾರ ಮತ್ತು ಅಲ್ಲಿನ ಜನರ ಜೊತೆ ಭಾರತ ನಿಲ್ಲಲಿದೆ' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಭೂತಾನ್: ರಕ್ಷಣಾಕಾರ್ಯಕ್ಕೆ ಭಾರತ ನೆರವು

ಭೂತಾನ್‌ನಲ್ಲಿ ಸಂಭವಿಸಿದ್ದ ಪ್ರವಾಹದಿಂದ ಸಂತ್ರಸ್ತರಾಗಿದ್ದವರ ರಕ್ಷಣೆಗೆ ಭಾರತೀಯ ಸೇನೆಯು ಕೈಜೋಡಿಸಿದೆ. ಅಮೋಚು ನದಿಯಿಂದಾಗಿ ಉಂಟಾದ ಪ್ರವಾಹದಿಂದಾಗಿ ಹಲವು ಕುಟುಂಬಗಳು ಸಂಕಷ್ಟಕ್ಕೀಡಾಗಿದ್ದವು. ಪ್ರತಿಕೂಲ ಹವಾಮಾನದಿಂದಾಗಿ ಭೂತಾನ್ ಹೆಲಿಕಾಪ್ಟರ್‌ಗಳು ರಕ್ಷಣಾ ಕಾರ್ಯ ನಡೆಸಲು ವಿಫಲವಾಗಿದ್ದವು. ಭೂತಾನ್ ಸರ್ಕಾರದ ಕೋರಿಕೆಗೆ ಸ್ಪಂದಿಸಿದ ಭಾರತ, ಹೆಲಿಕಾಪ್ಟರ್‌ಗಳನ್ನು ಕಳುಹಿಸಿದೆ.

ಸಂಕಷ್ಟದಲ್ಲಿ ಸಾವಿರ ಜನರು

ಶಾಂಘೈ(ರಾಯಿಟರ್ಸ್): ಹಿಮಪಾತದಿಂದ ರಸ್ತೆಸಂಚಾರ ಸ್ಥಗಿತಗೊಂಡಿರುವುದರಿಂದ ಒಂದು ಸಾವಿರ ಮಂದಿ ಮೌಂಟ್ ಎವರೆಸ್ಟ್‌ನ ಟಿಬೆಟ್ ಭಾಗದ ಪೂರ್ವ ಇಳಿಜಾರಿನಲ್ಲಿ ಸಿಲುಕಿಹಾಕಿಕೊಂಡಿದ್ದಾರೆ. ಇಳಿಜಾರಿನಲ್ಲಿ ಸಿಲುಕಿರುವವರ ರಕ್ಷಣೆಗಾಗಿ ಸ್ಥಳೀಯರು ಮತ್ತು ರಕ್ಷಣಾ ತಂಡ ಕಾರ್ಯಾಚರಣೆ ನಡೆಸುತ್ತಿದೆ ಎಂದು ಚೀನಾದ ಮಾಧ್ಯಮಗಳು ವರದಿ ಮಾಡಿವೆ.

ಕೆಲ ಪ್ರವಾಸಿಗರನ್ನು ಈಗಾಗಲೇ ಕೆಳಗೆ ಕರೆತರಲಾಗಿದೆ. ಶುಕ್ರವಾರ ಆರಂಭಗೊಂಡಿದ್ದ ಹಿಮಪಾತ ಶನಿವಾರವೂ ಮುಂದುವರಿದಿತ್ತು.

ಸಂಘರ್ಷ ಅಂತ್ಯಕ್ಕೆ ಟ್ರಂಪ್ ಯೋಜನೆ ರೂಪಿಸಿದ್ದರೂ ನಿಲ್ಲದ ಆಕ್ರಮಣ

ಗಾಜಾ ಮೇಲೆ ಇಸ್ರೇಲ್ ದಾಳಿ

ಕೈರೊ/ಜೆರುಸಲೇಮ್(ರಾಯಿಟರ್ಸ್): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರೂಪಿಸಿರುವ ಯೋಜನೆಯಿಂದ ಯುದ್ಧ ಕೊನೆಯಾಗಿ ಶಾಂತಿ ನೆಲಸಲಿದೆ ಎಂದು ಪ್ಯಾಲೆಸ್ಟೀನಿಯನ್ನರು ವಿಶ್ವಾಸ ವ್ಯಕ್ತಪಡಿಸುತ್ತಿರುವ ನಡುವೆಯೇ, ಇಸ್ರೇಲ್ ಪಡೆಗಳು ಗಾಜಾ ಪಟ್ಟಿ ಮೇಲೆ ದಾಳಿ ನಡೆಸಿವೆ.

ಶನಿವಾರ ತಡರಾತ್ರಿ ಹಾಗೂ ಭಾನುವಾರ ಹಲವು ವಸತಿ ಕಟ್ಟಡಗಳನ್ನು ಗುರಿಯಾಗಿ ಇಸ್ರೇಲ್ ಪಡೆಗಳು ಯುದ್ಧವಿಮಾನ ಹಾಗೂ ಟ್ಯಾಂಕ್‌ಗಳನ್ನು ಬಳಸಿ ದಾಳಿ ನಡೆಸಿವೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಇಸ್ರೇಲ್ ದಾಳಿಯಲ್ಲಿ ಕನಿಷ್ಠ ನಾಲ್ವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ಹೇಳಿದ್ದಾರೆ. ಡ್ರೋನ್‌ಗಳ ಮೂಲಕ ಗ್ರೆನೇಡ್‌ಗಳನ್ನು ಬೀಳಿಸಲಾಗಿದ್ದು, ಅನೇಕ ಮನೆಗಳ ಚಾವಣಿಗಳು ಹಾರಿಹೋಗಿವೆ. ಹತ್ತಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದೆ ಎಂದು ಸಬ್ರಾ ಹಾಗೂ ಶೇಖ್ ರದ್ವಾನ್ ಪ್ರದೇಶಗಳ ನಿವಾಸಿಗಳು ಹೇಳಿದ್ದಾರೆ.

ಇನ್ನೊಂದೆಡೆ, ಗಾಜಾದಲ್ಲಿನ ಸಂಘರ್ಷಕ್ಕೆ ಅಂತ್ಯ ಹಾಡುವ ನಿಟ್ಟಿನಲ್ಲಿ ಎಲ್ಲ ಭಾಗೀದಾರರನ್ನು ಒಂದೆಡೆ ಸೇರಿಸಿ, ಮಾತುಕತೆಗೆ ವೇದಿಕೆ ಒದಗಿಸಲು ಈಜಿಪ್ಟ್ ಕೂಡ ಸಿದ್ಧತೆ ನಡೆಸುತ್ತಿದೆ. ಹಮಾಸ್, ಇಸ್ರೇಲ್, ಅಮೆರಿಕ ಹಾಗೂ ಕತಾರ್ ಪ್ರತಿನಿಧಿಗಳನ್ನು ಆಹ್ವಾನಿಸಿ, ಕದನ ವಿರಾಮ ಕುರಿತು ಚರ್ಚಿಸಲು ಪ್ರಯತ್ನಿಸುತ್ತಿದೆ. ಇಂತಹ ಪ್ರಯತ್ನಗಳ ನಡುವೆಯೇ ಈಗ ಇಸ್ರೇಲ್ ದಾಳಿಯನ್ನು ತೀವ್ರಗೊಳಿಸಿರುವುದು ಗಮನಾರ್ಹ.

ಬಂಧಿತರ ಹಸ್ತಾಂತರಕ್ಕೆ ಸಿದ್ಧ: ಹಮಾಸ್

ಗಾಜಾ ಪಟ್ಟಿ (ಎಎಫ್‌ಪಿ): ಇಸ್ರೇಲ್ ಜತೆಗಿನ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಂಡು, ತತ್‌ಕ್ಷಣದಿಂದಲೇ ಕೈದಿಗಳ ಹಸ್ತಾಂತರಕ್ಕೂ ಸಿದ್ಧ ಎಂದು ಹಮಾಸ್ ತಿಳಿಸಿದೆ.

ಯುದ್ಧ ಕೊನೆಗೊಳಿಸುವ ಉದ್ದೇಶದಿಂದ ಹಮಾಸ್ ಹಾಗೂ ಇಸ್ರೇಲ್‌ನ ಸಮಾಲೋಚನಕಾರರು ಈಜಿಪ್ಟ್‌ನಲ್ಲಿ ಮಾತುಕತೆ ನಡೆಸಲು ತೆರಳಿರುವಂತೆಯೇ ಹಮಾಸ್ ಈ ಹೇಳಿಕೆ ನೀಡಿರುವುದು ಮಹತ್ವ ಪಡೆದಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಮಾಸ್ ಹಾಗೂ ಇಸ್ರೇಲ್ ನಡುವೆ ಶಾಂತಿ ಸ್ಥಾಪಿಸಲು ಶಾಂತಿ ಒಪ್ಪಂದವನ್ನು ಪ್ರಸ್ತಾಪಿಸಿದ್ದರು.

ಅದನ್ನು ಹಮಾಸ್ ನಾಯಕರು ಒಪ್ಪಿದ ಬಳಿಕವೇ ಈಜಿಪ್ಟ್‌ನಲ್ಲಿ ಮಾತುಕತೆ ಏರ್ಪಡಿಸಲಾಗಿದೆ. ಹೀಗಾಗಿ ನಿಯಮಬದ್ಧವಾಗಿ ಇಸ್ರೇಲ್ ಜತೆಗೆ ಒಪ್ಪಂದ ಮಾಡಿಕೊಳ್ಳಲು ಸಿದ್ಧವಿರುವುದಾಗಿ ಹಮಾಸ್ ನಾಯಕರು ತಿಳಿಸಿದ್ದಾರೆ.

ಪ್ರಮುಖ ಅಂಶಗಳು

- 2023ರ ಅಕ್ಟೋಬರ್ 7ರಿಂದ ಇಸ್ರೇಲ್ ಮೇಲೆ ಹಮಾಸ್ ನಿರಂತರ ದಾಳಿ
- 1,200 ಜನರ ಹತ್ಯೆ, 251 ಜನರನ್ನು ಒತ್ತೆಯಾಳಾಗಿ ಇರಿಸಿಕೊಂಡಿರುವ ಹಮಾಸ್: ಇಸ್ರೇಲ್ ಅಧಿಕಾರಿಗಳ ಹೇಳಿಕೆ
- ಇಸ್ರೇಲ್ ದಾಳಿಯಲ್ಲಿ 67 ಸಾವಿರಕ್ಕೂ ಅಧಿಕ ನಾಗರಿಕ ಸಾವು: ಗಾಜಾ ಆರೋಗ್ಯ ಅಧಿಕಾರಿಗಳ ಮಾಹಿತಿ

ಇಕ್ಕಟ್ಟಿನಲ್ಲಿ ನೆತನ್ಯಾಹು

ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಅಂತ್ಯ ಹಾಡುವುದಕ್ಕಾಗಿ ಡೊನಾಲ್ಡ್ ಟ್ರಂಪ್ ರೂಪಿಸಿರುವ ಯೋಜನೆಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಒಪ್ಪಿಗೆ ಸೂಚಿಸಿದ್ದರೂ, ಯುದ್ಧ ನಿಲ್ಲಿಸುವ ಕುರಿತಂತೆ ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಇದು, ನೆತನ್ಯಾಹು ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಹಮಾಸ್ ಒತ್ತೆಯಾಳಾಗಿ ಇರಿಸಿಕೊಂಡಿರುವವರ ಕುಟುಂಬಗಳು ಹಾಗೂ ಯುದ್ಧ ವಿರೋಧಿ ನಿಲುವು ಹೊಂದಿರುವ ಜನರು ಗಾಜಾ ಪಟ್ಟಿಯಲ್ಲಿನ ಯುದ್ಧ ನಿಲ್ಲಿಸುವಂತೆ ನೆತನ್ಯಾಹು ಅವರ ಮೇಲೆ ಒತ್ತಡ ಹೇರುತ್ತಿದ್ದಾರೆ.

ಮತ್ತೊಂದೆಡೆ, ಹಮಾಸ್‌ನ ಕಟ್ಟಾ ವಿರೋಧಿ ನಾಯಕರು, ಯಾವುದೇ ಕಾರಣಕ್ಕೂ ಯುದ್ಧ ನಿಲ್ಲಿಸದಂತೆ ಒತ್ತಾಯಿಸುತ್ತಿದ್ದಾರೆ.


'ಗಾಜಾದಲ್ಲಿ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವುದು ದೊಡ್ಡ ಪ್ರಮಾದವಾಗಲಿದೆ' ಎಂದು ಬಲಪಂಥೀಯ ನಾಯಕ ಹಾಗೂ ಹಣಕಾಸು ಸಚಿವ ಬೆಜಲೆಲ್ ಸ್ಮಾಟ್‌ರಿಚ್, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಒಂದು ವೇಳೆ, ಹಮಾಸ್ ವಿರುದ್ಧದ ಯುದ್ಧವನ್ನು ನಿಲ್ಲಿಸಿದಲ್ಲಿ, ನೆತನ್ಯಾಹು ನೇತೃತ್ವದ ಸರ್ಕಾರವನ್ನು ಉರುಳಿಸಲಾಗುವುದು' ಎಂದು ಸ್ಮಾರ್‌ರಿಚ್ ಹಾಗೂ ಭದ್ರತಾ ಸಚಿವ ಇತಮಾರ್ ಬೆನ್‌-ಗಿವಿರ್ ಎಚ್ಚರಿಸಿದ್ದಾರೆ.

ಡ್ರೋನ್‌ಗಳಿಂದ ಬಾಂಬ್ ಹಾಕಲಾಗುತ್ತಿದೆ, ಸ್ಫೋಟಗಳು ಸಂಭವಿಸುತ್ತಿವೆ. ಟ್ರಂಪ್ ಎಲ್ಲಿದ್ದಾರೆ? ಅವರ ರೂಪಿಸಿರುವ ಕದನ ವಿರಾಮ ಎಲ್ಲಿದೆ?

ರಮಿ ಮೊಹಮ್ಮದ್ ಅಲಿ, ಗಾಜಾ ನಿವಾಸಿ

ನವೆಂಬರ್ 7ಕ್ಕೆ ದಿ ಗರ್ಲ್‌ಫ್ರೆಂಡ್


ರಶ್ಮಿಕಾ ಮಂದಣ್ಣ

ರಶ್ಮಿಕಾ ಮಂದಣ್ಣ, ದೀಕ್ಷಿತ್ ಶೆಟ್ಟಿ ಜೋಡಿಯಾಗಿ ನಟಿಸಿರುವ 'ದಿ ಗರ್ಲ್‌ಫ್ರೆಂಡ್' ಚಿತ್ರ ನವೆಂಬರ್ 7ರಂದು ತೆರೆಗೆ ಬರಲಿದೆ. ರಾಹುಲ್ ರವೀಂದ್ರನ್ ನಿರ್ದೇಶನದ ತೆಲುಗು ಚಿತ್ರ ಪ್ರೇಮಕಥೆಯನ್ನು ಹೊಂದಿದೆ.

'ಗೀತಾ ಆರ್ಟ್ಸ್' ಹಾಗೂ 'ಧೀರಜ್ ಮೊಗಿಲಿನೇನಿ ಎಂಟರ್‌ಟೈನ್‌ಮೆಂಟ್' ಸಂಸ್ಥೆಗಳು ಒಟ್ಟಾಗಿ ನಿರ್ಮಾಣ ಮಾಡಿವೆ. ತೆಲುಗು ಚಿತ್ರರಂಗದ ಖ್ಯಾತ ನಿರ್ಮಾಪಕ ಅಲ್ಲು ಅರವಿಂದ್ ಅವರು ಈ ಸಿನಿಮಾವನ್ನು ಪ್ರಸ್ತುತಪಡಿಸುತ್ತಿದ್ದಾರೆ.

'ಛಾವಾ' ಮತ್ತು 'ಕುಬೇರ' ಚಿತ್ರಗಳ ಬಳಿಕ ರಶ್ಮಿಕಾ ಮಂದಣ್ಣ ನಟನೆಯ ಬಹು ನಿರೀಕ್ಷಿತ ಚಿತ್ರ ಇದಾಗಿದೆ. ಚಿತ್ರದ ಹಾಡು ಈಗಾಗಲೇ ಬಿಡುಗಡೆಗೊಂಡಿದ್ದು, ಒಂದು ಭಿನ್ನ ಪ್ರೇಮಕಥಾಹಂದರದ ಚಿತ್ರವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

'ದಿಯಾ' ಸಿನಿಮಾದ ಮೂಲಕ ಜನಪ್ರಿಯತೆಯನ್ನು ಪಡೆದುಕೊಂಡ ನಟ ದೀಕ್ಷಿತ್ 'ದಸರಾ' ಸಿನಿಮಾ ಮೂಲಕ ತೆಲುಗಿನಲ್ಲಿ ಜನಪ್ರಿಯತೆ ಗಳಿಸಿದ್ದಾರೆ. ಇದೀಗ ತೆಲುಗಿನಲ್ಲಿ ನಾಯಕನಾಗಿ ಈ ಚಿತ್ರದ ಮೂಲಕ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ತಮಿಳು, ಹಿಂದಿ, ಕನ್ನಡ ಮತ್ತು ಮಲಯಾಳ ಭಾಷೆಗಳಲ್ಲಿಯೂ ಚಿತ್ರ ತೆರೆ ಕಾಣಲಿದೆ.

ಹೇಶಮ್ ಅಬ್ದುಲ್ ವಹಾಬ್ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಕೃಷ್ಣನ್ ವಸಂತ್ ಛಾಯಾಚಿತ್ರಗ್ರಹಣ, ಚೋಟಾ ಕೆ ಪ್ರಸಾದ್ ಸಂಕಲನ ಸಿನಿಮಾಗಿದೆ.

ನೀ ನಂಗೆ ಅಲ್ಲವಾ ಎಂದ ರಾಹುಲ್


ರಾಹುಲ್

'ಯುವರತ್ನ' ಹಾಗೂ 'ಬಘೀರ' ಸಿನಿಮಾಗಳಲ್ಲಿ ಸಣ್ಣ ಪಾತ್ರ ಮಾಡಿದ್ದ ರಾಹುಲ್ ಇದೀಗ ನಾಯಕನಾಗಿ ಬಡ್ತಿ ಪಡೆದಿದ್ದಾರೆ. 'ನೀ ನಂಗೆ ಅಲ್ಲವಾ' ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯಗೊಂಡಿದೆ. ಮನೋಜ್ ಪಿ ನಡುಲಮನೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇವರು ಈ ಹಿಂದೆ 'ಆನ, ಮೇರಿ' ಎಂಬ ಸಿನಿಮಾಗಳನ್ನು ನಿರ್ದೇಶಿಸಿದ್ದರು.

'ಪ್ರೇಮಕಥೆ ಹೊಂದಿರುವ ಚಿತ್ರವಿದು. ಮಿಡಲ್ ಕ್ಲಾಸ್ ಹುಡುಗನ ಕಥೆ. ಫ್ಯಾಮಿಲಿ ಎಂಟರ್‌ಟೈನ್‌ಮೆಂಟ್ ಸಿನಿಮಾ. ಆ್ಯಕ್ಷನ್ ಕೂಡ ಇದ್ದು ಕಮರ್ಷಿಯಲ್ ಕಥೆಯಿದೆ. ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಉಷಾ ಭಂಡಾರಿ ಅವರ ಗರಡಿಯಲ್ಲಿ ರಂಗಭೂಮಿ ತರಬೇತಿ ಪಡೆದೆ. ಬಳಿಕ ನಟನಾಗಲು ಡಾನ್ಸ್, ಫೈಟ್‌ಗಳನ್ನು ಕಲಿತೆ. ಸಂಗೀತ ನಿರ್ದೇಶಕ ಸೂರಜ್ ಅವರಿಂದ ಈ ಚಿತ್ರದ ನಿರ್ದೇಶಕ ಮನೋಜ್ ಅವರ ಪರಿಚಯವಾಯಿತು. ಅಲ್ಲಿಂದ ನಮ್ಮ ಸಿನಿಪಯಣ ಪ್ರಾರಂಭವಾಗಿದ್ದು. ಜಯರಾಮ್ ದೇವಸಮುದ್ರ ಬಂಡವಾಳ ಹೂಡಿದ್ದಾರೆ' ಎನ್ನುತ್ತಾರೆ ರಾಹುಲ್.

ಕಾಶಿಮಾ ರಫಿ ಚಿತ್ರದ ನಾಯಕಿ. ಆರತಿ ಪಡುಬಿದ್ರಿ, ಮಂಜುನಾಥ್ ಹೆಗಡೆ, ಚೇತನ್ ದುರ್ಗ ಮುಂತಾದವರು ಚಿತ್ರದಲ್ಲಿದ್ದಾರೆ. ಸೂರಜ್ ಜೋಯ್ಸ್ ಸಂಗೀತ, ಉದಯ್ ಲೀಲಾ ಛಾಯಾಚಿತ್ರಗ್ರಹಣ, ನಾಗೇಂದ್ರ ಕೆ. ಸಂಕಲನ ಚಿತ್ರಕ್ಕಿದೆ.

ಈಗಾಗಲೇ ಶ್ರೀಮುರಳಿ ಜತೆ ಚಿತ್ರ ಘೋಷಿಸಿರುವ ಸುರಮ್ ಮೂವೀಸ್ ಈ ಹಿಂದೆ 'ನಿದ್ರಾದೇವಿ Next Door' ಸಿನಿಮಾ ಮಾಡಿತ್ತು

'ಅಖಂಡ–2' ಡಿ.5ಕ್ಕೆ ತೆರೆಗೆ



ಈ ವರ್ಷದ ಡಿಸೆಂಬರ್‌ನಲ್ಲಿ ತೆರೆಗಳಲ್ಲಿ ಸಿನಿಹಬ್ಬವಿರಲಿದೆ. ಕನ್ನಡದಲ್ಲಿ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ನಟನೆಯ '45', ದರ್ಶನ್ ನಟನೆಯ 'ಡೆವಿಲ್' ಹಾಗೂ ಸುದೀಪ್ ನಟನೆಯ 'ಮಾರ್ಕ್' ಸಿನಿಮಾಗಳು ತೆರೆಕಾಣಲಿದ್ದು, ತೆಲುಗಿನಲ್ಲಿ 'ಅಖಂಡ–2' ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಈ ಸಿನಿಮಾವೂ ಡಿಸೆಂಬರ್ 5ರಂದು ತೆರೆಕಾಣುತ್ತಿದೆ.

ನಟ ನಂದಮೂರಿ ಬಾಲಕೃಷ್ಣ ಅಭಿನಯದ ಈ ಸಿನಿಮಾ 2021ರಲ್ಲಿ ತೆರೆಕಂಡ 'ಅಖಂಡ' ಸಿನಿಮಾದ ಸೀಕ್ವೆಲ್. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿ ತೆರೆಕಾಣಲಿದೆ. ಬೊಯಪಾಟಿ ಶ್ರೀನು ಹಾಗೂ ಬಾಲಕೃಷ್ಣ ಕಾಂಬಿನೇಷನ್‌ನ ನಾಲ್ಕನೇ ಸಿನಿಮಾ ಇದಾಗಿದೆ. ಈ ಹಿಂದೆ ಬಂದಿದ್ದ 'ಸಿಂಹ', 'ಲೆಜೆಂಡ್' ಹಾಗೂ 'ಅಖಂಡ' ಸಿನಿಮಾಗಳು ಹಿಟ್ ಲಿಸ್ಟ್ ಸೇರ್ಪಡೆಯಾಗಿದ್ದವು. 14 ರೀಲ್ಸ್ ಪ್ಲಸ್ ಬ್ಯಾನರ್ ಅಡಿಯಲ್ಲಿ ರಾಮ್ ಅಚಂತ ಮತ್ತು ಗೋಪಿಚಂದ್ ಅಚಂತ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

'ಅಖಂಡ-2' ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸ ಭರದಿಂದ ಸಾಗಿದ್ದು, ಚಿತ್ರದಲ್ಲಿ ಬಾಲಯ್ಯಗೆ ಜೋಡಿಯಾಗಿ ಸಂಯುಕ್ತಾ ನಟಿಸಿದ್ದಾರೆ. ಆದಿ ಪಿನಿಸೆಟ್ಟಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಸಿನಿಮಾಗೆ ಎಸ್. ತಮನ್ ಸಂಗೀತ ನಿರ್ದೇಶನ, ಸಿ.ರಾಮಪ್ರಸಾದ್, ಸಂತೋಷ್ ಡಿ.ಡೆಟಕೆ ಛಾಯಾಚಿತ್ರಗ್ರಹಣ, ಎ.ಎಸ್ ಪ್ರಕಾಶ್ ಕಲಾ ನಿರ್ದೇಶನ, ತಮ್ಮಿರಾಜು ಸಂಕಲನ, ರಾಮ್-ಲಕ್ಷ್ಮಣ್ ಸಾಹಸ ನಿರ್ದೇಶನವಿದೆ.

ಭಾರತಕ್ಕೆ ಸುಲಭದ ತುತ್ತಾದ ಪಾಕ್

ಹರ್ಮನ್‌ಪ್ರೀತ್ ಬಳಗಕ್ಕೆ ಎರಡನೇ ಜಯ
• ಕ್ರಾಂತಿ, ದೀಪ್ತಿ ಪರಿಣಾಮಕಾರಿ ಬೌಲಿಂಗ್

ಐಸಿಸಿ ಮಹಿಳಾ ಏಕದಿನ ವಿಶ್ವಕಪ್


ಭಾರತ ತಂಡದ ಆಟಗಾರ್ತಿಯರ ಸಂಭ್ರಮ ಎಎಫ್‌ಪಿ ಚಿತ್ರ

ಕೊಲಂಬೊ (ಪಿಟಿಐ): ಹರ್ಲೀನ್ ಡಿಯೊಲ್ ಮತ್ತು ರಿಚಾ ಘೋಷ್ ಅವರ ಅಮೂಲ್ಯ ಆಟದ ನಂತರ ವೇಗದ ಬೌಲರ್ ಕ್ರಾಂತಿ ಗೌಡ್ (20ಕ್ಕೆ3) ಮತ್ತು ದೀಪ್ತಿ ಶರ್ಮಾ (45ಕ್ಕೆ3) ಅವರು ಪಾಕಿಸ್ತಾನ ತಂಡದ ಪತನಕ್ಕೆ ಕಾರಣರಾದರು. ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡ 88 ರನ್‌ಗಳಿಂದ ಬದ್ಧ ಎದುರಾಳಿ ಪಾಕಿಸ್ತಾನ ತಂಡದ ಮೇಲೆ ಜಯಗಳಿಸಿತು.

'ವಿವಾದಾತ್ಮಕ ಟಾಸ್' ನಂತರ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 50 ಓವರ್‌ಗಳಲ್ಲಿ 247 ರನ್ ಗಳಿಸಿತು. ಹರ್ಲೀನ್ 65 ಎಸೆತಗಳಲ್ಲಿ 46 ರನ್ ಗಳಿಸಿದರು. ರಿಚಾ 20 ಎಸೆತಗಳಲ್ಲಿ ಅಜೇಯ 35 ರನ್ ಗಳಿಸಿದರು. ಪಾಕಿಸ್ತಾನ ತಂಡ 43 ಓವರುಗಳಲ್ಲಿ 159 ರನ್‌ಗಳಿಗೆ ಆಲೌಟ್ ಆಯಿತು. ಮೂರನೇ ಕ್ರಮಾಂಕದ ಆಟಗಾರ್ತಿ ಸಿದ್ರಾ ಅಮಿನ್ (81,106ಎ, 4x9, 6x1) ಮತ್ತು ನತಾಲಿಯಾ ಪರ್ವೇಜ್ (33) ಬಿಟ್ಟರೆ ಉಳಿದವರು ಭಾರತ ತಂಡದ ಬೌಲಿಂಗ್ ದಾಳಿಗೆ ಉದುರಿದರು.

ಭಾರತ ತಂಡದ ಆರಂಭ ಸಾಧಾರಣವಾಗಿತ್ತು. ಅಗ್ರಕ್ರಮಾಂಕದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡಲಿಲ್ಲ. ಪ್ರತೀಕಾ ರಾವಲ್ (31 ರನ್) ಚುರುಕಾದ ಆರಂಭ ನೀಡಿದರು. ಡಯಾನಾ ಬೇಗ್ ಅವರ ಬೌಲಿಂಗ್‌ನಲ್ಲಿ ಸತತ 3 ಬೌಂಡರಿ ಬಾರಿಸಿದ ಪ್ರತೀಕಾ ಮಿಂಚಿದರು. ಆದರೆ 'ಸ್ಟಾರ್ ಬ್ಯಾಟರ್' ಸ್ಮೃತಿ ಮಂದಾನ (23 ರನ್) ಅವರು ಪವರ್‌ಪ್ಲೇ ಮುಗಿಯುವಷ್ಟರಲ್ಲಿ ಔಟಾದರು. ಪಾಕ್ ನಾಯಕಿ ಫಾತಿಮಾ ಸನಾ ಹಾಕಿದ 10ನೇ ಓವರ್‌ನಲ್ಲಿ ಮಂದಾನ ಎಲ್‌ಬಿ ಬಲೆಗೆ ಬಿದ್ದರು.

ಈ ಹಂತದಲ್ಲಿ ಪಾಕ್ ಬೌಲರ್‌ಗಳು ಶಿಸ್ತುಬದ್ಧ ಬೌಲಿಂಗ್ ಮಾಡಿದರು. ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಂಡರು. ಮಧ್ಯಮವೇಗಿ ಡಯಾನಾ (69ಕ್ಕೆ4) ಮತ್ತು ಸನಾ (38ಕ್ಕೆ2) ಅವರು ಭಾರತದ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಪ್ರತೀಕಾ ಅವರು ಸಾದಿಯಾ ಇಕ್ಬಾಲ್ ಎಸೆತವನ್ನು ಕಟ್ ಮಾಡುವ ಪ್ರಯತ್ನದಲ್ಲಿ ಬೌಲ್ಡ್ ಆದರು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಹರ್ಲೀನ್ ಅವರು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರೊಂದಿಗೆ 39 ರನ್ ಸೇರಿಸಿದರು.

ಕೌರ್ ನಿರ್ಗಮಿಸಿದ ನಂತರ ಹರ್ಲೀನ್ ಮತ್ತು ಜೆಮಿಮಾ ರಾಡ್ರಿಗಸ್ (32 ರನ್) ಅವರೊಂದಿಗೆ 45 ರನ್ ಪೇರಿಸಿ ಇನಿಂಗ್ಸ್‌ಗೆ ಶಕ್ತಿ ತುಂಬಿದರು. ತಂಡದ ಮೊತ್ತವು 150ರ ಗಡಿ ದಾಟಿತ್ತು. ಅರ್ಧ ಶತಕದತ್ತ ಹೆಜ್ಜೆ ಹಾಕಿದ್ದ ಹರ್ಲೀನ್ ಅವರು ರಮೀನ್ ಶಮೀಮ್ ಎಸೆತದಲ್ಲಿ ನಷ್ರಾ ಸಂಧುಗೆ ಕ್ಯಾಚಿತ್ತರು. ನಂತರ ಜೆಮಿಮಾ ಕೂಡ ನಿರ್ಗಮಿಸಿದರು.

ಅನುಭವಿ ದೀಪ್ತಿ ಶರ್ಮಾ (25; 33ಎ, 4X1) ಮತ್ತು ಸ್ನೇಹ ರಾಣಾ (20; 33ಎ, 4X2) ಅವರು ತಂಡದ ಮೊತ್ತ ಹೆಚ್ಚಿಸುವಲ್ಲಿ ಯಶಸ್ವಿಯಾದರು.

ಎಂಟನೇ ಕ್ರಮಾಂಕದಲ್ಲಿ ಆಡಲಿಳಿದ ರಿಚಾ ಅವರು ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. 20 ಎಸೆತಗಳಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ಗಳಿದ್ದ ಬಿರುಸಿನ 35 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 247 (ಪ್ರತೀಕಾ ರಾವಲ್ 31, ಸ್ಮೃತಿ ಮಂದಾನ 23, ಹರ್ಲೀನ್ ಡಿಯೊಲ್ 46, ಜೆಮಿಮಾ ರಾಡ್ರಿಗಸ್ 32, ದೀಪ್ತಿ ಶರ್ಮಾ 25, ಸ್ನೇಹ ರಾಣಾ 20, ರಿಚಾ ಘೋಷ್ ಔಟಾಗದೇ 35, ಸಾದಿಯಾ ಇಕ್ಬಾಲ್ 47ಕ್ಕೆ2, ಡಯಾನಾ ಬೇಗ್ 69ಕ್ಕೆ4, ಫಾತೀಮಾ ಸನಾ 38ಕ್ಕೆ2) ಪಾಕಿಸ್ತಾನ: 43 ಓವರ್‌ಗಳಲ್ಲಿ 159 (ಸಿದ್ರಾ ಅಮಿನ್ 81, ನತಾಲಿಯಾ ಪರ್ವೇಜ್ 33, ಕ್ರಾಂತಿ ಗೌಡ್ 20ಕ್ಕೆ3, ಸ್ನೇಹ ರಾಣಾ 38ಕ್ಕೆ2, ದೀಪ್ತಿ ಶರ್ಮಾ 45ಕ್ಕೆ3) ಫಲಿತಾಂಶ: ಭಾರತ ತಂಡಕ್ಕೆ 88 ರನ್‌ಗಳ ಜಯ.
ಪಂದ್ಯಶ್ರೇಷ್ಠ: ಕ್ರಾಂತಿ ಗೌಡ್

ಟಾಸ್: ಮ್ಯಾಚ್ ರೆಫ್ರಿಯಿಂದ ಗೊಂದಲ

ಟಾಸ್ ವೇಳೆ ಮ್ಯಾಚ್ ರೆಫ್ರಿ ಶಾಂಡ್ರೆ ಫ್ರಿಟ್ಜ್ ಅವರು ಟಾಸ್ ವೇಳೆ ಪಾಕಿಸ್ತಾನ ನಾಯಕಿಯ ಕರೆಯನ್ನು ತಪ್ಪಾಗಿ ಕೇಳಿಸಿದ್ದು ಗೊಂದಲಕ್ಕೆ ಕಾರಣವಾಯಿತು. ಹೀಗಾಗಿ ಪಾಕ್ ನಾಯಕಿ ಫಾತಿಮಾ ಸನಾ ಅವರು ಟಾಸ್‌ನಲ್ಲಿ ವಿಜೇತೆಯಾದರು.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ನಾಣ್ಯ ಚಿಮ್ಮಿಸಿದರು. ಸನಾ ಈ ವೇಳೆ 'ಟೇಲ್ಸ್' ಎಂದರು. ಆದರೆ ಫ್ರಿಟ್ಜ್ ಅವರು ಅದನ್ನು 'ಹೆಡ್ಸ್' ಎಂದು ಕೇಳಿಸಿಕೊಂಡರು. ಪ್ರೆಸೆಂಟರ್ ಆಗಿದ್ದ ಮೆಲ್ ಜೋನ್ಸ್ ಅವರೂ ರೆಫ್ರಿ ಮಾತನ್ನೇ ಅನುಸರಿಸಿದರು. ನಾಣ್ಯ ಹೆಡ್ಸ್ ಆಗಿ ಬಿತ್ತು. ಪರಿಣಾಮ ಪಾಕ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿತು. ಹರ್ಮನ್‌ಪ್ರೀತ್ ಇದಕ್ಕೇನೂ ಪ್ರತಿಕ್ರಿಯಿಸಲಿಲ್ಲ. ಆದರೆ ಜೋನ್ಸ್ ಜೊತೆ ಏನೋ ಮಾತನಾಡಿದರು.

ಇಲ್ಲೂ ಆಗಲಿಲ್ಲ ಹಸ್ತಲಾಘವ

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಪಾಕಿಸ್ತಾನ ತಂಡದ ನಾಯಕಿ ಫಾತಿಮಾ ಸನಾ ಅವರು ಟಾಸ್ ವೇಳೆ ಸಾಂಪ್ರದಾಯಿಕ ಹಸ್ತಲಾಘವದಲ್ಲಿ ಭಾಗಿ ಆಗಲಿಲ್ಲ. ಪಂದ್ಯದ ನಂತರವೂ ಆಟಗಾರ್ತಿಯರು ಕೈಕುಲುಕಲಿಲ್ಲ.

ಹೋದ ತಿಂಗಳಷ್ಟೇ ನಡೆದ ಪುರುಷರ ಏಷ್ಯಾ ಕಪ್ ಪಂದ್ಯಗಳ ಟಾಸ್ ವೇಳೆ ಕೂಡ ಈ ಎರಡೂ ತಂಡಗಳ ನಾಯಕರ ನಡುವೆ ಹಸ್ತಲಾಘವ ನಡೆದಿರಲಿಲ್ಲ. ಎರಡೂ ದೇಶಗಳ ನಡುವೆ ರಾಜತಾಂತ್ರಿಕ ಬಾಂಧವ್ಯ ಹದಗೆಟ್ಟಿದ್ದು ಇದರ ನೆರಳು ಕ್ರೀಡೆಯ ಮೇಲೆ ಆವರಿಸಿದೆ.

ಪುರುಷರ ತಂಡ ಏಷ್ಯಾ ಕಪ್ ಗೆದ್ದ ನಂತರ ಏಷ್ಯಾ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮೊಹ್ಸಿನ್ ನಕ್ವಿ ಅವರಿಂದ ಟ್ರೋಫಿ ಸ್ವೀಕರಿಸಿರಲಿಲ್ಲ.

ವಿದರ್ಭ ಮಡಿಲಿಗೆ ಇರಾನಿ ಟ್ರೋಫಿ


ಯಶ್ ಠಾಕೂರ್ ಮತ್ತು ಯಶ್ ಧುಳ್ (ಚಿತ್ರದಲ್ಲಿಲ್ಲ) ನಡುವಣ ಮಾತಿನ ಚಕಮಕಿ ವೇಳೆ ಅಂಪೈರ್‌ಗಳು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು
ಪಿಟಿಐ ಚಿತ್ರಗಳು

ನಾಗ್ಪುರ (ಪಿಟಿಐ): ಯಶ್ ಧುಳ್ ಸೊಗಸಾದ 92 ರನ್ (117ಎ) ಬಾರಿಸಿದರೂ, ವಿದರ್ಭದ ಸಂಘಟಿತ ಬೌಲಿಂಗ್ ದಾಳಿಯೆದುರು ರೆಸ್ಟ್ ಆಫ್ ಇಂಡಿಯಾ ತಂಡ ಹೆಚ್ಚೇನೂ ಮಾಡಲಾಗಲಿಲ್ಲ. ಐದನೇ ಹಾಗೂ ಅಂತಿಮ ದಿನವಾದ ಭಾನುವಾರ 93 ರನ್‌ಗಳಿಂದ ರೆಸ್ಟ್ ಆಫ್ ಇಂಡಿಯಾ ತಂಡವನ್ನು ಸೋಲಿಸಿದ ವಿದರ್ಭ ತಂಡ ಇರಾನಿ ಟ್ರೋಫಿಯನ್ನೂ ಗೆದ್ದುಕೊಂಡಿತು.

ಎಡಗೈ ಸ್ಪಿನ್ನರ್ ಹರ್ಷ್ ದುಬೆ 73 ರನ್ನಿಗೆ 4 ವಿಕೆಟ್ ಪಡೆದರೆ, ವೇಗಿ ಯಶ್ ಠಾಕೂರ್ (47ಕ್ಕೆ2) ಅವರು ರೆಸ್ಟ್ ಆಫ್ ಇಂಡಿಯಾದ ಪತನಕ್ಕೆ ಕಾರಣರಾದರು. ಇಬ್ಬರೂ ಈ ಪಂದ್ಯದಲ್ಲಿ ತಲಾ ಆರು ವಿಕೆಟ್ ಪಡೆದರು. ಇದರೊಂದಿಗೆ ಇರಾನಿ ಟ್ರೋಫಿಯಲ್ಲಿ ಆಡಿದ ಮೂರೂ ಸಂದರ್ಭಗಳಲ್ಲಿ ವಿದರ್ಭ ಚಾಂಪಿಯನ್ ಆದ ಶ್ರೇಯಸ್ಸಿಗೆ ಪಾತ್ರವಾಯಿತು.

ಗೆಲ್ಲಲು 361 ರನ್ ಗಳಿಸುವ ಗುರಿಯೊಡನೆ ಶನಿವಾರ 2 ವಿಕೆಟ್‌ಗೆ 30 ರನ್ ಗಳಿಸಿದ್ದ ರೆಸ್ಟ್ ಆಫ್ ಇಂಡಿಯಾ 267 ರನ್‌ಗಳಿಗೆ ಆಲೌಟ್ ಆಯಿತು. ಲಂಚ್‌ಗೆ ಮೊದಲ ಒಂದು ಹಂತದಲ್ಲಿ 133 ರನ್‌ಗಳಾಗುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತ್ತು. ಆದರೆ ಧುಳ್ ಮತ್ತು ಮಾನವ್ ಸುತಾರ್ (ಔಟಾಗದೇ 56, 113ಎ) ಅವರು ಏಳನೇ ವಿಕೆಟ್‌ಗೆ 104 ರನ್ ಜೊತೆಯಾಟದಲ್ಲಿ ತೊಡಗಿದ್ದರಿಂದ ಪಂದ್ಯ ಜೀವ ಪಡೆಯಿತು. ಈ ಹಂತದಲ್ಲಿ ಧುಳ್ ಅವರ ವಿಕೆಟ್ ಪಡೆದ ಯಶ್ ಠಾಕೂರ್ ವಿದರ್ಭ ಗೆಲುವನ್ನು ಖಚಿತಪಡಿಸಿದರು.


ಇರಾನಿ ಟ್ರೋಫಿ ಪದಕ ಪ್ರದರ್ಶಿಸಿದ ವಿದರ್ಭ ನಾಯಕ ಅಕ್ಷಯ ವಾಡ್ಕರ್

ಮಾತಿನ ಚಕಮಕಿ: ಠಾಕೂರ್ ಬೌಲಿಂಗ್‌ನಲ್ಲಿ ಚೆಂಡನ್ನು ಥರ್ಡ್‌ಮ್ಯಾನ್ ಮೇಲಿಂದ ಹೊಡೆಯಲು ಯತ್ನಿಸಿದ ಧುಳ್ ಬೌಂಡರಿಗೆರೆಯ ಸನಿಹ ಅಥರ್ವ ತೈಡೆ ಅಂದಾಜಿಸಿ ಹಿಡಿದ ಉತ್ತಮ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ಆಗ ಯಶ್ ಠಾಕೂರ್ ಪ್ರಚೋದನೆಯ ರೀತಿ 'ಸೆಂಡ್‌ಆಫ್' ಸಂಕೇತ ಪ್ರದರ್ಶಿಸಿದ್ದರಿಂದ ಧುಳ್ ಸಿಟ್ಟಾದರು. ಯಶ್‌ದ್ವಯರ ಮಧ್ಯೆ (ಧುಳ್ ಮತ್ತು ಠಾಕೂರ್) ವಾಗ್ವಾದ ನಡೆಯಿತು. ಅಂಪೈರ್‌ಗಳು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಸಂಕ್ಷಿಪ್ತ ಸ್ಕೋರು: ವಿದರ್ಭ: 342 ಮತ್ತು 232; ರೆಸ್ಟ್ ಆಫ್ ಇಂಡಿಯಾ: 214 ಮತ್ತು 73.5 ಓವರುಗಳಲ್ಲಿ 267 (ಇಶಾನ್ ಕಿಶನ್ 35, ಯಶ್ ಧುಳ್ 92, ಸಾರಾಂಶ್ ಜೈನ 29, ಮಾನವ್ ಸುತಾರ್ ಔಟಾಗದೇ 56; ಹರ್ಷ ದುಬೆ 73ಕ್ಕೆ4, ಆದಿತ್ಯ ಠಾಕರೆ 27ಕ್ಕೆ2, ಯಶ್ ಠಾಕೂರ್ 47ಕ್ಕೆ2).

ಅಂದು ಕೊಹ್ಲಿ ಜೊತೆಗಾರರು ಈಗ ಅಂಪೈರ್‌ಗಳಾದರು

ಕಾನ್ಪುರ (ಪಿಟಿಐ): ಸುಮಾರು 17 ವರ್ಷಗಳ ಹಿಂದೆ, ಈ ಇಬ್ಬರು ಆಟಗಾರರು ವಿರಾಟ್ ಕೊಹ್ಲಿ ಅವರೊಂದಿಗೆ ಭಾರತ 19 ವರ್ಷದೊಳಗಿನವರ ತಂಡದಲ್ಲಿ ಆಡಿದ್ದರು. ಜೂನಿಯರ್ ವಿಶ್ವಕಪ್ ಗೆದ್ದ ತಂಡದಲ್ಲೂ ಜೊತೆಯಾಗಿದ್ದರು. ಈಗ ಈ ಇಬ್ಬರು ಆಟಗಾರರು– ತನ್ಮಯ್ ಶ್ರೀವಾಸ್ತವ ಮತ್ತು ಅಜಿತೇಶ್ ಅರ್ಗಾಲ್– ಅಂಪೈರ್‌ಗಳಾಗಿದ್ದಾರೆ.

ಬೇರೆ ಪಾತ್ರದಲ್ಲಿ ಮತ್ತೆ ಒಟ್ಟಿಗೆ ಮೈದಾನಕ್ಕಿಳಿಯುವ ಯೋಚನೆಯನ್ನೂ ಆಗ ತನ್ಮಯ್– ಅಜಿತೇಶ್ ಮಾಡಿರಲಿಕ್ಕಿಲ್ಲ. ಆದರೆ ಆಸ್ಟ್ರೇಲಿಯಾ 'ಎ'– ಭಾರತ 'ಎ' ನಡುವೆ ಕಾನ್ಪುರದಲ್ಲಿ ಇತ್ತೀಚೆಗೆ ನಡೆದ ಮೂರು ಏಕದಿನ ಪಂದ್ಯಗಳಲ್ಲಿ 35 ವರ್ಷ ವಯಸ್ಸಿನ ತನ್ಮಯ್ ಮತ್ತು 37 ವರ್ಷ ವಯಸ್ಸಿನ ಅಜಿತೇಶ್ ಇಬ್ಬರೂ ಆನ್‌ಫೀಲ್ಡ್ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಿದ್ದು ಗಮನಸೆಳೆದಿದೆ.

ಮಧ್ಯಮ ವೇಗಿ ಆಗಿದ್ದ ಅಜಿತೇಶ್ ಅವರು ದಕ್ಷಿಣ ಆಫ್ರಿಕಾ ವಿರುದ್ಧ 19 ವರ್ಷದೊಳಗಿನವರ ವಿಶ್ವಕಪ್ ಫೈನಲ್‌ನಲ್ಲಿ 'ಪಂದ್ಯದ ಆಟಗಾರ' ಆಗಿದ್ದರು. ಎಡಗೈ ಬ್ಯಾಟರ್ ತನ್ಮಯ್ ಆರಂಭ ಆಟಗಾರನಾಗಿದ್ದು 262 ರನ್ ಕಲೆಹಾಕಿದ್ದರು.


ತನ್ಮಯ್ ಶ್ರೀವಾಸ್ತವ(ಎಡ), ಅಜಿತೇಶ್ ಅರ್ಗಾಲ್

ಕೊಹ್ಲಿ ಏಕದಿನ ತಂಡದಲ್ಲಿ ಇನ್ನೂ ಆಟಗಾರನಾಗಿ ಉಳಿದಿದ್ದಾರೆ. ತನ್ಮಯ್ ಅವರು ಕಳೆದ ಐಪಿಎಲ್‌ನಲ್ಲಿ ಅಂಪೈರಿಂಗ್ ಮಾಡಿದ್ದರು. ಅದಕ್ಕಿಂತ ಮೊದಲು ಆರ್‌ಸಿಬಿಯ ಪ್ರತಿಭಾಶೋಧ ತಂಡದಲ್ಲಿದ್ದರು. ತನ್ಮಯ್ ಮತ್ತು ಅಜಿತೇಶ್ ಇಬ್ಬರೂ 2023ರಲ್ಲಿ ಬಿಸಿಸಿಐ ಅಂಪೈರಿಂಗ್ ಪರೀಕ್ಷೆಯಲ್ಲಿ ತೇರ್ಗಡೆಗೊಂಡಿದ್ದರು. ಈಗಾಗಲೇ ರಣಜಿ ಟ್ರೋಫಿ, ವಿಜಯ್ ಹಜಾರೆ ಮತ್ತು ಮುಷ್ತಾಕ್ ಅಲಿ ಟ್ರೋಫಿ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಈಗ ಆಸ್ಟ್ರೇಲಿಯಾ 'ಎ'– ಭಾರತ 'ಎ' ಪಂದ್ಯ ಅವರ ಪಾಲಿಗೆ ಅತಿ ಮಹತ್ವದ್ದು ಎನಿಸಿದೆ.

ಭಾರತ ಎ ತಂಡಕ್ಕೆ ಸರಣಿ ಜಯ

ಕಾನ್ಪುರ (ಪಿಟಿಐ): ಆರಂಭಿಕ ಆಟಗಾರ ಪ್ರಭಸಿಮ್ರನ್ ಸಿಂಗ್ (102; 68ಎ, 4x8, 6x7) ಅವರ ಬಿರುಸಿನ ಶತಕದ ನೆರವಿನಿಂದ ಭಾರತ ಎ ತಂಡವು ಆಸ್ಟ್ರೇಲಿಯಾ ಎ ವಿರುದ್ಧದ ಮೂರನೇ ಹಾಗೂ ಅಂತಿಮ 'ಏಕದಿನ ಪಂದ್ಯ'ದಲ್ಲಿ 2 ವಿಕೆಟ್‌ಗಳ ರೋಚಕ ಜಯ ಸಾಧಿಸಿತು.

ಗ್ರೀನ್‌ಪಾರ್ಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಆಸ್ಟ್ರೇಲಿಯಾ ಎ ತಂಡವು 49.1 ಓವರ್‌ಗಳಲ್ಲಿ 317 ರನ್‌ಗಳಿಗೆ ಆಲೌಟ್ ಆಯಿತು.

ಬೃಹತ್ ಗುರಿ ಬೆನ್ನಟ್ಟಿದ ಶ್ರೇಯಸ್ ಅಯ್ಯರ್ ಬಳಗಕ್ಕೆ ಅಭಿಷೇಕ್ ಶರ್ಮಾ (22, 25ಎ) ಹಾಗೂ ಪ್ರಭಸಿಮ್ರನ್ ಅವರು ಉತ್ತಮ ಆರಂಭ ಒದಗಿಸಿದರು. ಬಿರುಸಿನ ಆಟವಾಡಿದ ವಿಕೆಟ್‌ಕೀಪರ್ ಪ್ರಭಸಿಮ್ರನ್ ಅವರು ಶತಕ ಗಳಿಸಿ ಸಂಭ್ರಮಿಸಿದರು. ನಾಯಕ ಶ್ರೇಯಸ್ (62, 58ಎ) ಹಾಗೂ ರಿಯಾನ್ ಪರಾಗ್ (62, 55ಎ) ಎದುರಾಳಿ ತಂಡದ ಬೌಲಿಂಗ್ ದಾಳಿಯನ್ನು ಮೆಟ್ಟಿನಿಂತರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಎ: 49.1 ಓವರ್‌ಗಳಲ್ಲಿ 317 (ಜ್ಯಾಕ್ ಎಡ್ವರ್ಡ್ಸ್ 89, ಲಿಯಾಮ್ ಸ್ಕಾಟ್ 73, ಕೂಪರ್ ಕನೊಲಿ 64, ಅರ್ಷದೀಪ್ ಸಿಂಗ್ 38ಕ್ಕೆ3, ಹರ್ಷಿತ್ ರಾಣಾ 61ಕ್ಕೆ3). ಭಾರತ ಎ: 46 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 322 (ಪ್ರಭಸಿಮ್ರನ್ ಸಿಂಗ್ 102, ಶ್ರೇಯಸ್ ಅಯ್ಯರ್ 62, ರಿಯಾನ್ ಪರಾಗ್ 62, ಟಾಡ್ ಮುರ್ಫಿ 42ಕ್ಕೆ4, ತನ್ವೀರ್ ಸಂಘಾ 72ಕ್ಕೆ4)
ಫಲಿತಾಂಶ: ಭಾರತಕ್ಕೆ 2 ವಿಕೆಟ್ ಜಯ, 2–1ರಿಂದ ಸರಣಿ ಜಯ.

ಚಿಟಿಕೆ ಸುದ್ದಿ

ಬೆಂಗಳೂರು ಟಾರ್ಪಿಡೋಸ್‌ಗೆ ಎರಡನೇ ಜಯ

ಹೈದರಾಬಾದ್ (ಪಿಟಿಐ): ಮೊದಲ ಸೆಟ್ ಹಿನ್ನಡೆಯಿಂದ ಚೇತರಿಸಿದ ಬೆಂಗಳೂರು ಟಾರ್ಪಿಡೋಸ್ ತಂಡ, ಭಾನುವಾರ ನಡೆದ ಪ್ರೈಮ್ ವಾಲಿಬಾಲ್ ಲೀಗ್ ಪಂದ್ಯದಲ್ಲಿ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡವನ್ನು 11–14, 15–13, 15–11, 15–11 ರಿಂದ ಸೋಲಿಸಿತು.

ಮೊದಲ ಸೆಟ್‌ನಲ್ಲಿ ಕೋಲ್ಕತ್ತ ರಕ್ಷಣೆಯಲ್ಲಿ ಉತ್ತಮ ಆಟ ಪ್ರದರ್ಶಿಸಿ, ಬೆಂಗಳೂರಿನ ಆಕ್ರಮಣವನ್ನು ನಿಭಾಯಿಸಿತು. ಆದರೆ ಜಲೆನ್ ಪೆನ್ರೋಸ್ ಮತ್ತು ಸೇತು ಎರಡನೇ ಸೆಟ್‌ನಲ್ಲಿ ಪ್ರತಿದಾಳಿ ನಡೆಸಿದರು. ಜೋಯೆಲ್ ಸಹ ಲಯಕಂಡುಕೊಂಡರು. ಕೋಲ್ಕತ್ತದ ಸೂರ್ಯಾಂಶ್ ತೋಮಾರ್ ಅವರು ಕೆಲವು ಸ್ಟ್ರೈಕ್‌ಗಳು ಗಮನ ಸೆಳೆದರೂ ಟಾರ್ಪಿಡೋಸ್ ಮೇಲುಗೈ ತಡೆಯಲಾಗಲಿಲ್ಲ. ಟಾರ್ಪಿಡೋಸ್‌ನ ಮುಜೀಬ್ ಸಕಾಲಕ್ಕೆ ಬ್ಲಾಕಿಂಗ್‌ನಲ್ಲಿ ಮಿಂಚಿದರು.

ಚೀನಾ ವಿರುದ್ಧ ಆಡಲಿರುವ ಭಾರತ ಯುವ ತಂಡ

ನವದೆಹಲಿ (ಪಿಟಿಐ): ಭಾರತ 17 ವರ್ಷದೊಳಗಿನ ಯುವಕರ ತಂಡ, ಇದೇ ತಿಂಗಳ 8 ಮತ್ತು 10ರಂದು ನಡೆಯುವ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ ಚೀನಾದ 17 ವರ್ಷದೊಳಗಿನವರ ತಂಡವನ್ನು ಎದುರಿಸಲಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಭಾನುವಾರ ತಿಳಿಸಿದೆ.

ವಾರದ ಹಿಂದೆ ಸ್ಯಾಫ್ 17 ವರ್ಷದೊಳಗಿನವರ ಟೂರ್ನಿಯ ಚಾಂಪಿಯನ್ ಆಗಿದ್ದ ಬಿಬಿಯಾನೊ ಫೆರ್ನಾಂಡಿಸ್ ಗರಡಿಯಲ್ಲಿರುವ ಭಾರತ ತಂಡ ಗೋವಾದಲ್ಲಿ ತರಬೇತಿ ಪಡೆದಿದೆ. ತಂಡ ಸೋಮವಾರ ಸಂಜೆ ಚೀನಾ ತಲುಪಲಿದೆ. ಎರಡೂ ಪಂದ್ಯಗಳು, ಬೀಜಿಂಗ್‌ನಿಂದ 80 ಕಿ.ಮೀ. ದೂರದ ಷಿಯಾಂಗ್‌ಹೇನಲ್ಲಿ ನಡೆಯಲಿವೆ.

ಅಮೆಚೂರ್ ಚೆಸ್: ನಿರಂಜನ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊನೆಯ ಕೆಲವು ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಅಗ್ರ ಶ್ರೇಯಾಂಕದ ನಿರಂಜನ್ ಜೆ.ವಾರಿಯರ್ ಅವರು ಭಾನುವಾರ ಮುಕ್ತಾಯಗೊಂಡ ಗೋಲ್ಡನ್ ಆರಾ ಕರ್ನಾಟಕ ರಾಜ್ಯ ಅಮೆಚೂರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಕೋಣನಕುಂಟೆಯ ಪ್ರೆಸ್ಟೀಜ್ ದೃಶ್ಯ ಕಲಾ ಕೇಂದ್ರದಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನ ಹತ್ತು ಸುತ್ತುಗಳ ನಂತರ ಬೆಂಗಳೂರಿನ ನಿರಂಜನ್, ಎರಡನೇ ಶ್ರೇಯಾಂಕದ ಅಯಾನ್ ಫುಟಾಣೆ, ಮೂರನೇ ಶ್ರೇಯಾಂಕದ ವಿವಾನ್ ಸಚದೇವ ಮತ್ತು ಶಶಾಂಕ್ ಸಾವಂತ್ ಎಂ. ಅವರು ತಲಾ ಎಂಟೂವರೆ ಪಾಯಿಂಟ್ಸ್ ಗಳಿಸಿದ್ದರು. ಆದರೆ ಟೈಬ್ರೇಕರ್ ಆಧಾರದ ಮೇಲೆ ಕ್ರಮವಾಗಿ ಒಂದರಿಂದ ನಾಲ್ಕರವರೆಗಿನ ಸ್ಥಾನಗಳನ್ನು ಪಡೆದರು.



ಚಾಂಪಿಯನ್ ಆದ ನಿರಂಜನ್ (ಬಲಗಡೆ), ರನ್ನರ್ ಅಪ್ ಅಯಾನ್ ಫುಟಾಣೆ (ಮಧ್ಯ) ಮತ್ತು ಮೂರನೇ ಸ್ಥಾನ ಪಡೆದ ವಿವಾನ್ ಸಚದೇವ ಜೊತೆ ಅತಿಥಿಗಳು

ಬೆಳಗಾವಿಯ ಶ್ರೀಕರ ದರ್ಭಾ, ಬೆಂಗಳೂರಿನ ರುಚಿರ್ ನಡಿಕಟ್ಲ, ಸಿದ್ಧಿ ರಾವ್ ಮತ್ತು ಇಂದ್ರಜಿತ್ ಮಂಜುಂದಾರ್ ತಲಾ ಎಂಟು ಪಾಯಿಂಟ್ಸ್ ಸಂಗ್ರಹಿಸಿದರೂ, ಟೈಬ್ರೇಕರ್ ಆಧಾರದಲ್ಲಿ 5ರಿಂದ 8ರ ವರೆಗಿನ ಸ್ಥಾನ ಪಡೆದರು.

ಮೇ ತಿಂಗಳಲ್ಲಿ ಮಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಫಿಡೆ ರೇಟೆಡ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ ನಿರಂಜನ್ ಇಲ್ಲಿ ಟ್ರೋಫಿ ಜೊತೆ ₹25,000 ಬಹುಮಾನ ಪಡೆದರು. 9 ವರ್ಷ ವಯಸ್ಸಿನ ಅಯಾನ್ ಫುಟಾಣೆ ರನ್ನರ್‌ಅಪ್ ಟ್ರೋಫಿ ಜೊತೆ ₹18,000 ನಗದು ಬಹುಮಾನ ಪಡೆದರು.

ಅಂತಿಮ ಸುತ್ತಿನಲ್ಲಿ ನಿರಂಜನ್ ಮತ್ತು ಅಯಾನ್ ನಡುವಣ ಪಂದ್ಯ ಡ್ರಾ ಆಯಿತು. ಶಶಾಂಕ್ ಎರಡನೇ ಬೋರ್ಡ್‌ನಲ್ಲಿ ರುಚಿರ್ ವಿರುದ್ಧ, ವಿವಾನ್ ಮೂರನೇ ಬೋರ್ಡ್‌ನಲ್ಲಿ ಇಶಾನ್ ವಿರುದ್ಧ ಜಯಗಳಿಸಿದರು. 13 ವರ್ಷದ ಇಂದ್ರಜಿತ್, ಶ್ರೀಸುದಯ್ ಬೆಹೆರಾ ವಿರುದ್ಧ ಜಯಗಳಿಸಿದರು. ಶ್ರೀಕರ್ ಮತ್ತು ಸಿದ್ಧಿ ತಮ್ಮ ತಮ್ಮ ಪಂದ್ಯಗಳಲ್ಲಿ ಜಯಗಳಿಸಿದರು.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಭಾರತಕ್ಕೆ 22 ಪದಕ

ಸಿಮ್ರನ್, ಪ್ರೀತಿ, ನವದೀಪ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಬಳಲಿಕೆ ಮತ್ತು ಬೆನ್ನುನೋವಿನ ನಡುವೆಯೂ ಸ್ಫೂರ್ತಿಯಿಂದ ಓಡಿದ ಸಿಮ್ರನ್ ಶರ್ಮಾ ಅವರು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 200 ಮೀ. (ಟಿ12 ಕ್ಲಾಸ್) ಓಟದಲ್ಲಿ ಬೆಳ್ಳಿ ಪದಕ ಗೆದ್ದರು. ಭಾನುವಾರ ಮುಕ್ತಾಯಗೊಂಡ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತ ದಾಖಲೆಯ 22 ಪದಕಗಳನ್ನು ಗೆದ್ದುಕೊಂಡಿತು.

ಕೊನೆಯ ದಿನ ಆತಿಥೇಯ ಅಥ್ಲೀಟುಗಳು ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕಗಳನ್ನು ಪಡೆದರು. ಭಾರತ ಒಟ್ಟು 6 ಚಿನ್ನ, 9 ಬೆಳ್ಳಿ ಮತ್ತು 7 ಕಂಚಿನ ಪದಕಗಳನ್ನು ಗಳಿಸಿ ಪದಕ ಪಟ್ಟಿಯಲ್ಲಿ 10ನೇ ಸ್ಥಾನ ಪಡೆಯಿತು. ಆದರೆ ಶನಿವಾರದ ಸ್ಪರ್ಧೆಯಲ್ಲಿ ಪ್ರವೀಣ್ ಮತ್ತು ಭಾನುವಾರ ನವದೀಪ್ ತಮ್ಮ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದಿದ್ದಲ್ಲಿ ಭಾರತ ನಾಲ್ಕನೇ ಸ್ಥಾನಕ್ಕೇರುತಿತ್ತು.

ಬ್ರೆಜಿಲ್ ತಂಡ 44 ಪದಕಗಳೊಡನೆ (15–20–9) ಪದಕ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದರೆ, ಚೀನಾ 52 ಪದಕಗಳೊಡನೆ (13–22–17) ಎರಡನೇ ಸ್ಥಾನ ಗಳಿಸಿತು. ಇರಾನ್ 16 ಪದಕ ಗಳಿಸಿ (9–2–5) ಮೂರನೇ ಸ್ಥಾನದಲ್ಲಿ ಗಳಿಸಿತು.

ಮಹಿಳೆಯರ 100 ಮೀ. (ಟಿ35) ಓಟದಲ್ಲಿ ಪ್ರೀತಿ ಪಾಲ್ ಗಟ್ಟಿ ಮನೋಬಲ ಪ್ರದರ್ಶಿಸಿ ಬೆಳ್ಳಿ ಪದಕ ಗೆದ್ದರು. ಈ ಓಟದ ಆರಂಭದಲ್ಲಿ ಸ್ಟಾರ್ಟರ್ ಅವರ ಪಿಸ್ತೂಲ್ ಕೈಕೊಟ್ಟಿದ್ದರಿಂದ ಅರ್ಧ ಓಟದಿಂದ ಹಿಂತಿರುಗಿ ಮತ್ತೊಮ್ಮೆ ಓಡಬೇಕಾಯಿತು. ಈ ಕ್ಲಾಸ್‌ನಲ್ಲಿ ಅಥ್ಲೀಟುಗಳು ಸಹಾಯಕರ ನೆರವು ಪಡೆಯಬೇಕಾಗುತ್ತದೆ. ಸೆರೆಬ್ರಲ್ ಪಾಲ್ಸಿಯಂಥ ಸಮಸ್ಯೆಯಿರುವವರು ಇಲ್ಲಿ ಕಣದಲ್ಲಿರುತ್ತಾರೆ.



ಸಿಮ್ರನ್ ಅವರು ಗೈಡ್ ಉಮರ್ ಸೈಫಿ ಜೊತೆಗೆ ಮಹಿಳೆಯರ 200 ಮೀ. ಓಟದಲ್ಲಿ ಓಡಿದ ರೀತಿ

ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಚಿನ್ನ ವಿಜೇತ ನವದೀಪ್ ಸಿಂಗ್ ಎಫ್41 ಜಾವೆಲಿನ್ ಸ್ಪರ್ಧೆಯಲ್ಲಿ ಚಿನ್ನ ಗೆಲ್ಲುವ ಫೇವರಿಟ್ ಆಗಿದ್ದರು. ಆದರೆ ಅವರೂ ಬೆಳ್ಳಿ ಪದಕ ಗೆಲ್ಲಲಷ್ಟೇ ಶಕ್ತರಾದರು. 24 ವರ್ಷ ವಯಸ್ಸಿನ ನವದೀಪ್ 45.46 ಮೀ. ದೂರ ಎಸೆದರು. ಇರಾನ್‌ನ ಸದೆಗ್ ಬಿಯೆತ್ ಸಯಾ (48.46) ಅವರಿಗೆ ಚಿನ್ನ ಗೆಲ್ಲುವ ಹಾದಿಯಲ್ಲಿ ಪೈಪೋಟಿ ಎದುರಾಗಲಿಲ್ಲ.

ಪುರುಷರ 200 ಮೀ. (ಟಿ44 ಕ್ಲಾಸ್) ಓಟದಲ್ಲಿ ಸಂದೀಪ್ 23.60 ಸೆ.ಗಳಲ್ಲಿ ಓಡಿ ಕಂಚಿನ ಪದಕ ಗೆದ್ದರು. ಈ ವಿಭಾಗದಲ್ಲಿ ಓಡುವ ಅಥ್ಲೀಟುಗಳ ಒಂದು ಕಾಲು ಮಾತ್ರ ಸುಸ್ಥಿತಿಯಲ್ಲಿದ್ದು, ಇನ್ನೊಂದು ಮೊಣಕಾಲಿನವರೆಗೆ ಮಾತ್ರ ಇರುತ್ತದೆ.

ಎರಡನೇ ಪದಕ: ಶುಕ್ರವಾರ ಟಿ12ನಲ್ಲಿ 100 ಮೀ. ಚಿನ್ನ ಗೆದ್ದಿದ್ದ ಉತ್ತರಪ್ರದೇಶದ ಸಿಮ್ರನ್ 200 ಮೀ. ಓಟವನ್ನು 24.46 ಸೆ.ಗಳಲ್ಲಿ ಕ್ರಮಿಸಿ ಬೆಳ್ಳಿ ಗೆದ್ದರು. ಇದು ಅವರಿಗೆ ವಿಶ್ವಕೂಟದಲ್ಲಿ ಮೂರನೇ ಪದಕ. ಕೋಬೆಯಲ್ಲಿ (2024) ಅವರು ಇದೇ ಓಟದಲ್ಲಿ ಸ್ವರ್ಣ ಗೆದ್ದಿದ್ದರು. ಬ್ರೆಜಿಲ್‌ನ ಕ್ಲಾರಾ ಬಾರೋಸ್ ಡಿಸಿಲ್ವ (24.42 ಸೆ.) ಚಿನ್ನ ಗೆದ್ದರು.

ಮಹಿಳೆಯರ ಟಿ35 ಕ್ಲಾಸ್‌ನ 100 ಮೀ. ಓಟದಲ್ಲಿ ಪ್ರೀತಿ ಪಾಲ್ 14.33 ಸೆ.ಗಳಲ್ಲಿ ಗುರಿಮುಟ್ಟಿದರು. ಚೀನಾದ ಗುವೊ (14.24) ಮೊದಲಿಗರಾದರು.

ಶ್ರೀಯಾಂಶಿಗೆ ಚೊಚ್ಚಲ ಪ್ರಶಸ್ತಿ

ಅಲ್ ಐಯಿನ್ (ಯುಎಇ) (ಪಿಟಿಐ): ಭಾರತದ ಯುವ ಪ್ರತಿಭಾನ್ವಿತ ಆಟಗಾರ್ತಿ ಶ್ರೀಯಾಂಶಿ ವಲಿಶೆಟ್ಟಿ ಅವರು ಬಿಡಬ್ಲ್ಯುಎಫ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ತೆಲಂಗಾಣದ 18 ವರ್ಷದ ಶ್ರೀಯಾಂಶಿ 15-21, 22-20, 21-7ರಿಂದ ಭಾರತದವರೇ ಆದ ತಸ್ನೀಮ್ ಮೀರ್ ವಿರುದ್ಧ ಜಯಿಸಿದರು.

ಪಂದ್ಯವು 49 ನಿಮಿಷ ನಡೆಯಿತು. ಮೊದಲ ಗೇಮ್‌ನಲ್ಲಿ ಶ್ರೀಯಾಂಶಿ ಸೋತರು. ಈ ಗೇಮ್ ಆರಂಭದಲ್ಲಿ ಶ್ರೀಯಾಂಶಿ 8–4ರ ಮುನ್ನಡೆ ಹೊಂದಿದ್ದರು. ಇದರ ನಂತರ ಚೇತರಿಸಿಕೊಂಡ ತಸ್ನೀಂ ಅವರು 14–9ರ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾದರು. ಅಲ್ಲಿಂದ ಮುಂದೆಯೂ ಬಿಗಿಹಿಡಿತ ಸಾಧಿಸಿದ ಗುಜರಾತ್ ಹುಡುಗಿ ತಸ್ನೀಂ ದೊಡ್ಡ ಅಂತರದ ಜಯ ಸಾಧಿಸಿದರು.

ಎರಡನೇ ಗೇಮ್‌ನಲ್ಲಿಯೂ ಕಠಿಣ ಪೈಪೋಟಿ ಎದುರಿಸಿದ ಅವರು ಟೈಬ್ರೇಕರ್‌ನಲ್ಲಿ ಮೇಲುಗೈ ಸಾಧಿಸಿದರು. ನಂತರ ಕೊನೆಯ ಮತ್ತು ನಿರ್ಣಾಯಕ ಗೇಮ್‌ನಲ್ಲಿ ಪಾರಮ್ಯ ಮೆರೆದ ಶ್ರೀಯಾಂಶಿ ತಮ್ಮ ಎದುರಾಳಿಯನ್ನು ಸೋಲಿಸಿದರು.

ಶ್ರೀಯಾಂಶಿ ಅವರು ಪುಲ್ಲೇಲ ಗೋಪಿಚಂದ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.


ಶ್ರೀಯಾಂಶಿ ವಲಿಶೆಟ್ಟಿ

ನಿಧನ ವಾರ್ತೆ

ಕಿಶೋರ್ ಕುಮಾರ್



ಉಳ್ಳಾಲ (ದಕ್ಷಿಣ ಕನ್ನಡ): ಕ್ರೀಡಾಪಟು, ಮಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಕಿಶೋರ್ ಕುಮಾರ್ ಸಿ.ಕೆ (61) ಭಾನುವಾರ ನಸುಕಿನಲ್ಲಿ ಮಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ವಕೀಲೆ ಅರುಣಾ ಬಿ.ಪಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ಕದ್ರಿ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

2014ರಿಂದ 2022ರ ವರೆಗೆ ಮಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾಗಿದ್ದ ಅವರು ನಂತರ ಆಡಳಿತ ವಿಭಾಗದ ರಿಜಿಸ್ಟ್ರಾರ್ ಆಗಿದ್ದರು. ಪ್ರಭಾರ ಕುಲಪತಿ ಆಗಿಯೂ ಕಾರ್ಯನಿರ್ವಹಿಸಿದ್ದರು.

ವಿಜಯ್ ಹಜಾರೆ ಟ್ರೋಫಿ ವಿಜೇತರಿಗೆ ಬಂಪರ್

ಕೆಎಸ್‌ಸಿಎ ವಾರ್ಷಿಕ ಪ್ರಶಸ್ತಿ ಪ್ರದಾನ
ಕೌಶಿಕ್, ಮಯಂಕ್, ನಿಕಿಪ್ರಸಾದ್‌ಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯ್ ಹಜಾರೆ ಟ್ರೋಫಿ ವಿಜೇತ ಕರ್ನಾಟಕ ತಂಡಕ್ಕೆ ಭಾನುವಾರ ಸಂಭ್ರಮವೋ ಸಂಭ್ರಮ. ಐದು ವರ್ಷಗಳ ನಂತರ ದೇಶಿ ಕ್ರಿಕೆಟ್‌ನ ಏಕದಿನ ಮಾದರಿಯ ಕಿರೀಟ ಧರಿಸಿದ ಮಯಂಕ್ ಅಗರವಾಲ್ ನಾಯಕತ್ವದ ತಂಡಕ್ಕೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ₹50 ಲಕ್ಷ ಬಹುಮಾನ ನೀಡಿ ಸನ್ಮಾನಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಜೆ ನಡೆದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತಂಡದ ಆಟಗಾರರನ್ನು ಸನ್ಮಾನಿಸಿ ಬಹುಮಾನದ ಚೆಕ್ ಪ್ರದಾನ ಮಾಡಲಾಯಿತು.

ರಣಜಿ ಟ್ರೋಫಿ (23 ವಿಕೆಟ್) ಮತ್ತು ವಿಜಯ್ ಹಜಾರೆ (18 ವಿಕೆಟ್) ಟ್ರೋಫಿ ಟೂರ್ನಿಗಳಲ್ಲಿ ಕರ್ನಾಟಕದ ಪರವಾಗಿ ಅತ್ಯಧಿಕ ವಿಕೆಟ್ ಪಡೆದ ವಾಸುಕಿ ಕೌಶಿಕ್ ಅವರನ್ನೂ ಗೌರವಿಸಲಾಯಿತು. ಆಲ್‌ರೌಂಡರ್ ಧೀರಜ್ ಜೆ ಗೌಡ ಅವರು 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಟೂರ್ನಿಯಲ್ಲಿ ಅತ್ಯಧಿಕ ರನ್ ಸ್ಕೋರರ್ ಮತ್ತು ವಿಕೆಟ್ ಪಡೆದ ಬೌಲರ್ ಗೌರವ ಗಳಿಸಿದರು. ವಿನೂ ಮಂಕಡ್ ಟೂರ್ನಿಯಲ್ಲಿ ಅತ್ಯಧಿಕ ವಿಕೆಟ್ ಪಡೆದ ಪ್ರಶಸ್ತಿಯೂ ಅವರಿಗೆ ಒಲಿಯಿತು.

ಕಳೆದ ರಣಜಿ ಟೂರ್ನಿಯಲ್ಲಿ ಮಿಂಚಿದ್ದ ಬ್ಯಾಟರ್ ಆರ್. ಸ್ಮರಣ್ ಹಾಗೂ ವಿಜಯ್ ಹಜಾರೆ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ (651) ಮಯಂಕ್ ಅಗರವಾಲ್ ಅವರಿಗೆ ಪ್ರಶಸ್ತಿ ನೀಡಲಾಯಿತು. ವಿವಿಧ ಟೂರ್ನಿಗಳಲ್ಲಿ ಗೆದ್ದ ಶಾಲಾ ತಂಡಗಳು ಮತ್ತು ಕ್ಲಬ್ ತಂಡಗಳಿಗೂ ಈ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಯಿತು. 16 ವರ್ಷದೊಳಗಿನವರ ವಿಜಯ್ ಮರ್ಚಂಟ್ ಟ್ರೋಫಿ ಟೂರ್ನಿಯಲ್ಲಿ ಅಧಿಕ ರನ್ ಗಳಿಸಿದ ಅನ್ವಯ್ ದ್ರಾವಿಡ್ ಅವರನ್ನೂ ಗೌರವಿಸಲಾಯಿತು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಖಜಾಂಚಿಯಾಗಿ ಆಯ್ಕೆಯಾಗಿರುವ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಮಹಿಳೆಯರ 19 ವರ್ಷದೊಳಗಿನವರ ಟಿ20 ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿಯಾಗಿದ್ದ ನಿಕಿ ಪ್ರಸಾದ್, ಆಟಗಾರ್ತಿ ಮಿಥಿಲಾ ವಿನೋದ್ ಮತ್ತು ವಿಡಿಯೊ ಅನಾಲಿಸ್ಟ್ ಮಾಲಾ ರಂಗಸ್ವಾಮಿ ಅವರಿಗೆ ತಲಾ ₹ 2 ಲಕ್ಷ ನೀಡಿ ಗೌರವಿಸಲಾಯಿತು.



ಕಾರ್ಯಕ್ರಮದಲ್ಲಿ ಮಾಲಾ ರಂಗಸ್ವಾಮಿ, ನಿಕಿ ಪ್ರಸಾದ್, ಮಿಥಿಲಾ ವಿನೋದ್ ಅವರನ್ನು ಗೌರವಿಸಲಾಯಿತು. ಜಯಶ್ರೀ, ಸಂಜಯ್ ಪಾಲ್, ಕೆ.ಶ್ರೀರಾಮ್, ಎಂ.ಎಸ್. ವಿನಯ್ ಇದ್ದರು



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ವಿಜಯ್ ಹಜಾರೆ ಟ್ರೋಫಿ ಗೆದ್ದ ಕರ್ನಾಟಕ ತಂಡವನ್ನು ಗೌರವಿಸಲಾಯಿತು ಪ್ರಜಾವಾಣಿ ಚಿತ್ರಗಳು

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ವಿಜೇತರು

ಟ್ರೋಫಿ/ಟೂರ್ನಿ	ಅತ್ಯಧಿಕ ರನ್ ಗಳಿಸಿದವರು	ಅತ್ಯಧಿಕ ವಿಕೆಟ್ ಗಳಿಸಿದವರು
ರಣಜಿ ಟ್ರೋಫಿ	ಆರ್. ಸ್ಮರಣ್	ವಿ. ಕೌಶಿಕ್
ವಿಜಯ್ ಹಜಾರೆ	ಮಯಂಕ್ ಅಗರವಾಲ್	ವಿ. ಕೌಶಿಕ್
ಸೈಯದ್ ಮುಷ್ತಾಕ್ ಅಲಿ	ಕೆ.ಎಲ್. ಶ್ರೀಜಿತ್	ಶ್ರೇಯಸ್ ಗೋಪಾಲ್
ಕರ್ನಲ್ ಸಿ.ಕೆ. ನಾಯ್ಡು (23 ವರ್ಷದೊಳಗಿನವರು)	ಮೆಕ್ನಿಲ್ ಹ್ಯಾಡ್ಲಿ ನರೋನಾ	ಕೆ. ಶಶಿಕುಮಾರ್
23 ವರ್ಷದೊಳಗಿನವರ ರಾಜ್ಯ 'ಎ' ಏಕದಿನ ಟ್ರೋಫಿ	ಪ್ರಖರ್ ಚತುರ್ವೇದಿ	ಮನ್ವಂತ್ ಕುಮಾರ್ ಎಲ್
ಕೂಚ್ ಬಿಹಾರ್ ಟ್ರೋಫಿ	ಧೀರಜ್ ಗೌಡ	ಧೀರಜ್ ಗೌಡ
ವಿಜಯ್ ಮರ್ಚಂಟ್	ಅನ್ವಯ್ ದ್ರಾವಿಡ್	ಧ್ಯಾನ್ ಹಿರೇಮಠ
ಸೀನಿಯರ್ ಮಹಿಳಾ ಏಕದಿನ	ವೃಂದಾ ದಿನೇಶ್	ಮೋನಿಕಾ ಸಿ ಪಟೇಲ್
ಸೀನಿಯರ್ ಮಹಿಳಾ ಟಿ20	ವೃಂದಾ ದಿನೇಶ್	ಎಂ. ಪೂಜಾಕುಮಾರಿ
23 ವರ್ಷದೊಳಗಿನವರ ಮಹಿಳಾ ಏಕದಿನ	ಮಿಥಿಲಾ ವಿನೋದ್	ಪಿ. ಸಲೋನಿ
23 ವರ್ಷದೊಳಗಿನವರ ಮಹಿಳಾ ಟಿ20	ಕೃಷಿಕಾ ರೆಡ್ಡಿ	ಪಿ.ಸಲೋನಿ
19 ವರ್ಷದೊಳಗಿನವರ ಏಕದಿನ ಟ್ರೋಫಿ	ಲಾವಣ್ಯ ಚಲನಾ	ವೇದಾ ವರ್ಷಿಣಿ
19 ವರ್ಷದೊಳಗಿನವರ ಟಿ20	ಲಾವಣ್ಯ ಚಲನಾ	ಶ್ರೀನಿಧಿ ರೈ
15 ವರ್ಷದೊಳಗಿನವರು ಏಕದಿನ	ಲಿಯಾಂಕಾ ಶೆಟ್ಟಿ	ಅನ್ವಿತಾ ನರೇಂದ್ರ ಮೈಸೂರು
ಜಿ. ಕಸ್ತೂರಿರಂಗನ್ ಟ್ರೋಫಿ ಟಿ20	ಆದರ್ಶ್ ಪ್ರಜ್ವಲ್ (ಸೋಷಿಯಲ್ ಕ್ರಿಕೆಟರ್ಸ್)	ಮೇಲು ಕ್ರಾಂತಿ ಕುಮಾರ್ (ಬೆಂಗಳೂರು ಒಕೆಷನಲ್ಸ್)

ಬುಲ್ಸ್‌ಗೆ ಮಣಿದ ತಲೈವಾಸ್

ಚೆನ್ನೈ (ಪಿಟಿಐ): ಉತ್ತಮ ಹೋರಾಟ ಕಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಆಲ್‌ರೌಂಡರ್ ಅಲಿರೇಜಾ ಮಿರ್‌ಝೈನ್ ಅವರ ಸೂಪರ್ ಟೆನ್ ನೆರವಿನಿಂದ ಬೆಂಗಳೂರು ಬುಲ್ಸ್ ತಂಡ 33–29 ಪಾಯಿಂಟ್‌ಗಳಿಂದ ತಮಿಳ್ ತಲೈವಾಸ್ ತಂಡವನ್ನು ಸೋಲಿಸಿತು. ಬುಲ್ಸ್‌ಗೆ ಇದು 12 ಪಂದ್ಯಗಳಲ್ಲಿ ಆರನೇ ಜಯ.

ಅಲಿರೇಜಾ (10 ಪಾಯಿಂಟ್) ರೇಡಿಂಗ್‌ನಲ್ಲಿ ಮಿಂಚಿದರೆ, ರಕ್ಷಣೆಯಲ್ಲಿ ಸಂಜಯ್ ಧುಲ್ (5) ಮತ್ತು ದೀಪಕ್ ಸರ್ಕಾರ್ (4) ಅವರು ಉಪಯುಕ್ತ ಪಾಯಿಂಟ್ಸ್ ತಂದುಕೊಟ್ಟರು.

ತಲೈವಾಸ್ ಪರ ನಾಯಕ ಅರ್ಜುನ್ ದೇಶ್ವಾಲ್ 9 ಪಾಯಿಂಟ್ಸ್ ಗಳಿಸಿದರು. ರೋಹಿತ್ ಗೋಪಾಲ್‌ಲಾಲ್ ಬೇನಿವಾಲ್ 6 ಪಾಯಿಂಟ್ಸ್ ಸಂಪಾದಿಸಿದರು.

ಮೊದಲಾರ್ಧದಲ್ಲಿ ಲೀಡ್ ಬದಲಾಗುತ್ತ ಹೋಯಿತು. 6–2 ಮುನ್ನಡೆಯಲ್ಲಿದ್ದ ಬುಲ್ಸ್, ನಂತರ 6–8 ಹಿನ್ನಡೆ ಕಂಡಿತು. ಮತ್ತೆ ಲೀಡ್ ಎರಡು ಸಲ ಬದಲಾಗಿ ವಿರಾಮದ ವೇಳೆ 18–17 ಪಾಯಿಂಟ್‌ಗಳಿಂದ ತಲೈವಾಸ್ ಒಂದು ಪಾಯಿಂಟ್ ಮುನ್ನಡೆ ಪಡೆದಿತ್ತು.

ಟೈಟನ್ಸ್‌ಗೆ ಜಯ: ಇದಕ್ಕೆ ಮೊದಲು ತೆಲುಗು ಟೈಟನ್ಸ್ ತಂಡ 40–35ರಿಂದ ಯುಪಿ ಯೋಧಾಸ್ ತಂಡವನ್ನು ಸೋಲಿಸಿತು. ಭರತ್ (14) ಅವರು ಗೆಲುವಿನಲ್ಲಿ ಮಿಂಚಿದರು. ಯೋಧಾಸ್ ಪರ ಭವಾನಿ ರಜಪೂತ್ (16) ಹೋರಾಟ ತೋರಿದರು.

ಸೈಕ್ಲಿಂಗ್: ಬಾಗಲಕೋಟೆ, ವಿಜಯಪುರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಾಗಲಕೋಟೆ ಹಾಗೂ ವಿಜಯಪುರದ ಸೈಕ್ಲಿಸ್ಟ್‌ಗಳು ಭಾನುವಾರ ಇಲ್ಲಿ ಮುಕ್ತಾಯಗೊಂಡ 16ನೇ ರಾಜ್ಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ ಮಾಸ್ಡ್ ಸ್ಟಾರ್ಟ್‌ನಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಪುರುಷರ ವಿಭಾಗದಲ್ಲಿ ಬಾಗಲಕೋಟೆ ತಂಡ 27 ಅಂಕ ಗಳಿಸಿ ಟ್ರೋಫಿ ಗೆದ್ದುಕೊಂಡಿತು. ವಿಜಯಪುರ ತಂಡ 16 ಅಂಕಗಳೊಂದಿಗೆ ರನ್ನರ್‌ಅಪ್ ಆಯಿತು.

ಮಹಿಳೆಯರ ವಿಭಾಗದಲ್ಲಿ 19 ಅಂಕಗಳ ಮೂಲಕ ವಿಜಯಪುರ ತಂಡ ಚಾಂಪಿಯನ್ ಆದರೆ, 11 ಅಂಕ ಪಡೆದ ಗದಗ ತಂಡ ರನ್ನರ್‌ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಫಲಿತಾಂಶ: 16 ವರ್ಷದೊಳಗಿನ ಬಾಲಕರು: 20 ಕಿ.ಮೀ: ಬಸವರಾಜ ಕರಡ್ಡಿ (ವಿಜಯಪುರ)–1, ವೀರೇಶ ಬೆಳಗಲಿ (ಯಾದಗಿರಿ)–2, ಪುನೀತ್ ಬಿರಾದಾರ (ಕ್ರೀಡಾ ನಿಲಯ, ವಿಜಯಪುರ)–3.

23 ವರ್ಷದೊಳಗಿನವರು: 80 ಕಿ.ಮೀ: ವರುಣ ಶಿರೂರ (ಬಾಗಲಕೋಟೆ)–1, ಮನೋಜ್ ಬಾಟಿ (ಯಾದಗಿರಿ)–2, ಮಲ್ಲಿಕಾರ್ಜುನ ಯಾದವಾಡ (ಬಾಗಲಕೋಟೆ)–3.

ಪುರುಷರು: 80 ಕಿ.ಮೀ: ಸುಜಲ್ ಜಾಧವ (ವಿಜಯಪುರ)–1, ಶ್ರೀಶೈಲ ವೀರಾಪುರ (ಬಾಗಲಕೋಟೆ)–2, ವೈಶಾಖ ಕೆ.ವಿ. (ಮೈಸೂರು)–3.

18 ವರ್ಷದೊಳಗಿನ ಬಾಲಕರು: 3 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್: ಮಹೇಶ ಬಡಿಗೇರ (ಬಾಗಲಕೋಟೆ)–1, ಹಣಮಂತ ಹುಲ್ಲಿಕೇರಿ (ಯಾದಗಿರಿ)–2, ಶ್ರೀನಿವಾಸ ರಜಪೂತ (ಕ್ರೀಡಾ ನಿಲಯ, ವಿಜಯಪುರ)–3.

14 ವರ್ಷದೊಳಗಿನ ಬಾಲಕರು: 1 ಲ್ಯಾಪ್ ಮಾಸ್ಡ್ ಸ್ಟಾರ್ಟ್: ಸಿದ್ಧಲಿಂಗ ಜಕ್ಕಣ್ಣವರ (ಬಾಗಲಕೋಟೆ)–1, ಅರ್ಜುನ ಕಲಾಲ (ಧಾರವಾಡ)–2, ಬಸವರಾಜ ಯಳಮೇಟಿ (ಕ್ರೀಡಾ ನಿಲಯ, ವಿಜಯಪುರ)–3.

ಮಹಿಳೆಯರು: 40 ಕಿ.ಮೀ: ಗ್ಲೆಯೋನಾ ಡಿಸೋಜಾ (ಉಡುಪಿ)–1, ನಂದಾ ಚಿಚಖಂಡಿ (ಬಾಗಲಕೋಟೆ)–2, ಕೀರ್ತಿ ನಾಯಕ (ಧಾರವಾಡ)–3.

18 ವರ್ಷದೊಳಗಿ ಬಾಲಕಿಯರು: 1 ಲ್ಯಾಪ್ ಮಾಸ್ಡ್ ಸ್ಟಾರ್ಟ್: ಛಾಯಾ ನಾಗಶೆಟ್ಟಿ (ವಿಜಯಪುರ)–1, ಕೋಕಿಲಾ ಚವ್ಹಾಣ (ವಿಜಯಪುರ)–2, ಜ್ಯೋತಿ ರಾಠೋಡ (ಕ್ರೀಡಾ ನಿಲಯ, ವಿಜಯಪುರ)–3.

16 ವರ್ಷದೊಳಗಿನ ಬಾಲಕಿಯರು: 1 ಲ್ಯಾಪ್ ಮಾಸ್ಡ್ ಸ್ಟಾರ್ಟ್: ದೀಪಿಕಾ ಫಡತಾರೆ (ವಿಜಯಪುರ)–1, ಮಧು ಬೆಂಡಿಗೇರಿ (ಕ್ರೀಡಾ ನಿಲಯ, ಬಾಗಲಕೋಟೆ)–2, ಗಾಯತ್ರಿ ಕಿತ್ತೂರ (ಬಾಗಲಕೋಟೆ)–3.

14 ವರ್ಷದೊಳಗಿನ ಬಾಲಕಿಯರು: 1 ಲ್ಯಾಪ್ ಮಾಸ್ಡ್ ಸ್ಟಾರ್ಟ್: ಪ್ರಿಯಾಂಕ ಲಮಾಣಿ (ಕ್ರೀಡಾ ನಿಲಯ, ಗದಗ)–1, ವಿದ್ಯಾ ಲಮಾಣಿ (ಕ್ರೀಡಾ ನಿಲಯ, ಬಾಗಲಕೋಟೆ)–2, ಭಾಗ್ಯ ಮೇಲ್ಮನಿ (ಕ್ರೀಡಾ ನಿಲಯ, ಗದಗ)–3.